Digitized by eGangotri and Sarayu Trust. Funding by of IKS

ಓಂ

ಷಟ್ಸ್ಥಲವಿದ್ಯಾ

ಎಸ್. ಆರ್. ಕರಿಬಸವಶಾಸ್ತ್ರಿಗಳಿಂದ

ಬರೆಯಲ್ಪಟ್ಟು

ವೈ. ವಿರೂಪಾಕ್ಷಯ್ಯನವರಿಂದ

ಪ್ರಕಟಿಸಲ್ಪಟ್ಟಿತು

(ದ್ವಿತೀಯ ಮುದ್ರಣ)

ಮೈಸೂರು :
ಕಾರ್ಣ ಎಲೆಕ್ಟ್ರಿಕ್ ಪ್ರೆಸ್

(All Rights Reserved)

1923

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

R61 1126
33F3

N R Karibasav Shastri
kshatathal vidya.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of IKS

RG1 1126
33F3

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

R61 1126
33F3

N R Karibasav Shastri
kshatathal vidya.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

[illegible] ಲೋಕದಲ್ಲಿ ಅನುಭವಿಸಲ್ಪಡುವ ಸುಖಗಳೆಲ್ಲಾ ಐಹಿಕಸುಖಗಳೆಂದು ಹೇಳ [illegible] ನಂತರ ಅನುಭವಿಸತಕ್ಕ ಸುಖಗಳು ಪಾರಲೌಕಿಕಗಳು. ಅವನ್ನು [illegible] ಉದ್ದೇಶದಿಂದಲೇ ಮತಗಳು ಸ್ಥಾಪಿಸಲ್ಪಟ್ಟಿರುವುವು. ಅಂಥ ಪರಗತಿಯನ್ನು ಕುರಿತು ವಿಚಾರಮಾಡಿ ಸ್ಥಾಪಿಸಿರತಕ್ಕ ಮಾರ್ಗಗಳು ಒಂದೊಂದು ಮತಕ್ಕೆ ಒಂದೊಂದು ವಿಧಗಳಾಗಿರುವುವು. ಹಾಗೆ ಮಾರ್ಗಭೇದಗಳುಂಟಾಗಿರುವುದರಿಂದಲೇ ಮತಭೇದ ವ್ಯವಹಾರವುಂಟಾಗಿರುವುದು. ವೈದಿಕಗಳಾದ ಆರ್ಯಮತಗಳೊಳಗೆ ದ್ವೈತಾದ್ವೈತವಿಶಿಷ್ಟಾದ್ವೈತ ಮತಗಳು ಜೀವಸ್ವರೂಪ, ಆತ್ಮಸ್ವರೂಪ, ಮುಕ್ತಿಸ್ವರೂಪ ತತ್ಪ್ರಾಪ್ತಿಮಾರ್ಗ, ಮೊದಲಾದುವುಗಳ ವಿವರಣದಲ್ಲಿ ಒಂದಕ್ಕಿಂತ ಮತ್ತೊಂದು ವೈಲಕ್ಷಣ್ಯವನ್ನು ಪಡೆದುಕೊಂಡು ಭಿನ್ನಭಿನ್ನಗಳಾಗಿರುವಂತೆಯೇ ವೀರಶೈವ ಮತವಾದರೂ ಆ ಮತಗಳಿಗಿಂತ ಭಿನ್ನವಾದ ಮತ್ತೊಂದು ವಿಧದ ವೈಲಕ್ಷಣ್ಯವನ್ನು ಪಡೆದ ಮತವಾಗಿರುವುದು. ವೈದಿಕಗಳಾದ ಇತರ ಮತಗಳು ಬ್ರಹ್ಮಸೂತ್ರಗಳ ಮೇಲಿನ ಭಾಷ್ಯವನ್ನವಲಂಬಿಸಿ ಸ್ವತಂತ್ರಮತಗಳಾಗಿರುವಂತೆಯೇ ವೀರಶೈವಮತವು ಸಹ ತನ್ನ ಪ್ರಕ್ರಿಯೆಗೆ ಅನುಗುಣವಾದ ಅದೇ ಬ್ರಹ್ಮಸೂತ್ರ ಭಾಷ್ಯಾಧಾರದಿಂದ ಸ್ವತಂತ್ರವಾಗಿರುವುದು.

ವೀರಶೈವಮತದಲ್ಲಿ :—ಪರಬ್ರಹ್ಮನು—ಸ್ವಭಾವನಿರ್ಮಲದೃಕ್ಕ್ರಿಯಾಲಕ್ಷಣಶಕ್ತಿಯುಕ್ತನು. ಆತನು ಸೃಷ್ಟಿಸ್ಥಿತಿಸಂಹಾರತಿರೋಭಾವಾನುಗ್ರಹವೆಂಬ ಪಂಚಕೃತ್ಯಗಳಿಗೆ ಕರ್ತನೂ, ಸರ್ವಗತನೂ ನಿತ್ಯಮುಕ್ತನೂ, ಉಪಾಸ್ಯನೂ, ಜಗದುತ್ಪತ್ತಿಗೆ ಉಪಾದಾನವಾದ ಮಾಯೆಗೂ ಜಡರಾದ ಆತ್ಮರುಗಳಿಗೂ ಪ್ರೇರಕನೂ, ಅಮೂರ್ತನೂ ಆಗಿರುವನು. ಆ ಈಶ್ವರನಿಗೆ ಜ್ಞಾನ ಕ್ರಿಯಾಶಕ್ತಿಮೂರ್ತಿಯ ಉಪಚಾರದಿಂದಲೇ ಅಚಲಮೂರ್ತಿತ್ವವು ಸಿದ್ಧವಾಗಿರುವುದಲ್ಲದೆ ಮತ್ತೆ ಬೇರೆ ಸ್ವಭಾವಸಿದ್ಧವಾದ ಮೂರ್ತಿಯು ಇಲ್ಲ. ಆ ಉಪಚಾರಸಿದ್ಧಮೂರ್ತಿತ್ವವು ಸಾಧಕರ ಧ್ಯಾನವಿಷಯಕವಾದುದು. ಇಂತಪ್ಪ ಪರಬ್ರಹ್ಮನೇ ಲಿಂಗಶಬ್ದದಿಂದ ವ್ಯವಹರಿಸಲ್ಪಡುವನು.

ಶಕ್ತಿಯು :—ಚಂದ್ರಿಕೆಯಲ್ಲಿ ತಂಪೂ, ಪುಷ್ಪದಲ್ಲಿ ಗಂಧವೂ, ಕ್ಷೀರಸಮುದ್ರದಲ್ಲಿ ಮಾಧುರ್ಯವೂ ಎಡೆಬಿಡದೆ ಇರುವಂತೆ ಆ ಈಶ್ವರನಲ್ಲಿ ಶಕ್ತಿಯು ಅವಿನಾಭೂತವಾಗಿರುವುದು. ಈಶ್ವರನು ಅಮೂರ್ತ (ಅಶರೀರಿ) ನಾದರೂ, ಅಮೂರ್ತವಾದ ಕಾಲವು ಫಲಸಾಧಕವಾಗುವಂತೆ ತನ್ನ ಇಚ್ಛಾಶಕ್ತಿರೂಪವಾದ ಕರಣದಿಂದ ಆತನು ಜಗತ್ಕಾರ್ಯದಲ್ಲಿ ಕರ್ತೃವಾಗುವನು. ಉಪಾದಾನರೂಪನಾದ ಆ ಈಶ್ವರನಲ್ಲಿ ಅವಿನಾಭೂತವಾಗಿ ಲೀನವಾಗಿರುವ ಶಕ್ತಿಯು ಆತನ ಸಂಕಲ್ಪಮಾತ್ರದಿಂದ ಸೃಷ್ಟ್ಯಾದಿ ಕರ್ಮವನ್ನು ಮಾಡುವುದು. ಈ ಶಕ್ತಿಯೇ ಮಹಾ ಮಾಯೆಯೆನಿಸಿಕೊಳ್ಳುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಜೀವನು :—ಪುರ್ಯಷ್ಟಕ ದೇಹಯುಕ್ತನು, ಕಿಂಚಿದ್ಜ್ಞನು, ಕರ್ತೃಸಹಿತನು, ದೇಹಭಿನ್ನನು, ನಿತ್ಯನು, ಪ್ರತಿ ಶರೀರದಲ್ಲಿಯೂ ಭಿನ್ನನಾಗಿರುವವನು, ಮಲಸಹಿತನು; ಮತ್ತೂ „ನಾಭುಕ್ತಂಕ್ಷೀಯತೇಕರ್ಮ" ಎಂಬ ವಚನದಂತೆ ಅನಾದಿಯಾದ ಕರ್ಮದ ಫಲವು ಭೋಗಿಸಿದಲ್ಲದೆ ಮುಗಿಯದಾದಕಾರಣ, ಅದನ್ನನುಭವಿಸಿ ಮುಕ್ತಿಯನ್ನು ಪಡೆಯುವುದಕ್ಕಾಗಿಯೇ ದೇಹವನ್ನಧಿಷ್ಠಿಸಿಕೊಂಡಿರುವವನು; ಮತ್ತೂ ಪಂಚಪಾಶಗಳಿಂದ ಬದ್ಧನಾದವನು. ಈ ಜೀವನೇ ಅಂಗಶಬ್ದದಿಂದ ವ್ಯವಹರಿಸಲ್ಪಡುವನು.

ದೀಕ್ಷೆ :—ಪೂರ್ವೋಕ್ತಲಕ್ಷಣಲಕ್ಷಿತನಾದ ಜೀವನಿಗೆ ಪಾಶವಿಮುಕ್ತಿ ಶಿವತ್ವ ವ್ಯಕ್ತಿಯನ್ನುಂಟುಮಾಡುವುದೇ „ದೀಕ್ಷೆ" ಯೆನಿಸಿಕೊಳ್ಳುವುದು. ಇದು ಶಿವಶಕ್ತಿರೂಪವಾದುದು. ಜೀವನು ಗುರುವಿನಿಂದ ಮಾಡಲ್ಪಡುವ ಅಂತಹ ದೀಕ್ಷೆಯನ್ನು ಹೊಂದುವುದರಿಂದ ಹುರಿದ ಬೀಜದಂತೆ ಅವನು ಮರಳಿ ಜನ್ಮವನ್ನು ತಾಳದಂತಾಗುವನು. ಅದುಕಾರಣವೇ ಈ ದೀಕ್ಷೆಯಿಂದ ಸಂಸ್ಕೃತನಾದ ಜೀವನು ಜೀವನ್ಮುಕ್ತನೆಂದು ಹೇಳಿಸಿಕೊಳ್ಳುವನು. ಆದರೂ ಆತನಿಗೆ ಪ್ರಾರಬ್ಧಕರ್ಮಾನುಭವವನ್ನು ಮಾಡಿ ಮುಗಿಸುವುದಕ್ಕೆ ಮಾತ್ರ ಆ ಜನ್ಮದ ಆಯುಃಪರಿಮಿತಿಯವರೆಗೂ ಶರೀರಸ್ಥಿತಿಯು ಉಂಟಾಗಿರುವುದು. ಶ್ರೀಗುರುಕೃತವಾದ ದೀಕ್ಷೆಯಿಂದ ದೇಹತ್ರಯದಲ್ಲಿ ಇಷ್ಟಪ್ರಾಣಭಾವ ಲಿಂಗತ್ರಯವನ್ನೈದಿದ ತಾನು ಆ ತ್ರಿವಿಧಲಿಂಗದಲ್ಲಿ ಪೂಜಾಧ್ಯಾನಮನೋಲಯಗಳುಳ್ಳವನಾಗಿ (ಜ್ಞಾನಕ್ರಿಯಾಯುಕ್ತನಾಗಿ) ಇರುವುದರಿಂದಲೇ ದೇಹಾವಸಾನಂತರ ಮುಕ್ತನಾಗುವನು.

ಮುಕ್ತಿಯು :—ಸಾಲೋಕ್ಯಾದಿ ಚತುರ್ವಿಧ ಮುಕ್ತಿಗಳೂ ಅಧಿಕಾರಿಭೇದದಿಂದ ಹೇಳಲ್ಪಟ್ಟಿವೆ. ಶಿವಸಮಾನತಾರೂಪಸಾಯುಜ್ಯವೇ ಪರತರ ಮುಕ್ತಿಯೆಂಬುದು ಸಿದ್ಧಾಂತವು.

ತತ್ತ್ವಗಳು :—ಶಿವಾದಿ ಪೃಥಿವ್ಯಂತವಾದ ೩೬ ತತ್ತ್ವಗಳು ಈ ಮತದಲ್ಲಿ ಪ್ರತಿಪಾದಿತಗಳಾಗಿರುವುವು.

(ಮುಕ್ತಿಸಾಧನ)

„ವಿದ್ಯಾತಃಪರಿಮುಚ್ಯಂತಿ ಸರ್ವೇ ; ಬ್ರಹ್ಮವಿದಾಪ್ನೋತಿಪರಂ" ಎಂಬ ಉಪನಿಷದ್ವಚನಗಳಿಂದಲೂ, „ವಿದ್ಯಾಯಾಃಪುರುಷಾರ್ಥಸ್ಯಹೇತುತಾ" ಎಂಬ ಶಾಸ್ತ್ರವಚನದಿಂದಲೂ ಮುಕ್ತಿಗೆ ಬ್ರಹ್ಮವಿದ್ಯೆಯೇ ಸಾಧಕವೆಂಬುದು ಸರ್ವಸಾಮಾನ್ಯ ವಿಧಿಯಾಗಿರುತ್ತದೆ. ಈ ವೀರಶೈವ ಮತದಲ್ಲಾದರೋ ಷಟ್ಸ್ಥಲವಿದ್ಯೆಯೇ ಬ್ರಹ್ಮವಿದ್ಯೆಯೆನಿಸಿಕೊಳ್ಳುತ್ತದೆ. ಇದು ಕಾಮ್ಯಕರ್ಮದ ಕರಾಟವಲ್ಲ. ಅನಂತದೈವೋಪಾಸನೆಯ ಜಂಜಾಟವಲ್ಲ. ಶಿವೈಕದೇವೋಪಾಸನೆಯ ಪರಮರಹಸ್ಯ. ಮುಕ್ತಿಪ್ರಾಪ್ತಿಗೆ ಸುಕರವಾದ ಸನ್ಮಾರ್ಗ. ಕ್ರಿಯಾಜ್ಞಾನಗಳ ತವರು. ಭಕ್ತಿಜ್ಞಾನ ವೈರಾಗ್ಯಗಳ ನಿಧಿ. ಸಕ

..BRARY
Jangamwadi Math, Varanasi
No. 1126

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಚ್ಲೋಪನಿಷತ್ಪರಮನುಸಾರಸರ್ವಸ್ವ. ಈ ಮಹಾಶಾಸ್ತ್ರದಲ್ಲಿ ಪ್ರತಿಪಾದಿತವಾಗಿರುವ ಲಿಂಗಾಂಗಸಾಮರಸ್ಯಜ್ಞಾನವು ಜಗತ್ತಿನಲ್ಲಿ ಮತ್ತಾವ ಮತದಲ್ಲೂ ದೊರೆಯುವ ಹಾಗಿಲ್ಲ. ವೀರಶೈವೀಯ ಧರ್ಮಗಳೆಲ್ಲವೂ ಈ ಷಟ್ಸ್ಥಲವಿದ್ಯೆಗೆ ಅಂಗವಾದುವುಗಳು. ಮಾನವನಿಗೆ ಜೀವತ್ವವಳಿದು ಮುಕ್ತತ್ವವುಂಟಾಗಬೇಕಾದರೆ ಅವನು ಗಮಿಸತಕ್ಕ ಮಾರ್ಗವಾವುದೋ ಅದು ಕ್ರಮವಾಗಿ ಇದರಲ್ಲಿ ವಿವರಿಸಲ್ಪಟ್ಟಿರುವುದು. ಲಿಂಗ (ಬ್ರಹ್ಮ) ಅಂಗ (ಜೀವ) ಇವರೀರ್ವರ ಸಾಮರಸ್ಯಜ್ಞಾನವು ಈ ಷಟ್ಸ್ಥಲಾಚಾರಾನುಸರಣದಿಂದ ಸಿದ್ಧಿಸುವುದು. ಈ ಶಾಸ್ತ್ರೋಕ್ತವಾದ ಸಾಧನೆಯಿಂದ ಸಂಪನ್ನನಾದವನು ಆಚರಿಸತಕ್ಕ ಮಾರ್ಗಗಳೇ ಯೋಗ್ಯತಾನುಗುಣವಾಗಿ ಆರುಭಾಗ ಮಾಡಲ್ಪಟ್ಟು ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರುಸ್ಥಲಗಳೆಂದು ವ್ಯವಹರಿಸಲ್ಪಟ್ಟಿರುವುವು. ಆ ಸ್ಥಲಗಳೇ ಅಂತರ್ವಿಭಾಗಗೊಂಡು ಪಿಂಡಾದಿ ಜ್ಞಾನಶೂನ್ಯಾಂತಗಳಾದ ನೂರೊಂದು ಸ್ಥಲಗಳಾಗಿ ನಿರ್ಣಯಿಸಲ್ಪಟ್ಟಿರುವುವು. ಮುಕ್ತಿಗೆ ಸಾಧನವಾಗಿರುವ ನಿರ್ವಾಣ ದೀಕ್ಷೆಯನ್ನು ಪಡೆಯುವುದಕ್ಕಾಗಿ ಜನ್ಮಜನ್ಮಾಂತರಾರ್ಜಿತವಾದ ಸುಕೃತದ ಪರಿಪಾಕದಿಂದಲೂ ಶಿವಾನುಗ್ರಹದಿಂದಲೂ ಪ್ರಾಪ್ತವಾದ ಚರಮಶರೀರವನ್ನು ಹೊಂದಿರುವವನೇ ವೀರಶೈವ ಸಿದ್ಧಾಂತದ ಪ್ರಕಾರ ಮೊದಲನೆಯ ಪಿಂಡಸ್ಥಲ ಸಂಪನ್ನನೆಂದು ಹೇಳಲ್ಪಡುವನು. ಬಳಿಕ ಉತ್ತರೋತ್ತರ ಧರ್ಮಾನುಸರಣದಿಂದ ಮಹಾಲಿಂಗದಲ್ಲಿ ಮನೋಲಯವನ್ನೈದಿ, ಸ್ವಸ್ವರೂಪ ಸಾಕ್ಷಾತ್ಕಾರವನ್ನೈದಿದವನು ೧೦೧ ನೆಯದಾದ ಜ್ಞಾನಶೂನ್ಯ ಸ್ಥಲವನ್ನೈದಿದವನಾಗಿ ಮುಕ್ತಿಯಂ ಪಡೆಯುವನು.

ಈ ಏಕೋತ್ತರಶತಸ್ಥಲವಿಚಾರವು ಶಿವಾಗಮಗಳಲ್ಲೂ ಸಿದ್ಧಾಂತಶಿಖಾಮಣಿ, ಕೈವಲ್ಯಸಾರ, ಏಕೋತ್ತರಶತಸ್ಥಲೀ, ವೀರಶೈವಾನಂದಚಂದ್ರಿಕೆ, ಅನುಭವಸೂತ್ರ ಮೊದಲಾದ ಅನೇಕ ಸಂಸ್ಕೃತ ಗ್ರಂಥಗಳಲ್ಲಿಯೂ ವಿಸ್ತಾರವಾಗಿ ಹೇಳಲ್ಪಟ್ಟಿದೆ. ಕನ್ನಡಿಗರಿಗೆ ಅದನ್ನು ಸಂಗ್ರಹವಾಗಿ ತಿಳುಹಿಸುವ ಉದ್ದೇಶದಿಂದ, ಒಂದೆರಡು ಗ್ರಂಥಗಳು ಈಚೆಗೆ ಕೆಲರಿಂದ ಬರೆಯಲ್ಪಟ್ಟಿದ್ದರೂ, ಅವು ೧೦೧ ಸ್ಥಲಗಳ ವಿವರಣೆಯನ್ನು ಮಾಡುವ ಉತ್ತರಭಾಗದಂತಿರುವುವು. ಆದಕ್ಕೆ ಪೂರ್ವಭಾಗದಂತಿರುವ ಷಟ್ಸ್ಥಲದ ಮುಖ್ಯ ವಿಷಯಗಳನ್ನು ಸಂಗ್ರಹಿಸಿ ಬರೆಯುವುದು ಅವಶ್ಯಕವಾಗಿ ತೋರಿದುದರಿಂದ ಈ ಚಿಕ್ಕದಾದ ನಿಬಂಧವು ಬರೆಯಲ್ಪಟ್ಟಿತು. ಸಂಸ್ಕೃತ ಗ್ರಂಥದಲ್ಲಿ ಷಟ್ಸ್ಥಲಗಳನ್ನು ತಿಳಿಯುವುದು ಸರ್ವರಿಗೂ ಸಾಧ್ಯವಲ್ಲದ ಪ್ರಯುಕ್ತವೂ ಪ್ರತಿಯೊಬ್ಬ ವೀರಶೈವನೂ ಷಟ್ಸ್ಥಲಗಳನ್ನು ತಿಳಿದುಕೊಳ್ಳಬೇಕಾಗಿರುವುದರಿಂದಲೂ ಈ ಕನ್ನಡಗ್ರಂಥವು ಮುದ್ರಣ ಮಾಡಿಸಲ್ಪಟ್ಟಿದೆ. ಪ್ರತಿಯೊಬ್ಬ ವೀರಶೈವನೂ ಈ ಗ್ರಂಥವನ್ನು ತರಿಸಿಕೊಂಡು ವಿಷಯಗಳನ್ನು ತಿಳಿದುಕೊಳ್ಳಬೇಕಾಗಿ ಸೂಚನೆಯು.

ಲೇಖಕ.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಓಂ

ಷಟ್‌ಸ್ಥಲವಿದ್ಯಾ.

ಚಿದ್ಘನಏಕೋವ್ಯಾಪೀನಿತ್ಯಸ್ಸತತೋದಿತಃಪ್ರಭುಶ್ಶಾಂತಃ |
ಜಯತಿಜಗದೇಕಬೀಜಂ ಸರ್ವಾನುಗ್ರಾಹಕಶ್ಶಂಭುಃ ||

ಸ್ಥಲಶಬ್ದಾರ್ಥವು.

ಮಹದಾದಿತತ್ತ್ವಗಳಿಗೆಲ್ಲಾ ಆಧಾರವಾಗಿ, ಪ್ರಕೃತಿಪುರುಷಾತ್ಮಕವಾದ ಜಗತ್ತಿಗೆಲ್ಲಾ ಜನ್ಮಸ್ಥಾನವಾಗಿ, ಸಚ್ಚಿದಾನಂದನೂ, ಅದ್ವಯನೂ, ಪರಬ್ರಹ್ಮನೂ ಎನಿಸಿಕೊಂಡ ಶಿವತತ್ವವೇ '' ಸ್ಥಲ'' ವೆಂಬುದಾಗಿ ಹೇಳಲ್ಪಡುವುದು. '' ಸ್ಥಲ'' ಎಂಬಲ್ಲಿ ಸ್ಥಕಾರವು-ಸ್ಥಾನವಾಚಕವೂ ಲಕಾರವು-ಲಯವಾಚಕವೂ ಆಗಿರುವುವು. ಚರಾಚರಾತ್ಮಕವಾದ ಪ್ರಪಂಚದ ಸ್ಥಿತಿಲಯಗಳಿಗೆಲ್ಲ ಆಧಾರವಾದುದರಿಂದಲೇ ಸ್ಥಲಶಬ್ದವು ಪರಬ್ರಹ್ಮವಾಚಕವಾಗಿರುವುದು. ಈ ವಿಷಯದಲ್ಲಿ ಪ್ರಮಾಣ-----

ಏಕಮೇವಪರಬ್ರಹ್ಮ ಸಚ್ಚಿದಾನಂದಲಕ್ಷಣಂ | ಶಿವತತ್ತ್ವಂ ಶಿವಾಚಾರ್ಯಾಸ್ಸ್ಥಲಮಿತ್ಯಾಹುರಾದರಾತ್ | ಸರ್ವೇಷಾಂಸ್ಥಾನಭೂತತ್ವಾಲ್ಲಯಭೂತತ್ವತಸ್ತತಃ | ತತ್ವಾನಾಂಮಹದಾದೀನಾಂಸ್ಥಲಮಿತ್ಯಭಿಧೀಯತೆ || ಯತ್ರಾದ್ದೌಸ್ಥೀಯತೆ ವಿಶ್ವಂ ಪ್ರಾಕೃತಂಪೌರುಷಂಯತಃ | ಲೀಯತೆಪುನರಂತೇಚ ಸ್ಥಲಂ ತತ್ಪ್ರೋಚ್ಯತೆತತಃ || ಸ್ಥಕಾರಸ್ಸ್ಥಾನವಾಚೀಸ್ಯಾಲ್ಲಕಾರೋಲಯವಾಚಕಃ | ತಯೋಃಕಾರಣಭೂತಂ ಯತ್ತದೇವ ಸ್ಥಲಮುಚ್ಯತೆ || ಅಧಿಷ್ಠಾನಂ ಸಮಸ್ತಸ್ಯಸ್ಥಾವರಸ್ಯಚರಸ್ಯಚ | ಜಗತೋಯದ್ಭವೇತ್ತತ್ತ್ವಂ ತದ್ಧಿವೈಸ್ಥಲಮುಚ್ಯತೆ || ಆಲಯಸ್ಸರ್ವಭೂತಾನಾಂ ಲೋಕಾನಾಂ ಸರ್ವಸಂಪದಾಂ | ಯದ್ಭವೇತ್ಪರಮಂಬ್ರಹ್ಮಸ್ಥಲಂ ತತ್ಪ್ರಾಹುರಕ್ಷರಂ || ಪರನಿರ್ವಾಣನಿಷ್ಠಾನಾಂ ಯದ್ಭವೇತ್ಪರಮಂಪದಂ | ತದಾಹುಸ್ಸ್ಥಲಮದ್ವೈತಂ ಶಿವಜ್ಞಾನೈಕತತ್ಪರಾಃ ||

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಇದರಿಂದ ಸಚ್ಚಿದಾನಂದ ಸ್ವರೂಪನಾದ ಪರಶಿವನೇ ಸ್ಥಲವೆಂದು ಸಿದ್ಧವಾಯಿತು. ಅಂತಹ ಪರಶಿವನೇ (ಸ್ಥಲವೇ) ತನ್ನಲ್ಲಿ ಲೀನವಾಗಿರುವ ಚಿಚ್ಛಕ್ತಿಯ ಸ್ಫುರಣದಿಂದ (ನಿಸ್ತರಂಗವಾಗಿ ಅಚಂಚಲವಾಗಿದ್ದ ಸಮುದ್ರಮಧ್ಯದಲ್ಲಿ ತೆರೆಗಳು ಹುಟ್ಟುವುದಕ್ಕೆ ಮುಂಚೆ ಸ್ವಲ್ಪ ಚಲನೆಯುಂಟಾಗಿ ತೆರೆಗಳೂ ಬುದ್ಬುದಗಳೂ ಮೂಡಿದಂತೆ) ಅದೊಂದು ವಸ್ತುವೇ ಎರಡಾಯಿತು. ಒಂದು ಲಿಂಗವೆಂತಲೂ, ಮತ್ತೊಂದು ಅಂಗವೆಂತಲೂ ವ್ಯವಹೃತವಾಯಿತು. ಲಿಂಗವೇ ಉಪಾಸ್ಯವಾಗಿಯೂ, ಅಂಗವೇ ಉಪಾಸಕವಾಗಿಯೂ, ನಿಂತುವು. ಆಕಾಶವೊಂದೇ ಆಗಿದ್ದರೂ ಉಪಾಧಿವಶದಿಂದ ಮಹಾಕಾಶ ಘಟಾಕಾಶವೆಂಬ ವ್ಯವಹರಣೆಗೊಳಗಾದಂತೆ ಮೇಲ್ಕಂಡ ಉಪಾಧಿವಶದಿಂದ ಸ್ಥಲವು ಭಿನ್ನರೂಪವಾಗಿ ವ್ಯವಹರಿಸಲ್ಪಡುತಿದ್ದರೂ ವಿಚಾರತಃ ನಿರುಪಾಧಿಸ್ಥಿತಿಯಲ್ಲಿ ಒಂದೇ ಎಂಬುದು ಸಿದ್ಧವು.

ಪ್ರ|| ಸ್ವಶಕ್ತಿಕ್ಷೋಭಮಾತ್ರೇಣ ಸ್ಥಲಂತದ್ದ್ವಿವಿಧಂಭವೇತ್ | ಏಕಂಲಿಂಗಸ್ಥಲಂಪ್ರೋಕ್ತ ಮನ್ಯದಂಗಸ್ಥಲಂಸ್ಮೃತಂ || ಲಿಂಗಾಂಗೋಪಾಧಿಭೇಧೇನ ದ್ವಿಧಾಭಿನ್ನಂಪರಸ್ಪರಂ | ಮಹಾನ್ ಘಟಪ್ರಭೇದೇನ ಯಥಾಕಾಶಃಪ್ರತೀಯತೆ || ಪ್ರತೀಯತೆತಥಾಪ್ಯೈವ ಸ್ಥಲಂಲಿಂಗಾಂಗಭೇದತಃ |. ಸ್ಥಲಂನಾಮಪರಂತತ್ವಂ ಶಿವರುದ್ರಾದಿಸಂಜ್ಞಿಕಂ || ಉಪಾಸ್ಯೋಪಾಸಕತ್ವೇನ ಸ್ವಯಮೇವದ್ವಿಧಾಭವೇತ್ | ಲಿಂಗಸ್ಥಲಮುಪಾಸ್ಯಂಸ್ಯಾ ದಂಗಸ್ಥಲಮುಪಾಸಕಂ || ಉಪಾಸ್ಯತ್ವಂತಥೋಪಾಸಕತ್ವಂಚ ಪರಮಶ್ಶಿವಃ |

ಲಿಂಗವೆಂದರೆ—"ಲೀನಂಗಚ್ಛತಿಯಸ್ಮಿನ್ ಸಾಮೂಯಾದುರ್ಘಟಕಾರಿಣೀ | ತಲ್ಲಿಂಗಮಿತಿಸನ್ಮಾತ್ರಂ ರೂಪ್ಯತೆಪಾರಮಾರ್ಥಿಕೈಃ ||

ಎಂಬ ಪ್ರಮಾಣಾನುಸಾರವಾಗಿ (ಲಿಂಗರೂಪೋಮಹಾದೇವಃ ಪೂರ್ಣಶ್ಚೈತನ್ಯಲಕ್ಷಣಃ) ಸಾಕ್ಷಾತ್ಪರಬ್ರಹ್ಮನೇ ಲಿಂಗವೆಂದು ಕರೆಯಲ್ಪಡುವನು. ಅಂಗವೆಂದರೆ—"ಅಮಿತಿಬ್ರಹ್ಮಸನ್ಮಾತ್ರಂಗಚ್ಛತೀತ್ಯಂಗಮುಚ್ಯತೆ | ರೂಪ್ಯತೇಂಗಮಿತಿಪ್ರಾಜ್ಞೈ ರಂಗತತ್ವವಿಚಿಂತಕೈಃ || ತಸ್ಮಾದಂಗಸ್ವರೂಪೋಸೌಜೀವಸ್ಸಂಸಾರವೃತ್ತಿಭಾಕ್ ||

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಎಂಬ ಪ್ರಮಾಣದಿಂದ ಅಂಗವೆಂದರೆ ಜೀವನೆಂದರ್ಥವು. ಏತೇನ-ಶಿವಜೀವರುಗಳೇ ಲಿಂಗ ಅಂಗವೆಂದು ಕರೆಯಲ್ಪಟ್ಟಂತಾಯಿತು.

ಮೇಲೆ ಹೇಳಲ್ಪಟ್ಟ ರೀತಿಯಿಂದ ಮಹಾಸ್ಥಲವೊಂದೇ ಎರಡಾದ ಕೂಡಲೇ ಅದರಂತೆಯೇ ಆ ಪರವಸ್ತುವಿನಲ್ಲಿ ಅವಿನಾಭೂತವಾಗಿರುವ ಚಿಚ್ಛಕ್ತಿಯೂ ಕೂಡ ಸ್ವಸ್ವಾತಂತ್ರ್ಯದಿಂದ ಎರಡಾಯಿತು. ಒಂದು ಕಲೆ ಅಥವಾ ಪರೆ ಅಥವಾ ಶಕ್ತಿಯೆಂತಲೂ, ಮತ್ತೊಂದು ಭಕ್ತಿಯೆಂತಲೂ ಹೇಳಲ್ಪಟ್ಟಿತು. ಕಲೆಯು ಲಿಂಗಸ್ಥಲವನ್ನಾಶ್ರಯಿಸಿತು. ಭಕ್ತಿಯು ಅಂಗಸ್ಥಲವನ್ನಾಶ್ರಯಿಸಿತು. ದೊಡ್ಡದಾಗಿ ಉರಿವ ಬೆಂಕಿಯ ಜ್ವಾಲೆಯು ಭಿನ್ನಭಿನ್ನವಾಗಿ ಹೊಳೆವ ದೀಪಗಳಾದಂತೆ ಮಹಾಶಿವಶಕ್ತಿಯೇ ಕಲೆಯೆಂತಲೂ ಭಕ್ತಿಯೆಂತಲೂ ಹೆಸರ್ಗೊಂಡಿತು.

ಪ್ರ|| ಯಥಾಸ್ಥಲಂದ್ವಿಧಾಭೂತಂ ತಥಾಶಕ್ತಿರ್ದ್ವಿಧಾಭವೇತ್ | ಶಕ್ತಿರಪ್ರತಿಮಾ ಸಾಕ್ಷಾಚ್ಛಿವೇನಸಹಧರ್ಮಿಣೀ || ಸಾಕ್ಷಿಣೀಸತ್ಯಸಂಪೂರ್ಣಾ ನಿರ್ವಿಕಲ್ಪಾಮಹೇಶ್ವರೀ | ಸಾಶಕ್ತಿರ್ದ್ವಿವಿಧಾಭೂತಾ ಸ್ವಸ್ವಾಂತತ್ರ್ಯಬಲೇನತು || ಸಮಾನಧರ್ಮಿಣೀತ್ವೇನ ವಿಭಕ್ತಾಭಕ್ತವತ್ಸಲಾ | ಲಿಂಗಸ್ಥಲಾಶ್ರಯಾಕಾಚಿತ್ಕಾಚಿದಂಗಸ್ಥಲಾಶ್ರಯಾ || ಲಿಂಗಸ್ಥಲಾಶ್ರಯಾಶಕ್ತಿಃ ಕಲಾರೂಪಾಪ್ರಕೀರ್ತಿತಾ | ಅಂಗಸ್ಥಲಾಶ್ರಯಾಶಕ್ತಿ ರ್ಭಕ್ತಿರೂಪಾಭವಾಪಹಾ || ಯಥಾಮಹಾನಲಜ್ವಾಲಾ ವಿಭಕ್ತಾದೀಪಿಕಾಕೃತಿಃ | ತಥಾಮಾಹೇಶ್ವರೀಶಕ್ತಿರ್ವಿಭಕ್ತಾ ಭಕ್ತಿರೂಪಿಣೀ ||

ಕಲೆಯು (ಶಕ್ತಿಯು) ವಾಸನಾಸಹಿತವಾದದ್ದು. ಭಕ್ತಿಯು ವಾಸನಾರಹಿತವಾದದ್ದು. ಹೊಗೆಯು ಮುಸುಕಿಕೊಂಡ ಬೆಂಕಿಯ ಜ್ವಾಲೆಯು ತಮೋಮಯವಾಗಿ ತೋರುತ್ತಿರುವಂತೆ ಶಕ್ತಿಯು ಮಂಕಾಗಿರುವುದು. ಹೊಗೆಯಿಲ್ಲದೆ ತಾನೇತಾನಾಗಿ ಬೆಳಗುವ ನಿರ್ಮಲವಾದ ದೀಪದ ಬೆಳಕಿನಂತೆ ಭಕ್ತಿಯು ಹೊಳೆಯುತ್ತಿರುವುದು. ಭಕ್ತಿಯು ಮಹತ್ತರವಾದದ್ದು, ಸೂಕ್ಷ್ಮವಾದದ್ದು, ಮತ್ತು ಮುಕ್ತಿಯನ್ನು ಕೊಡತಕ್ಕದ್ದು. ಶಕ್ತಿಯಾದರೋ ಪುಣ್ಯಫಲಗಳನ್ನು ಕೊಡುವುದು. ಶಕ್ತಿಯಿಂದ ಪ್ರಪಂಚಸೃಷ್ಟಿಗೆ ಮಾರ್ಗವಾಗುವುದು. ಭಕ್ತಿಯಿಂದ ಆ ಪ್ರಪಂಚದ ಲಯ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ವುಂಟಾಗುವುದು. ಶಕ್ತಿಯ ವಿಚಿತ್ರತೆಯಿಂದ ನೀರೂಪವಾದದ್ದು ಕೂಡ ರೂಪಸಹಿತವಾಗುವುದು. ಭಕ್ತಿಯಿಂದಲಾದರೊ ರೂಪಸಹಿತವಾಗಿದ್ದುದು ಕೂಡ ನೀರೂಪವಾಗುವುದು. ಪ್ರಪಂಚದ ವೃದ್ಧಿಯನ್ನಪೇಕ್ಷಿಸುವುದೇ ಶಕ್ತಿಯ ಸ್ವಭಾವಗುಣವು. ಪ್ರಪಂಚದ ಲಯುವನ್ನಪೇಕ್ಷಿಸುವುದೇ ಭಕ್ತಿಯ ಸ್ವಾಭಾವಿಕಗುಣವು. ಮತ್ತು ಶಕ್ತಿಯು ಮಾಯಾಸಹಿತವೆನಿಸಿಕೊಳ್ಳುವುದು. ಭಕ್ತಿಯು ನಿರ್ಮಾಯೆಯು. ಆದುಕಾರಣ ಶಕ್ತಿಯು ಅಧೋಮುಖಿಯೆಂತಲೂ, ಪ್ರವೃತ್ತಿಮಾರ್ಗವುಳ್ಳದ್ದೆಂತಲೂ, ಭಕ್ತಿಯು ಊರ್ಧ್ವಮುಖಿಯೆಂತಲೂ ನಿವೃತ್ತಿಮಾರ್ಗವುಳ್ಳದ್ದೆಂತಲೂ ಹೇಳಲ್ಪಡುವುದು. ಆದುದರಿಂದ ಶಕ್ತಿಗಿಂತಲೂ ಭಕ್ತಿಯೇ ಅಧಿಕವಾದದ್ದು. ಶಕ್ತಿಗೆ ಉಪಾಸ್ಯತ್ವವುಂಟಾಗಿ ಅದು ಲಿಂಗಸ್ಥಲವನ್ನಾಶ್ರಯಿಸಿತು. ಭಕ್ತಿಗೆ ಉಪಾಸಕತ್ವವುಂಟಾಗಿ ಅದು ಅಂಗಸ್ಥಲವನ್ನಾಶ್ರಯಿಸಿತು. ಲಿಂಗಾಂಗಗಳೇ ಶಿವಜೀವರುಗಳೆಂದು ಮೇಲೆ ಹೇಳಿದೆ. ಅಂಥ ಲಿಂಗಾಂಗಗಳ ಸಾಮರಸ್ಯವೇ ಶಿವಜೀವೈಕ್ಯವೆಂದು ಹೇಳಲ್ಪಡುವುದು. ಲಿಂಗಾಂಗಗಳು ಅಭಿನ್ನವೆನಿಸಿಕೊಳ್ಳುವಂತೆಯೇ ವಿಚಾರತಃ ಶಕ್ತಿಭಕ್ತಿಗಳು ಅಭಿನ್ನವೆನಿಸಿಕೊಳ್ಳುವುವು.

ಪ್ರ|| ತಸ್ಮಾತ್ಸವಾಸನಾಶಕ್ತಿ ರ್ಭಕ್ತಿರ್ನಿರ್ವಾಸನಾಮತಾ | ಭಕ್ತಿರ್ಮಹತ್ತರಾಶುದ್ಧಾ ಸುಸೂಕ್ಷ್ಮಾಶೋಭನಾಪರಾ || ಸಚ್ಚಿದಾನಂದರೂಪಾಸ್ಯಾ ದ್ಭುಕ್ತಿಮುಕ್ತಿಫಲಪ್ರದಾ | ಶಕ್ತಿರೇವಸ್ಮೃತಾಭಕ್ತಿರ್ಭಕ್ತಿರೇವಶಿಸಾಸದಾ || ಶಕ್ತಿಭಕ್ತ್ಯೋರ್ನಭೇದೋಸ್ತಿ ಪರಮಾರ್ಥನಿರೂಪಣೆ | ಶಕ್ತಿಃಪ್ರವೃತ್ತಿರಾಖ್ಯಾತಾ ನಿವೃತ್ತಿರ್ಭಕ್ತಿರೀರಿತಾ || ಶಕ್ತ್ಯಾಪ್ರಪಂಚ ಸೃಷ್ಟಿಸ್ಸ್ಯಾದ್ಭಕ್ತ್ಯಾತದ್ವಿಲಯೋಮತಃ | ಶಕ್ತಿವೈಚಿತ್ರ್ಯತೋರೂಪಂ ನೀರೂಪಮಪಿಯಾತಿಹಿ || ಭಕ್ತಿವೈಚಿತ್ರ್ಯತೋರೂಪ ಮಪಿನೀರೂಪತಾಮಿಯಾತ್ | ಪ್ರಪಂಚವೃದ್ಧ್ಯಪೇಕ್ಷಾಹಿ ಶಕ್ತೇಸ್ಸ್ವಾಭಾವಿಕೋಗುಣಃ || ಪ್ರಪಂಚಸಂಕ್ಷಯಾಪೇಕ್ಷಾ ಭಕ್ತೇಸ್ಸ್ವಾಭಾವಿಕೋಗುಣಃ | ಅಧೋಮುಖೀಭವೇಚ್ಛಕ್ತಿ ರ್ಭಕ್ತಿರೂರ್ಧ್ವಮುಖೀಭವೇತ್ | ಸಮಾಯಾಶಕ್ತಿರಾಖ್ಯಾತಾ ನಿರ್ಮಾಯಾಭಕ್ತಿರೀರಿತಾ || ಅಪಿತರ್ಕಪ್ರ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮಾಣಾಭ್ಯಾಂ ಶಕ್ತೈರ್ಭಕ್ತಿರ್ಗುಣಾಧಿಕಾ | ಉಪಾಸ್ಯತ್ವಂಭವೇಚ್ಛ ಕ್ತ್ಯಾಃ ಭಕ್ತ್ಯೋಪಾಸಕತಾಭವೇತ್ || ತಸ್ಮಾಲ್ಲಿಂಗಸ್ಥಲೇಶಕ್ತಿ ರ್ಭಕ್ತಿ ರಂಗಸ್ಥಲೇಸ್ಥಿತಾ | ಲಿಂಗಸ್ಥಲಂಶಿವಸ್ಸಾಕ್ಷಾ ಜ್ಜೀವಾತ್ಮಾಂಗಸ್ಥಲಂಭ ವೇತ್ || ಲಿಂಗಾಂಗಸ್ಥಲಯೋರೈಕ್ಯಂ ಶಿವಜೀವೈಕ್ಯಮೇವಹಿ ||

ಹಿಂದೆ ಹೇಳಲ್ಪಟ್ಟ ಲಿಂಗ ಅಂಗ ಸ್ಥಲಗಳಲ್ಲಿ ಮೊದಲನೇ ಲಿಂಗ ಸ್ಥಲವು ಕ್ರಮವಾಗಿ ವೇಧಾ, ಮಂತ್ರ ಕ್ರಿಯೆಗಳಿಂದಲೂ, ನಾದಬಿಂದು ಕಲೆಗಳಿಂದಲೂ ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗ ವೆಂದು ಮೂರು ವಿಧವಾಗಿರುವುದು. ಭಾವದಿಂದ ಗ್ರಹಿಸಲ್ಪಡುವ ಸದ್ರೂ ಪವಾದ ಭಾವಲಿಂಗವೇ ನಿಷ್ಕಲವೆನಿಸಿಕೊಳ್ಳುವುದು. ಮನಸ್ಸಿನಿಂದ ಗ್ರಹಿ ಸಲ್ಪಡುವ ಚಿದ್ರೂಪವಾದ ಪ್ರಾಣಲಿಂಗವೇ ಸಕಲ ನಿಷ್ಕಲವೆನಿಸಿಕೊಳ್ಳು ವುದು. ಕಣ್ಣಿನ ನೋಟದಿಂದ ಗ್ರಹಿಸಲ್ಪಡುವ ಆನಂದರೂಪವಾದ ಇಷ್ಟಲಿಂಗವೇ ಸಕಲವೆನಿಸಿಕೊಳ್ಳುವುದು. ಏತೇನ ಭಾವಪ್ರಾಣೇಷ್ಟ ಲಿಂಗಗಳು ಸಚ್ಚಿದಾನಂದರೂಪಗಳೆಂದು ಹೇಳಿದಂತಾಯಿತು. ಮತ್ತು ಭಾವಲಿಂಗವೇ ಅಸಿಪದದ ಅರ್ಥವುಳ್ಳದ್ದು. ಪ್ರಾಣಲಿಂಗವೇ ತ್ವಂಪದದ ಅರ್ಥವುಳ್ಳದ್ದು. ಇಷ್ಟಲಿಂಗವೇ ತತ್‌ಪದದ ಅರ್ಥವುಳ್ಳದ್ದು. ಏತೇನ "ತತ್ತ್ವಮಸಿ" ಎಂಬ ಮಹಾವಾಕ್ಯವೇ ತ್ರಿವಿಧ ಲಿಂಗಗಳೆಂದು ತಿಳಿ ಯತಕ್ಕದ್ದು. ಒಳಗೂ ಹೊರಗೂ ಅಖಂಡವಾಗಿ ರಾಜಿಸುವ ಪರತ ತ್ವವೇ ಭಾವಲಿಂಗವೆಂತಲೂ, ಒಳಗೆ ಪ್ರಸರಿಸುವ ಸೂಕ್ಷ್ಮ ತತ್ವವೇ ಪ್ರಾ ಣಲಿಂಗವೆಂತಲೂ, ಹೊರಗೆ ಪ್ರಸರಿಸುವ ಸ್ಥೂಲತತ್ವವೇ ಇಷ್ಟಲಿಂಗ ವೆಂತಲೂ ಹೇಳಲ್ಪಡುವುದು.

ಪ್ರ|| ಲಿಂಗಸ್ಥಲಂತ್ರಿಧಾಜ್ಞೇಯಂ ತದ್ಭೇದೋವರ್ಣ್ಯತೇಕ್ರಮಾ ತ್ | ಪ್ರಥಮಂಭಾವಲಿಂಗಂಸ್ಯಾ ದ್ದ್ವಿತೀಯಂಪ್ರಾಣಲಿಂಗಕಂ|| ತೃತೀ ಯಮಿಷ್ಟಲಿಂಗಂಸ್ಯಾ ದಿತ್ಯೇತತ್ತ್ರಿವಿಧಂಸ್ಮೃತಂ | ನಿಷ್ಕಳಂಭಾವಲಿಂಗಂ ಸ್ಯಾ ದ್ಭಾವಗ್ರಾಹ್ಯಂಪರಾತ್ಪರಂ || ಸನ್ಮಾತ್ರಂ ಭಾವಲಿಂಗಂಸ್ಯಾ ದಿತಿ ನಿಷ್ಠಾ ಮಹಾತ್ಮನಾಂ | ಪ್ರಾಣಲಿಂಗಂಮನೋಗ್ರಾಹ್ಯಂ ಭವೇತ್ಸಕಲ ನಿಷ್ಕಲಂ || ಸಕಳಂದೃಕ್ಕಳಾಗ್ರಾಹ್ಯ ಮಿಷ್ಟಲಿಂಗಸ್ಥಲಂಮಹತ್ | ಸ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದ್ರೂಪಂಭಾವಲಿಂಗಂಸ್ಯಾ ಚ್ಚಿದ್ರೂಪಂಪ್ರಾಣಲಿಂಗಕಂ || ಆನಂದರೂ ಪಮಾಚಾರ್ಯೈ ರಿಷ್ಟಲಿಂಗಮುದಾಹೃತಂ | ಅಸ್ಯರ್ಥೋಭಾವಲಿಂಗಂಸ್ಯಾ ತ್ತ್ವಮರ್ಥಃಪ್ರಾಣಲಿಂಗಕಂ || ತದರ್ಥಸ್ತ್ವಿಷ್ಟಲಿಂಗಂಸ್ಯಾ ತ್ಪದತ್ರಯ ನಿರೂಪಣೆ | ಭಾವಲಿಂಗಂಪರಂತತ್ತ್ವಂ ಪ್ರಾಣಲಿಂಗಂತುಸೂಕ್ಷ್ಮಕಂ || ಇಷ್ಟಲಿಂಗಂಭವೇತ್ಸ್ಥೂಲ ಮೇತಲ್ಲಿಂಗತ್ರಯಂಸ್ಮೃತಂ | ಸ್ಥೂಲಂಬಾ ಹ್ಯಮಿತಿಪ್ರೋಕ್ತಂ ಸೂಕ್ಷ್ಮಮಾಭ್ಯಂತರಂಸ್ಮೃತಂ || ಸಬಾಹ್ಯಾಭ್ಯಂತ ರಂಯತ್ತ ತ್ಪರಮಿತ್ಯಭಿಧೀಯತೆ|ದೇಹಪ್ರಾಣಾತ್ಮರೂಪೇಣ ಕ್ರಿಯಾಮಂ ತ್ರಪ್ರಯೋಗತಃ|| ಬಿಂದುನಾದಕಳಾಭೇದಾ ಲ್ಲಿಂಗತ್ರಯಮುದಾಹೃತಂ|

ಮೇಲೆ ಹೇಳಲ್ಪಟ್ಟ ತ್ರಿವಿಧಲಿಂಗಗಳೇ ಪ್ರತಿಯೊಂದೂ ಎರಡೆರಡ ರಂತೆ ಆರುಭೇದಗಳುಳ್ಳದ್ದಾಗುವುವು. ಹೇಗೆಂದರೆ—ಮೊದಲನೇ ಭಾವ ಲಿಂಗವೇ ಮಹಾಲಿಂಗ ಪ್ರಸಾದಲಿಂಗವೆಂದು ಎರಡು ತೆರನಾಯಿತು. ಪ್ರಾಣಲಿಂಗವೇ ಜಂಗಮಲಿಂಗ ಶಿವಲಿಂಗವೆಂದು ಎರಡು ತೆರನಾಯಿತು. ಇಷ್ಟಲಿಂಗವೇ ಗುರುಲಿಂಗ ಆಚಾರಲಿಂಗವೆಂದು ಎರಡಾಯಿತು.

ಪ್ರ|| ಏಕಮೇಕಂಸ್ಥಲಂಭೂಯೋ ದ್ವಿವಿಧಂದ್ವಿವಿಧಂಭವೇತ್ | ಭಾವಲಿಂಗಸ್ಥಲಂದ್ವೇಧಾ ಪ್ರಾಣಲಿಂಗಸ್ಥಲಂದ್ವಿಧಾ || ಇಷ್ಟಲಿಂಗಸ್ಥ ಲಂಚೈವ ದ್ವಿಧಾಪ್ರೋಕ್ತಂಮಹಾತ್ಮಭಿಃ | ಮಹಾಲಿಂಗಂಪ್ರಸಾದಾಖ್ಯಂ ಲಿಂಗಮಿತ್ಯುಭಯಸ್ಥಲಂ | ಭಾವಲಿಂಗಂಭವತ್ಯೇವ ಸ್ವಾನುಭೂತಿಪ್ರ ಮಾಣತಃ | ತಥಾಚ ಚರಲಿಂಗಂಚ ಶಿವಲಿಂಗಮಿತಿದ್ವಯಂ || ಪ್ರಾಣ ಲಿಂಗಂಭವತ್ಯೇವ ತಾತ್ಪರ್ಯಾರ್ಥೋನಸಂಶಯಃ || ಗುರುಲಿಂಗಂತಥಾ ಚಾರ ಲಿಂಗಮಿತ್ಯುಭಯಸ್ಥಲಂ || ಇಷ್ಟಲಿಂಗಂಭವತ್ಯೇವ ಸತ್ಯಮುಕ್ತ ಮಿದಂಮಯಾ || ಮಹಾಲಿಂಗಂಪ್ರಸಾದಾಖ್ಯ ಲಿಂಗಂಚಚರಲಿಂಗಕಂ | ಶಿವಲಿಂಗಂತಥಾಚೈವ ಗುರುಲಿಂಗಂತತಃಪರಂ || ಆಚಾರಲಿಂಗಮಿತ್ಯೇವಂ ಲಿಂಗಂಷಡ್ವಿಧಮುಚ್ಯತೆ | ಏವಂಷಡ್ವಿಧಂಭೂತಂ ಲಿಂಗಂಪರಮ ಕಾರಣಂ ||

ಹೀಗೆ ಪರಮಕಾರಣವಾದ ಲಿಂಗವೇ ಆರಾದಬಳಿಕ ಆ ಪರಶಿವನ ಸ್ವತಂತ್ರ ಸ್ವಪ್ರಕಾಶತಾಶಕ್ತಿಯೂ ಕೂಡ ಆರುತೆರನಾಯಿತು. ಹೇಗೆಂ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದರೆ—ಶಾಂತ್ಯತೀತೋತ್ತರಕಲೆಯೆಂಬ ಹೆಸರುಳ್ಳದ್ದು ಚಿಚ್ಛಕ್ತಿಯು. ಶಾಂತ್ಯತೀತಕಲೆಯೆಂಬ ಹೆಸರುಳ್ಳದ್ದು ಪರಶಕ್ತಿಯು. ಶಾಂತಿಕಲೆ ಎಂಬ ಹೆಸರುಳ್ಳದ್ದು ಆದಿಶಕ್ತಿಯು. ವಿದ್ಯಾಕಲೆಯೆಂಬ ಹೆಸರುಳ್ಳದ್ದು ಇಚ್ಛಾ ಶಕ್ತಿಯು. ಪ್ರತಿಷ್ಠಾಕಲೆಯೆಂಬ ಹೆಸರುಳ್ಳದ್ದು ಜ್ಞಾನಶಕ್ತಿಯು. ನಿವೃತ್ತಿಕಲೆಯೆಂಬ ಹೆಸರುಳ್ಳದ್ದು ಕ್ರಿಯಾಶಕ್ತಿಯು. ಹೀಗೆ ಪರಶಿವನ ಒಂದೇ ಶಕ್ತಿಯೇ ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂಬದಾಗಿ ಆರುತೆರನಾಯಿತು. ಆ ಆರು ಶಕ್ತಿಗಳನ್ನೂ ಮೇಲ್ಕಂಡ ಆರುಸ್ಥಲಗಳು ಬೇರೆಬೇರೆ ಹೊಂದಿರುವವು.

ಪ್ರ|| ಶಕ್ತಯಷ್ಷಡ್ವಿಧಾಜ್ಞೇಯಾ ಷ್ಷಟ್ಸ್ಥಲೇಷುಸಮಾಹಿತಾಃ| ಶಕ್ತೀನಾಮಧುನಾತಾಸಾಂ ಸದ್ಭಾವೋವರ್ಣ್ಯತೇಕ್ರಮಾತ್ || ಶಾಂತ್ಯತೀತೋತ್ತರಾನಾಮ ಚಿಚ್ಛಕ್ತಿರಿತಿಕೀರ್ತಿತಾ | ಶಾಂತ್ಯತೀತಾಪರಾಶಕ್ತಿ ಶ್ಶಾಂತಿರೇವಾದಿಸಂಜ್ಞಿಕಾ || ಇಚ್ಛಾಶಕ್ತಿಶ್ಚವಿದ್ಯಾಸ್ಯಾ ತ್ಪ್ರತಿಷ್ಠಾ ಜ್ಞಾನರೂಪಿಣೀ| ನಿವೃತ್ತಿಸ್ಸ್ಯಾತ್ಕ್ರಿಯಾಶಕ್ತಿ ರಿತಿಪರ್ಯಾಯಸಂಗತಿಃ||.ಚಿಚ್ಛಕ್ತಿಶ್ಚಪರಾಶಕ್ತಿ ರಾದಿಶಕ್ತಿಸ್ತಥೈವಚ | ಇಚ್ಛಾಜ್ಞಾನಕ್ರಿಯಾರೂಪಾ ಶ್ಶಕ್ತಯಷ್ಷಡ್ವಿಧಾಮತಾಃ ||

ಹಿಂದೆ ಹೇಳಿದಪ್ರಕಾರ ಚಿಚ್ಛಕ್ತಿಯೊಂದೇ ಷಡ್ವಿಧದ ಕಳೆಯನ್ನು ಧರಿಸಿ ಆರುತೆರದ ಶಕ್ತಿಯಾಯಿತು. ಮತ್ತು ಹಿಂದೆ ಹೇಳಿದ ಆರುಲಿಂಗಗಳೇ ಈ ಆರುಶಕ್ತಿಗಳೊಡನೆ ಕೂಡಿದಾಗ ಅವುಗಳ ಲಕ್ಷಣವು ಹೇಗೆಂದರೆ—ಮಹಾಲಿಂಗವು ಆದ್ಯಂತ ರಹಿತ, ನಿರ್ಮಲ, ಸಂಪೂರ್ಣ, ನಿಷ್ಕಲ, ಚಿಚ್ಛಕ್ತಿಸಮೇತ, ಶಿವತತ್ವಾಶ್ರಯ, ಭಾವಗಮ್ಯವಾದದ್ದು.

ಪ್ರಸಾದಲಿಂಗವು—ಪರಂಜ್ಯೋತಿಸ್ವರೂಪ, ಅಖಂಡ, ಪರಾಶಕ್ತಿಯುಕ್ತ, ಸಾದಾಖ್ಯತತ್ವಾಶ್ರಯ ಜ್ಞಾನೈಕಗಮ್ಯವಾದದ್ದು.

ಜಂಗಮಲಿಂಗವು—ಜ್ಯೋತಿಸ್ವರೂಪ ಸಕಲನಿಷ್ಕಲ, ಪರಮಪುರುಷ, ಆದಿಶಕ್ತಿಸಮೇತ, ಅಮೂರ್ತ ತತ್ವಾಶ್ರಯ ಮನೋಗೋಚರವಾದದ್ದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಶಿವಲಿಂಗವು—ದಿವ್ಯಪ್ರಭಾಮಯ, ಇಚ್ಛಾಶಕ್ತಿಸಮೇತ, ಮೂರ್ತತತ್ವಾಶ್ರಯ ಅಹಂಕಾರಗೋಚರವಾದದ್ದು.

ಗುರುಲಿಂಗವು—ಪರಮಸುಖಾಂಬುಧಿ, ತೇಜೋನಿಧಿ, ಜ್ಞಾನಶಕ್ತಿಯುಕ್ತ, ಕರ್ತೃತತ್ವಾಶ್ರಯ ಬುದ್ಧಿಗಮ್ಯವಾದದ್ದು.

ಆಚಾರಲಿಂಗವು—ಕರ್ಮಾತ್ಮಕ, ಕ್ರಿಯಾಶಕ್ತಿಯುಕ್ತ, ಸಕಲತತ್ವಾಶ್ರಯ, ಚಿತ್ತೈಕಗೋಚರವಾದದ್ದು.

ಪ್ರ|| ಸ್ಥಲಾನಾಂಶಕ್ತಿಯುಕ್ತಾನಾಂ ಷಣ್ಣಾಮೇಷಾಂಪೃಥಕ್ ಪೃಥಕ್ | ಸ್ವರೂಪಲಕ್ಷಣಂಚೈವ ಕ್ರಮಶೋವರ್ಣ್ಯತೆಧುನಾ || ಆದ್ಯಂತಶೂನ್ಯಮಮಲಂಪರಿಪೂರ್ಣಮೇಕಂ ಸೂಕ್ಷ್ಮಂಪರಾತ್ಪರಮನಾಮಯಮಪ್ರಮೇಯಂ | ಭಾವೈಕಗಮ್ಯಮಜಡಂಶಿವತತ್ವಮಾಹುಶ್ಚಿಚ್ಛಕ್ತಿ ಸಂಸ್ಫುರಣರೂಪಮಹಾತ್ಮಲಿಂಗಂ ||

ಜ್ಯೋತಿರ್ಮಯಂ ನಿಜಮಖಂಡಮತೀಂದ್ರಿಯಾರ್ಥಂ ಜ್ಞಾನೋಪಲಭ್ಯಮಮೃತಂಪರಿಣಾಮಬೀಜಂ | ಸಾದಾಖ್ಯತತ್ವಮುದಿತಂಪರಯಾಸ್ವಶಕ್ತ್ಯಾಪ್ರಾಹುಃಪ್ರಸಾದಘನಲಿಂಗಮುಪಾಧಿಹೀನಂ ||

ಸಾಭ್ಯಂತರಂಗಬಹಿರಂಗಮಮೂರ್ತತತ್ವಂಜ್ಯೋತಿರ್ಮಯಂ ಪುರುಷಮಕ್ಷರತಃಪರಾಖ್ಯಂ | ಸ್ವಾತ್ಮಾದಿಶಕ್ತಿಘಟಿತಂ ಮನಸೈವನಿತ್ಯಂಧ್ಯಾತವ್ಯಮಾತ್ಮಮತಯಶ್ಚರಲಿಂಗಮಾಹುಃ ||

ವಿದ್ಯಾಕಳಾಕಲಿತರೂಪಸುಶೋಭಮಾನಂ ದಿವ್ಯಪ್ರಭಾಪಟಲಮೇಕಮಖಂಪ್ರಶಾಂತಂ | ಇಚ್ಛಾಸ್ವಶಕ್ತಿಪರಿಜೃಂಭಿತಮೂರ್ತತತ್ವಂವ್ಯಕ್ತೈಹ್ಯಹಂಕೃತಿಪದೆಶಿವಲಿಂಗಮಾಹುಃ ||

ಸ್ವಜ್ಞಾನಶಕ್ತಿವಿಭವೋತ್ಥಿತಕರ್ತೃತತ್ವಂ ಸರ್ವೋಪದೇಶವಿದಿತಂ ಪ್ರಕೃತಿಪ್ರತಿಷ್ಠಂ | ತೇಜೋನಿಧಿಂ ಪರಮಪಾರಸುಖಾಂಬುರಾಶಿಂ ಬುದ್ಧೌಪದೆವಿನಿಹಿತಂಗುರುಲಿಂಗಮಾಹುಃ ||

ಕರ್ಮಾತ್ಮನಾಸಕಲತತ್ವನಿವಾಸಹೇತೋ ರಾಧಾರಭೂತಮಚಲಂ ಕ್ರಿಯಯಾಸ್ವಶಕ್ತ್ಯಾ | ಚಿತ್ತೇನಧಾರ್ಯಮತಿರೂಢನಿವೃತ್ತಿಮಾರ್ಗಂಹ್ಯಾಚಾರಲಿಂಗಮಿತಿವೇದವಿದೋವದಂತಿ ||

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಒಂದು ವಸ್ತುವೇ ಮೂರಾಗಿ ಬಳಿಕ ಶಕ್ತಿಸಂಯೋಗದಿಂದಲೂ ಷಡ್ವಿಧಕರಣಗ್ರಾಹ್ಯತ್ವದಿಂದಲೂ ಆರುತೆರನಾದ ರೀತಿಯು ಮೇಲೆ ವಿವರಿಸಲ್ಪಟ್ಟಿತಷ್ಟೆ. ಇದೆಲ್ಲವೂ ಉಪಾಸ್ಯವಾದ ಲಿಂಗಸ್ಥಲದ ಭೇದಗಳು. ಇದರಂತೆಯೇ ಉಪಾಸಕವಾದ ಅಂಗಸ್ಥಲವೂ ಭಕ್ತ್ಯಾದಿಸಂಯೋಗದಿಂದ ಭಿನ್ನಭಿನ್ನಗಳಾಗಿರುವುವು. ಹೇಗೆಂದರೆ–ಅಂಗ (ಜೀವ) ತತ್ತ್ವವೊಂದೇ ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರುವಿಧವಾಯಿತು. ಗುರುಲಿಂಗಚರಾತ್ಮಕವಾದ ಶಿವನ ಐಕ್ಯಾನುಸಂಧಾನವೇ ಲಕ್ಷಣವಾಗುಳ್ಳದ್ದು ಯೋಗಾಂಗವು. ಅಂತಹ ಶಿವನಪ್ರಸಾದಸೇವನೆಯಿಂದುಂಟಾದ ಸುಖಪರಿಣಾಮವೇ ಲಕ್ಷಣವಾಗುಳ್ಳದ್ದು ಭೋಗಾಂಗವು. ಸಂಸಾರಭ್ರಾಂತಿಪರಿತ್ಯಾಗವೇ ಲಕ್ಷಣವಾಗುಳ್ಳದ್ದು ತ್ಯಾಗಾಂಗವು. ಇವುಗಳಲ್ಲಿ ಮೊದಲನೇ ಯೋಗಾಂಗವೇ ಕಾರಣ ದೇಹಸಂಪನ್ನ, ಸುಷುಪ್ತ್ಯವಸ್ಥಾಪನ್ನ, ಪ್ರಾಜ್ಞರೂಪವೆನ್ನಲ್ಪಡುವುದು. ಭೋಗಾಂಗವು–ಸೂಕ್ಷ್ಮದೇಹಸಂಪನ್ನ, ಸ್ವಪ್ನಾವಸ್ಥಾಪನ್ನ, ತೈಜಸಸ್ವರೂಪವೆನ್ನಲ್ಪಡುವುದು. ತ್ಯಾಗಾಂಗವು–ಸ್ಥೂಲದೇಹಸಂಪನ್ನ, ಜಾಗ್ರದವಸ್ಥಾಪನ್ನ ವಿಶ್ವರೂಪವೆನ್ನಲ್ಪಡುವುದು. ಈ ಯೋಗಾಂಗ ಭೋಗಾಂಗ ತ್ಯಾಗಾಂಗಗಳೇ ಕ್ರಮವಾಗಿ ಪರಮಾತ್ಮ, ಅಂತರಾತ್ಮ ಜೀವಾತ್ಮವೆಂಬ ಅಪನಾಮಕಗಳಾಗಿರುವುವು.

ಪ್ರ—ಅಂಗಸ್ಥಲಂತ್ರಿಧಾಜ್ಞೇಯ ಮಾಚಾರ್ಯೈಃಸೂಕ್ಷ್ಮದರ್ಶಿಭಿಃ | ಯೋಗಾಂಗಂಪ್ರಥಮಂಪ್ರೋಕ್ತಂಭೋಗಾಂಗಂತುದ್ವಿತೀಯಕಂ|| ತ್ಯಾಗಾಂಗಂತುತೃತೀಯಂಸ್ಯಾದೇವಮೇವತ್ರಿಧಾಭವೇತ್ | ಶಿವಯೋಗಸುಖಾವಾಪ್ತ್ಯಾಯೋಗಾಂಗಮಿತಿಗೀಯತೆ || ಶಿವೇನಸಹಭೋಗೇನ ಭೋಗಾಂಗಮಿತಿಕಥ್ಯತೆ | ಸಂಸಾರಭ್ರಾಂತಿಸಂತ್ಯಾಗಾತ್ತ್ಯಾಗಾಂಗಮಿತಿಪಠ್ಯತೆ || ಯೋಗಾಂಗಂಕಾರಣಂಪ್ರೋಕ್ತಂ ಭೋಗಾಂಗಂಸೂಕ್ಷ್ಮಮುಚ್ಯತೆ | ತ್ಯಾಗಾಂಗಂಸ್ಥೂಲಮಿತ್ಯುಕ್ತಮೇವಂಭೇದೋಪಭೇದತಃ || ಸುಷುಪ್ತ್ಯವಸ್ಥಾಯೋಗಾಂಗಂಭೋಗಾಂಗಂಸ್ವಾಪನಾಭಿಧಂ | ಜಾಗ್ರದಿತ್ಯುದಿತಾವಸ್ಥಾತ್ಯಾಗಾಂಗಮಿತಿಲಕ್ಷ್ಯತೆ || ಯೋಗಾಂಗಂಪ್ರಾಜ್ಞ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಏವಸ್ಯಾದ್ಭೋಗಾಂಗಂತೈಜಸೋಭವೇತ್ | ತ್ಯಾಗಾಂಗಂವಿಶ್ವಏವಸ್ಯಾತ್ಪರಮಾರ್ಥಸಿರೂಪಣೆ ||

ಹಿಂದೆ ಹೇಳಲ್ಪಟ್ಟ ಪ್ರಕಾರ ತ್ರಿವಿಧಲಿಂಗಗಳೇ ಆರಾದಂತೆ ಮೇಲ್ಕಂಡ ಮೂರು ಅಂಗಗಳೂ ಕೂಡ ಪ್ರತಿಯೊಂದೂ ಎರಡೆರಡರಂತೆ ಆರು ತೆರನಾಗುವುವು. ಹೇಗೆಂದರೆ—ಯೋಗಾಂಗವೇ ಐಕ್ಯ, ಶರಣ, ಎಂದು ಎರಡು ಸ್ಥಲಗಳುಳ್ಳದ್ದಾಯಿತು. ಭೋಗಾಂಗವೇ ಪ್ರಾಣಲಿಂಗಿ, ಪ್ರಸಾದಿ ಎಂಬ ಎರಡು ಸ್ಥಲಗಳುಳ್ಳದ್ದಾಯಿತು. ತ್ಯಾಗಾಂಗವೇ ಮಾಹೇಶ, ಭಕ್ತ ಎಂಬ ಎರಡು ಸ್ಥಲಗಳುಳ್ಳದ್ದಾಯಿತು. ಇವುಗಳಲ್ಲಿ ಐಕ್ಯಶರಣ ಸ್ಥಲಗಳೆರಡೂ ಕಾರಣದೇಹ ಪ್ರಾಜ್ಞರೂಪಸಂಪನ್ನಗಳು. ಪ್ರಾಣಲಿಂಗಿ ಪ್ರಸಾದಿಸ್ಥಲಗಳೆರಡೂ ಸೂಕ್ಷ್ಮದೇಹ ತೈಜಸಸ್ವರೂಪ ಸಂಪನ್ನಗಳು. ಮಾಹೇಶ'ಭಕ್ತ ಸ್ಥಲಗಳೆರಡೂ ಸ್ಥೂಲದೇಹ ವಿಶ್ವರೂಪ ಸಂಪನ್ನಗಳು ಎನಿಸಿಕೊಳ್ಳುವುವು. ಹೀಗೆ ಭಕ್ತಿವೈಚಿತ್ರ್ಯದ ಸಂಯೋಗ ಪ್ರಭಾವದಿಂದ ಅಂಗಸ್ಥಲಗಳು ಆರುತೆರನಾದುವು.

ಪ್ರ– ಇತ್ಯೇವಂತ್ರಿಪ್ರಕಾರೈಸ್ತೈಃಪ್ರೋಕ್ತಮಂಗಸ್ಥಲಂಕ್ರಮಾತ್| ಪ್ರತ್ಯೇಕಂಪೃಥಗರ್ಥತ್ವಾತ್ತಾಸಂಪ್ರತಂಪ್ರೋಚ್ಯತೆದ್ವಿಧಾ || ಯೋಗಾಂಗಮೈಕ್ಯಂಶರಣಸ್ಥಲಮಿತ್ಯುಭಯಂಭವೇತ್ | ಪ್ರಾಣಲಿಂಗಿಪ್ರಸಾದೀತಿದ್ವಯಂಭೋಗಾಂಗಮಿಷ್ಯತೆ || ಮಾಹೇಶ್ವರಸ್ಥಲಂ ಭಕ್ತಸ್ಥಲಮಿತ್ಯುಭಯಂತಥಾ | ತ್ಯಾಗಾಂಗಂಭವತೀತ್ಯೇವಂಪ್ರೋಚ್ಯತೆಪಾರಮಾರ್ಥಿಕೈಃ|| ಕಾರಣಂಹಿಭವೇದೈಕ್ಯಂಶರಣಂತುದ್ವಯಾತ್ಮಕಂ | ಸೂಕ್ಷ್ಮಂಸ್ಯಾತ್ಪ್ರಾಣಲಿಂಗೀತಿ ಪ್ರಸಾದೀತ್ಯುಭಯಾತ್ಮಕಂ || ಸ್ಥೂಲಂಮಾಹೇಶ್ವರಂಭಕ್ತಮಿತಿಸ್ಯಾದ್ದ್ವಿತಯಾತ್ಮಕಂ | ಪ್ರಾಜ್ಞಏವಭವೇದೈಕ್ಯಸ್ಥಲಂಚಶರಣಸ್ಥಲಂ | ತೈಜಸಃಪ್ರಾಣಲಿಂಗಿಸ್ಯಾತ್ಪ್ರಸಾದೀತಿತಥೈವಚ | ವಿಶ್ವೋಮಾಹೇಶ್ವರಂಭಕ್ತಸ್ಥಲಂಚೈವಭವತ್ಯಮೆ || ಭಕ್ತಿವೈಚಿತ್ರ್ಯಸಂಯೋಗಪರಿಣಾಮಪ್ರಭಾವತಃ| ನಾಮರೂಪಕ್ರಿಯಾಭಿನ್ನಂಷಡ್ವಿಧಾಂಗಸ್ಥಲಂಭವೇತ್||

ಅಧಿಕಭಾವಾಪನ್ನವಾದ ಸ್ವಪ್ರಕಾಶತಾಶಕ್ತಿಯೇ ಲಿಂಗದ ಆರು ಭೇದಗಳನ್ನನುಸರಿಸಲು ಆರು ವಿಧವಾದ ಶಕ್ತಿಯೆನಿಸಿಕೊಂಡಂತೆ ನ್ಯೂನೀ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭೂತವಾದ ಸ್ವಪ್ರಕಾಶತಾಶಕ್ತಿಯೆಂಬ ಭಕ್ತಿಯುಕೂಡ, ಜಲವು ಮಧು ರಾದಿಷಡ್ರಸವಸ್ತುಗಳಲ್ಲಿ ಪ್ರವೇಶಿಸಿ, ಅವುಗಳ ಆಕಾರವುಳ್ಳದ್ದಾಗುವಂತೆ ಮೇಲೆ ಹೇಳಲ್ಪಟ್ಟ ಐಕ್ಯಾದಿಷಡ್ವಿಧಸ್ಥಲಗಳಲ್ಲೂ ಪ್ರವರ್ತಿಸಿ ಉಪಾಧಿವ ಶದಿಂದ ಆರು ವಿಧವೆನಿಸಿಕೊಳ್ಳುವುದು. ಹೇಗೆಂದರೆ—೧. ಸಮರಸಭಕ್ತಿ, ೨. ಆನಂದಭಕ್ತಿ, ೩. ಅನುಭವಭಕ್ತಿ, ೪. ಅವಧಾನಭಕ್ತಿ, ೫. ನೈಷ್ಠಿ ಕೀಭಕ್ತಿ, ೬. ಸದ್ಭಕ್ತಿಯೆಂಬದಾಗಿ. ಇವುಗಳಲ್ಲಿ ಐಕ್ಯಸ್ಥಲವನ್ನು ಸಮರಸಭಕ್ತಿಯೂ, ಶರಣಸ್ಥಲವನ್ನು ಆನಂದಭಕ್ತಿಯೂ, ಪ್ರಾಣಲಿಂಗಿ ಸ್ಥಲವನ್ನು ಅನುಭವಭಕ್ತಿಯೂ, ಪ್ರಸಾದಿಸ್ಥಲವನ್ನು ಅವಧಾನಭಕ್ತಿ ಯೂ, ಮಾಹೇಶಸ್ಥಲವನ್ನು ನೈಷ್ಠಿಕೀಭಕ್ತಿಯೂ, ಭಕ್ತಸ್ಥಲವನ್ನು ಸದ್ಭ ಕ್ತಿಯೂ ಸೇರಿಕೊಂಡಿರುವುವು.

ಪ್ರ—ಷಟ್ಸ್ಥಲೇಷುಪ್ರವಿಶ್ಯೈಷಾ ಭಕ್ತಿಷ್ಷಡ್ವಿಧರೂಪಿಣೀ | ಕ್ರ ಮಾತ್ಪ್ರವರ್ತತೇತತ್ತಲ್ಲಕ್ಷಣೋಪಾಧಿಭೇದತಃ || ಮಧುರಾದಿಷುಯತ್ಷಟ್ಸು ಪ್ರವಿಶ್ಯಸಲಿಲಂಯಥಾ | ತತ್ತದಾಕಾರತೋಭಾತಿತಥಾಭಕ್ತಿಸ್ಸ್ಥಲೇಸ್ಥಲೇ|| ಷಡ್ವಿಧಾಕಾರತೋಭಿನ್ನಾಭಕ್ತಿಸ್ಸಾಕ್ಷಾಚ್ಛಿವಾತ್ಮಿಕಾ | ಷಣ್ಣಾಮೈಕ್ಯಾ ದಿಭಕ್ತಾಂತಸ್ಥಲಾನಾಂವರ್ತತೇಪದೆ || ಯಥಾಶಕ್ತಿರ್ಮಹಾಲಿಂಗಾದ್ಯಾಚಾ ರಾಂತೇಷ್ವವಸ್ಥಿತಾ| ತಥೈವೈಕ್ಯಾದಿಭಕ್ತಾಂತೇಷ್ವಿಯಂಭಕ್ತಿರವಸ್ಥಿತಾ|| ಭಕ್ತಿಸ್ಸಮರಸಾಕಾರಾಪ್ರಥಮಾಪರಿಗೀಯತೆ | ಆನಂದಾಕಾರತೋಭಾ ದ್ವಿತೀಯಾಭಕ್ತಿರುತ್ತಮಾ || ತೃತೀಯಾನುಭವಾಕಾರಾಭಕ್ತಿರ್ಭವವಿನಾ ಶಿನೀ | ಚತುರ್ಥೀಪರಮಾಭಕ್ತಿರವಧಾನಾತ್ಮಿಕಾಮತಾ || ಪಂಚಮೀನೈ ಷ್ಠಿಕೀಭಕ್ತಿಷ್ಷಷ್ಠೀಸದ್ಭಕ್ತಿರೀರಿತಾ ||

ಮೇಲೆ ಹೇಳಲ್ಪಟ್ಟ ಆರು ಅಂಗಸ್ಥಲಗಳು ಕೂಡ ಹಿಂದೆ ಹೇಳಿದ ಪ್ರವೃತ್ತಿಮಾರ್ಗಸಂಪನ್ನಗಳಾದ ಲಿಂಗಸ್ಥಲಗಳಿಗೆ ಉಪಾಸಕಗಳಾಗಿರು ವುವು. ಹೇಗೆಂದರೆ—ಶಿವನೇ ತನ್ನ ಚಿಚ್ಛಕ್ತಿಸ್ಫುರಣದಿಂದ ಮಹಾಲಿಂಗ ಸ್ಥಲವಾದನು. ಅದಕ್ಕೆ ಐಕ್ಯಸ್ಥಲವು ಉಪಾಸಕವಾಗಿರುವುದು. ಆ ಮಹಾಲಿಂಗದಲ್ಲಿ ಪರಾಶಕ್ತಿಸ್ಫುರಣದಿಂದ ಪ್ರಸಾದಲಿಂಗವುದಿಸಿ ಅದಕ್ಕೆ ಶರಣಸ್ಥಲವು ಉಪಾಸಕವಾಗಿರುವುದು. ಆ ಪ್ರಸಾದಲಿಂಗದಲ್ಲಿ ಆದಿಶಕ್ತಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸ್ಫುರಣದಿಂದ ಜಂಗಮಲಿಂಗವುದಿಸಿ ಆದಕ್ಕೆ ಪ್ರಾಣಲಿಂಗಿಸ್ಥಲವು ಉಪಾಸಕವಾಗಿರುವುದು. ಆ ಜಂಗಮಲಿಂಗದಲ್ಲಿ ಇಚ್ಛಾಶಕ್ತಿಸ್ಫುರಣದಿಂದ ಶಿವಲಿಂಗವುದಿಸಿ, ಅದಕ್ಕೆ ಪ್ರಸಾದಿಸ್ಥಲವು ಉಪಾಸಕವಾಗಿರುವುದು. ಆ ಶಿವಲಿಂಗಸ್ಥಲದಲ್ಲಿ ಜ್ಞಾನಶಕ್ತಿಸ್ಫುರಣದಿಂದ ಗುರುಲಿಂಗವುದಿಸಿ, ಆದಕ್ಕೆ ಮಾಹೇಶ್ವರಸ್ಥಲವು ಉಪಾಸಕವಾಗಿರುವುದು. ಆ ಗುರುಲಿಂಗದಲ್ಲಿ ಕ್ರಿಯಾಶಕ್ತಿಸ್ಫುರಣದಿಂದ ಆಚಾರಲಿಂಗವುದಿಸಿ, ಅದಕ್ಕೆ ಭಕ್ತಸ್ಥಲವು ಉಪಾಸಕವಾಗಿರುವುದು.

ಪ್ರ — ಶಿವಏವಸ್ವಚಿಚ್ಛಕ್ತ್ಯಾಮಹಾಲಿಂಗಸ್ಥಲಂಭವೇತ್ | ತದುಪಾಸಕರೂಪತ್ವಾ ದೈಕ್ಯಸ್ಥಲಮಭೂನ್ಮಹತ್ || ಸ್ಫುರಣಾದ್ವೈಪರಾಶಕ್ತೇರ್ಮಹಾಲಿಂಗಸ್ಥಲೇಪರೇ | ಪ್ರಸಾದಲಿಂಗಸಂಜ್ಞಂತು ಪ್ರಾದುರಾಸೀನ್ಮಹಾಸ್ಥಲಂ || ತದುಪಾಸಕರೂಪತ್ವಾಚ್ಚರಣಸ್ಥಲಮಾಬಭೌ | ಪ್ರಾದುರ್ಭೂತೇಸ್ಥಲೇತಸ್ಮಿನ್ನಾದಿಶಕ್ತಿಪ್ರಭಾವತಃ || ಸ್ಥಲಂಚರಲಿಂಗಾಖ್ಯಂ ಸಮುತ್ಪನ್ನಮನುತ್ತಮಂ | ತದುಪಾಸಕರೂಪತ್ವಾ ತ್ಪ್ರಾಣಲಿಂಗಿಸ್ಥಲಂ ಬಭೌ || ಸ್ಥಲಾತ್ಸಮುತ್ಥಿತಂಜ್ಯೋತಿರ್ಮಯಂತಸ್ಮಾತ್ಸುಶೋಭನಂ | ಶಿವಲಿಂಗಸ್ಥಲಂ ಸಾಕ್ಷಾದಿಚ್ಛಾಶಕ್ತಿಪ್ರಭಾವತಃ || ತದುಪಾಸಕರೂಪತ್ವಾತ್ಪ್ರಸಾದಿಸ್ಥಲಮುದ್ಬಭೌ | ಶಿವಲಿಂಗಸ್ಥಲೇಜ್ಞಾನಶಕ್ತಿಸ್ಫುರಣಯೋಗತಃ|| ಉದಭೂತ್ಕಾರಣತ್ವೇನಗುರುಲಿಂಗಾಭಿದಂಸ್ಥಲಂ | ತದುಪಾಸಕರೂಪತ್ವಾನ್ಮಾಹೇಶ್ವರಮಹಾಸ್ಥಲಂ || ಗುರುಲಿಂಗಸ್ಥಲೇ ತಸ್ಮಿನ್ ಕ್ರಿಯಾಶಕ್ತಿಪ್ರಭಾವತಃ | ಆಚಾರಲಿಂಗಸಂಜ್ಞಂತುಸ್ಥಲಂಜಾತಂಸುಶೋಭನಂ || ತದುಪಾಸಕರೂಪತ್ವಾದ್ಭಕ್ತಸ್ಥಲಮಜಾಯತ | ಮಹಾಲಿಂಗಂಪ್ರಸಾದಾಖ್ಯಲಿಂಗಂಚರಲಿಂಗಕಂ || ಶಿವಲಿಂಗಂತಥಾಚೈವಗುರುಲಿಂಗಂತತಃಪರಂ | ಆಚಾರಲಿಂಗಮಿತ್ಯೇವಂಪ್ರವೃತ್ತಿಸ್ಸೃಷ್ಟಿಮಾರ್ಗತಃ ||

ಮೇಲೆ ಹೇಳಿದಂತೆ ಷಟ್ಸ್ಥಲಭೇದವನ್ನು ಹೊಂದಿದ ಅಂಗ (ಆತ್ಮ) ದಿಂದ ಆಕಾಶವು ಹುಟ್ಟಿತು. ಆ ಆಕಾಶದಿಂದ ವಾಯುವೂ, ಅದರಿಂದ ಅಗ್ನಿಯೂ, ಅದರಿಂದ ಜಲವೂ, ಅದರಿಂದ ಭೂಮಿಯೂ, ಉದಿಸಿದುವು. ಐಕ್ಯಾದಿ ಭಕ್ತಾಂತಸ್ಥಲಂಗಳೆಲ್ಲಕ್ಕೂ ಕ್ರಮವಾಗಿ ಈ ಆತ್ಮಾದಿಗಳು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭೂತವಾದ ಸ್ವಪ್ರಕಾಶತಾಶಕ್ತಿಯೆಂಬ ಭಕ್ತಿಯುಕೂಡ, ಜಲವು ಮಧು ರಾದಿಷಡ್ರಸವಸ್ತುಗಳಲ್ಲಿ ಪ್ರವೇಶಿಸಿ, ಅವುಗಳ ಆಕಾರವುಳ್ಳದ್ದಾಗುವಂತೆ ಮೇಲೆ ಹೇಳಲ್ಪಟ್ಟ ಐಕ್ಯಾದಿಷಡ್ವಿಧಸ್ಥಲಗಳಲ್ಲೂ ಪ್ರವರ್ತಿಸಿ ಉಪಾಧಿವ ಶದಿಂದ ಆರು ವಿಧವೆನಿಸಿಕೊಳ್ಳುವುದು. ಹೇಗೆಂದರೆ—೧. ಸಮರಸಭಕ್ತಿ, ೨. ಆನಂದಭಕ್ತಿ, ೩. ಅನುಭವಭಕ್ತಿ, ೪. ಅವಧಾನಭಕ್ತಿ, ೫. ನೈಷ್ಠಿ ಕೀಭಕ್ತಿ, ೬. ಸದ್ಭಕ್ತಿಯೆಂಬದಾಗಿ. ಇವುಗಳಲ್ಲಿ ಐಕ್ಯಸ್ಥಲವನ್ನು ಸಮರಸಭಕ್ತಿಯೂ, ಶರಣಸ್ಥಲವನ್ನು ಆನಂದಭಕ್ತಿಯೂ, ಪ್ರಾಣಲಿಂಗಿ ಸ್ಥಲವನ್ನು ಅನುಭವಭಕ್ತಿಯೂ, ಪ್ರಸಾದಿಸ್ಥಲವನ್ನು ಅವಧಾನಭಕ್ತಿ ಯೂ, ಮಾಹೇಶಸ್ಥಲವನ್ನು ನೈಷ್ಠಿಕೀಭಕ್ತಿಯೂ, ಭಕ್ತಸ್ಥಲವನ್ನು ಸದ್ಭ ಕ್ತಿಯೂ ಸೇರಿಕೊಂಡಿರುವುವು.

ಪ್ರ—ಷಟ್ಸ್ಥಲೇಷುಪ್ರವಿಶ್ಯೈಷಾ ಭಕ್ತಿಃಷ್ಷಡ್ವಿಧರೂಪಿಣೀ । ಶ್ರೇ ಮಾತ್ರವರ್ತತೆತತ್ತಲ್ಲಕ್ಷಣೋಪಾಧಿಭೇದತಃ ॥ ಮಧುರಾದಿಷುಯತ್ಷಟ್ಸು ಪ್ರವಿಶ್ಯಸಲಿಲಂಯಥಾ । ತತ್ತದಾಕಾರತೋಭಾತಿತಥಾಭಕ್ತಿಸ್ಸ್ಥಲೇಸ್ಥಲೇ ॥ ಷಡ್ವಿಧಾಕಾರತೋಭಿನ್ನಾಭಕ್ತಿಸ್ಸಾಕ್ಷಾಚ್ಛಿವಾತ್ಮಿಕಾ । ಷಣ್ಣಾಮೈಕ್ಯಾ ದಿಭಕ್ತಾಂತಸ್ಥಲಾನಾಂವರ್ತತೆಪಡೆ ॥ ಯಥಾಶಕ್ತಿರ್ಮಹಾಲಿಂಗಾದ್ಯಾಚಾ ರಾಂತೇಷ್ವವಸ್ಥಿತಾ । ತಥೈವೈಕ್ಯಾದಿಭಕ್ತಾಂತೇಷ್ವಿಯಂಭಕ್ತಿರವಸ್ಥಿತಾ ॥ ಭಕ್ತಿಸ್ಸಮರಸಾಕಾರಾಪ್ರಥಮಾಪರಿಗೀಯತೆ । ಆನಂದಾಕಾರತೋಭಾ ದ್ವಿತೀಯಾಭಕ್ತಿರುತ್ತಮಾ ॥ ತೃತೀಯಾನುಭವಾಕಾರಾಭಕ್ತಿರ್ಭವವಿನಾ ಶಿನೀ । ಚತುರ್ಥೀಪರಮಾಭಕ್ತಿರವಧಾನಾತ್ಮಿಕಾಮತಾ ॥ ಪಂಚಮೀನೈ ಷ್ಠಿಕೀಭಕ್ತಿಃಷಷ್ಠೀಸದ್ಭಕ್ತಿರೀರಿತಾ ॥

ಮೇಲೆ ಹೇಳಲ್ಪಟ್ಟ ಆರು ಅಂಗಸ್ಥಲಗಳು ಕೂಡ ಹಿಂದೆ ಹೇಳಿದ ಪ್ರವೃತ್ತಿಮಾರ್ಗಸಂಪನ್ನಗಳಾದ ಲಿಂಗಸ್ಥಲಗಳಿಗೆ ಉಪಾಸಕಗಳಾಗಿರು ವುವು. ಹೇಗೆಂದರೆ—ಶಿವನೇ ತನ್ನ ಚಿಚ್ಛಕ್ತಿಸ್ಫುರಣದಿಂದ ಮಹಾಲಿಂಗ ಸ್ಥಲವಾದನು. ಅದಕ್ಕೆ ಐಕ್ಯಸ್ಥಲವು ಉಪಾಸಕವಾಗಿರುವುದು. ಆ ಮಹಾಲಿಂಗದಲ್ಲಿ ಪರಾಶಕ್ತಿಸ್ಫುರಣದಿಂದ ಪ್ರಸಾದಲಿಂಗವುದಿಸಿ ಅದಕ್ಕೆ ಶರಣಸ್ಥಲವು ಉಪಾಸಕವಾಗಿರುವುದು. ಆ ಪ್ರಸಾದಲಿಂಗದಲ್ಲಿ ಆದಿಶಕ್ತಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸ್ಫುರಣದಿಂದ ಜಂಗಮಲಿಂಗವುದಿಸಿ ಆದಕ್ಕೆ ಪ್ರಾಣಲಿಂಗಿಸ್ಥಲವು ಉಪಾಸಕವಾಗಿರುವುದು. ಆ ಜಂಗಮಲಿಂಗದಲ್ಲಿ ಇಚ್ಛಾಶಕ್ತಿಸ್ಫುರಣದಿಂದ ಶಿವಲಿಂಗವುದಿಸಿ, ಆದಕ್ಕೆ ಪ್ರಸಾದಿಸ್ಥಲವು ಉಪಾಸಕವಾಗಿರುವುದು. ಆ ಶಿವಲಿಂಗಸ್ಥಲದಲ್ಲಿ ಜ್ಞಾನಶಕ್ತಿಸ್ಫುರಣದಿಂದ ಗುರುಲಿಂಗವುದಿಸಿ, ಆದಕ್ಕೆ ಮಾಹೇಶ್ವರಸ್ಥಲವು ಉಪಾಸಕವಾಗಿರುವುದು. ಆ ಗುರುಲಿಂಗದಲ್ಲಿ ಕ್ರಿಯಾಶಕ್ತಿಸ್ಫುರಣದಿಂದ ಆಚಾರಲಿಂಗವುದಿಸಿ, ಆದಕ್ಕೆ ಭಕ್ತಸ್ಥಲವು ಉಪಾಸಕವಾಗಿರುವುದು.

ಪ್ರ—ಶಿವಏವಸ್ವಚಿಚ್ಛಕ್ತ್ಯಾಮಹಾಲಿಂಗಸ್ಥಲಂಭವೇತ್ | ತದುಪಾಸಕರೂಪತ್ವಾ ದೈಕ್ಯಸ್ಥಲಮಭೂನ್ಮಹತ್ || ಸ್ಫುರಣಾದ್ವೈಪರಾಶಕ್ತೇರ್ಮಹಾಲಿಂಗಸ್ಥಲೇಪರೆ | ಪ್ರಸಾದಲಿಂಗಸಂಜ್ಞಂತು ಪ್ರಾದುರಾಸೀನ್ಮಹಾಸ್ಥಲಂ || ತದುಪಾಸಕರೂಪತ್ವಾಚ್ಚರಣಸ್ಥಲಮಾಬಭೌ | ಪ್ರಾದುರ್ಭೂತೇಸ್ಥಲೆತಸ್ಮಿನ್ನಾದಿಶಕ್ತಿಪ್ರಭಾವತಃ || ಸ್ಥಲಂಚರಲಿಂಗಾಖ್ಯಂ ಸಮುತ್ಪನ್ನಮನುತ್ತಮಂ | ತದುಪಾಸಕರೂಪತ್ವಾ ತ್ಪ್ರಾಣಲಿಂಗಿಸ್ಥಲಂ ಬಭೌ || ಸ್ಥಲಾತ್ಸಮುತ್ಥಿತಂಜ್ಯೋತಿರ್ಮಯಂತಸ್ಮಾತ್ಸುಶೋಭನಂ | ಶಿವಲಿಂಗಸ್ಥಲಂ ಸಾಕ್ಷಾದಿಚ್ಛಾಶಕ್ತಿಪ್ರಭಾವತಃ || ತದುಪಾಸಕರೂಪತ್ವಾತ್ಪ್ರಸಾದಿಸ್ಥಲಮುದ್ಬಭೌ | ಶಿವಲಿಂಗಸ್ಥಲೆಜ್ಞಾನಶಕ್ತಿಸ್ಫುರಣಯೋಗತಃ|| ಉದಭೂತ್ಕಾರಣತ್ವೇನಗುರುಲಿಂಗಾಭಿದಂಸ್ಥಲಂ | ತದುಪಾಸಕರೂಪತ್ವಾನ್ಮಾಹೇಶ್ವರಮಹಾಸ್ಥಲಂ || ಗುರುಲಿಂಗಸ್ಥಲೆ ತಸ್ಮಿನ್ ಕ್ರಿಯಾಶಕ್ತಿಪ್ರಭಾವತಃ | ಆಚಾರಲಿಂಗಸಂಜ್ಞಂತುಸ್ಥಲಂಜಾತಂಸುಶೋಭನಂ || ತದುಪಾಸಕರೂಪತ್ವಾದ್ಭಕ್ತಸ್ಥಲಮಜಾಯತ | ಮಹಾಲಿಂಗಂಪ್ರಸಾದಾಖ್ಯಲಿಂಗಂಚರಲಿಂಗಕಂ || ಶಿವಲಿಂಗಂತಥಾಚೈವಗುರುಲಿಂಗಂತತಃಪರಂ | ಆಚಾರಲಿಂಗಮಿತ್ಯೇವಂಪ್ರವೃತ್ತಿಸ್ಸೃಷ್ಟಿಮಾರ್ಗತಃ ||

ಮೇಲೆ ಹೇಳಿದಂತೆ ಷಟ್ಸ್ಥಲಭೇದವನ್ನು ಹೊಂದಿದ ಅಂಗ (ಆತ್ಮ) ದಿಂದ ಆಕಾಶವು ಹುಟ್ಟಿತು. ಆ ಆಕಾಶದಿಂದ ವಾಯುವೂ, ಆದರಿಂದ ಅಗ್ನಿಯೂ, ಆದರಿಂದ ಜಲವೂ, ಅದರಿಂದ ಭೂಮಿಯೂ, ಉದಿಸಿದುವು. ಐಕ್ಯಾದಿ ಭಕ್ತಾಂತಸ್ಥಲಂಗಳೆಲ್ಲಕ್ಕೂ ಕ್ರಮವಾಗಿ ಈ ಆತ್ಮಾದಿಗಳು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅಂಗವಾಗಿರುವುವು. ಹೇಗೆಂದರೆ—ಐಕ್ಯಸ್ಥಲಕ್ಕೆ ಆತ್ಮಾಂಗವು. ಶರಣಸ್ಥಲಕ್ಕೆ ಆಕಾಶಾಂಗವು. ಪ್ರಾಣಲಿಂಗಿಸ್ಥಲಕ್ಕೆ ವಾಯ್ವಂಗವು. ಪ್ರಸಾದಿಸ್ಥಲಕ್ಕೆ ಅಗ್ನ್ಯಂಗವು. ಮಾಹೇಶಸ್ಥಲಕ್ಕೆ ಜಲಾಂಗವು. ಭಕ್ತಸ್ಥಲಕ್ಕೆ ಭೂಮ್ಯಂಗವು.

ಪ್ರ—ಆತ್ಮನಾಕಾಶಸಂಭೂತಿರಾಕಾಶಾದ್ವಾಯುಸಂಭವಃ | ವಾಯೋರಗ್ನಿಸಮುತ್ಪತ್ತಿರಗ್ನೇರಾಪಉದಾಹೃತಾಃ || ಅದ್ಭ್ಯಸ್ತು ಪೃಥ್ವೀಸಂಭೂತಿರ್ಲಕ್ಷಣೈಕ್ಯಪ್ರಭಾವತಃ | ಐಕ್ಯಸ್ಥಲಾದಿಭಕ್ತಾಂತಸ್ಥಲಸಂಭೂತಿರೀರಿತಾ || ಐಕ್ಯಾದಿಭಕ್ತಪರ್ಯಂತಾಶ್ರಮಿಣಾಂಷಟ್ಸ್ಥಲಾತ್ಮನಾಂ | ಅಂಗಾನಾಮಧುನಾತೇಷಾಮಂಗಲಕ್ಷಣಮುಚ್ಯತೆ || ಆತ್ಮಾಂಗಮೈಕ್ಯಮೇವಸ್ಯಾದ್ವ್ಯೋಮಾಂಗಂಶರಣಸ್ಥಲಂ | ವಾಯ್ವಂಗಂಪ್ರಾಣಲಿಂಗಿಸ್ಯಾ ದನಲಾಂಗಂಪ್ರಸಾದಿಜ | ಮಾಹೇಶ್ವರಂಜಲಾಂಗಂಸ್ಯಾದ್ಭಕ್ತಂಭೂಮ್ಯಂಗಮಿಷ್ಯತೆ ||

ಹೀಗೆ ಷಡ್ವಿಧಭಕ್ತಿ ಅಂಗ ಮೊದಲಾದುವುಗಳಿಂದ ಕೂಡಿಕೊಂಡಿರುವ ಐಕ್ಯಾದಿ ಷಟ್ಸ್ಥಲಗಳಲ್ಲಿ ಪ್ರತಿಯೊಂದಕ್ಕೂ ಇರುವ ಲಕ್ಷಣ ತಾರತಮ್ಯಾದಿಗಳು ಹೇಗೆಂದರೆ—ನಾನು ನೀನೆಂಬ ಭೇದವೂ, ದೇಹ ಪ್ರಾಣೇಂದ್ರಿಯಾದಿ ಭೇದಗಳೂ ಭ್ರಾಂತಿಜನ್ಯವಾದುವುಗಳು. ಇವೊಂದೂ ನನಗೆ ಸಂಬಂಧಪಟ್ಟವಲ್ಲವೆಂಬ ಭಾವದಿಂದ ಸುಖಸಾಮರಸ್ಯವನ್ನು ಪಡೆದಿರುವುದೇ ಐಕ್ಯಸ್ಥಲವೆನಿಸಿಕೊಳ್ಳುವುದು. ಜ್ಞಾನಪ್ರಕಾಶಬಲದಿಂದ ತಾನೇ ಲಿಂಗವೆಂತಲೂ, ದೇಹೇಂದ್ರಿಯಾದಿಗಳೆಲ್ಲವೂ ನನ್ನ ರೂಪವೆಂತಲೂ ತಿಳಿದು ಸಕಲ ವಿಷಯುಗಳಲ್ಲೂ ಕೂಡಿ ಆನಂದಭಕ್ತಿಯಿಂದಿರುವುದೇ ಶರಣಸ್ಥಲವೆನಿಸಿಕೊಳ್ಳುವುದು. ಪ್ರಾಣೇಂದ್ರಿಯಾದಿಗಳನ್ನೆಲ್ಲ ನಾನೆಂಬ ಭ್ರಾಂತಿಜನ್ಯವಾದ ಅಜ್ಞಾನವನ್ನು ಬಿಟ್ಟು, ಇದೆಲ್ಲವೂ ಲಿಂಗಮಯವಾದದ್ದೆಂಬದಾಗಿ ತಿಳಿದು ತದೇಕಾಯತ್ತಮಾನಸದಿಂದಿರುವುದೇ ಪ್ರಾಣಲಿಂಗಿಸ್ಥಲವೆನಿಸಿಕೊಳ್ಳುವುದು. ಪ್ರತಿಯೊಂದು ಇಂದ್ರಿಯಗಳ ಮುಖದಿಂದಲೂ ತಾನು ಅನುಭವಿಸತಕ್ಕ ಪದಾರ್ಥಗಳನ್ನು ಮೊದಲು ಲಿಂಗಕ್ಕೆ ಸಮರ್ಪಿಸಿ ಬಳಿಕ ಅದನ್ನು ಭಕ್ತಿಪೂರ್ವಕವಾಗಿ ಲಿಂಗಮುಖದಿಂದ ತಾನು ಪ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗ್ರಹಿಸುವುದೇ ಪ್ರಸಾದಿಸ್ಥಲವೆನಿಸಿಕೊಳ್ಳುವುದು. ಆಸ್ತಿಕ್ಯಬುದ್ಧಿಯಿಂದಲೂ ಲಿಂಗಪೂಜಾನಿತ್ಯವ್ರತದಿಂದಲೂ, ಸತ್ಯಧರ್ಮಶೌಚಾದಿಗಳಿಂದಲೂ, ಸದಾಚಾರದಿಂದಲೂ ಕೂಡಿ ಲಿಂಗೈಕನಿಷ್ಠನಾಗಿ ವೀರಶೈವವ್ರತತತ್ಪರನಾಗಿರುವುದೇ ಮಾಹೇಶ್ವರಸ್ಥಲವೆನಿಸಿಕೊಳ್ಳುವುದು. ದೇಹಪ್ರಾಣೇಂದ್ರಿಯಾದಿಗಳೆಲ್ಲವೂ ಸತ್ಯವೆಂಬಂತೆ ತೋರುತ್ತಿದ್ದರೂ ಇವೆಲ್ಲವೂ ಅಸ್ಥಿರವೆಂದು ತಿಳಿದು ಚಿತ್ತವನ್ನು ಸದಾ ಭಕ್ತಿಕ್ರಿಯಾಚರಣೆಯಲ್ಲೇ ಅಳವಡಿಸಿರುವುದು ಭಕ್ತಸ್ಥಲವೆನಿಸಿಕೊಳ್ಳುವುದು.

ಷಡ್ಭಾಥಭಕ್ತಿ ಸಮೇತನಾ ಮಂಗಾನಾಮನುಪೂರ್ವಶಃ | ಪೃಥಗ್ಲಕ್ಷಣಸದ್ಭಾವಸ್ಥಿತಿರತ್ರನಿಗದ್ಯತೆ || ನಾಹಂತಮಪ್ರಥಿತಶಬ್ದವಿಭೇದವೃತ್ತಿರ್ನ ಪ್ರಾಣದೇಹಮನಇಂದ್ರಿಯಭೌತಿಕಾನಿ | ಸರ್ವಂಭ್ರಮಾತ್ಮಕಮಿದಂ ಮಯಿನೇತಿಭಾವಾದೈಕ್ಯಸ್ಥಲಂಸಮರಸಂ ಸುಖರೂಪಮಾಹುಃ || ಜ್ಞಾನಪ್ರಕಾಶಬಲತಸ್ಸ್ವಯಮೇವಲಿಂಗಂ ದೇಹೇಂದ್ರಿಯಾದಿಮಮರೂಪಮಿತಿಪ್ರಬುದ್ಧ್ಯಾ | ಯುಕ್ತೆಸಮಸ್ತವಿಷಯೆ ಸತಿಯದ್ವಿಶುದ್ಧಂ ತತ್ಪ್ರಾಹುರಾಗಮವಿದಶ್ಶರಣಸ್ಥಲಂಹಿ || ಪ್ರಾಣೇಂದ್ರಿಯಾದಿಷುಮಮಾಹಮಿತಿಪ್ರಮೋಹಂ ಸಂಭ್ರಾಂತಿಸಿದ್ಧಮಪಹಾಯಸಮಸ್ತಮೇತತ್ | ಲಿಂಗೇನಿಧಾಯಮನಸಾಯದನುಪ್ರಯುಕ್ತಂ ತತ್ಪ್ರಾಣಲಿಂಗಿಸುಚರಸ್ಥಲಮಾಹುರಾರ್ಯಾಃ || ಆತ್ಮೋಪಭೋಗ್ಯವಿಷಯಾಣಿಹಿ ಸಾವಧಾನಂದ್ರವ್ಯಾಣ್ಯಹಂಕೃತಿಮಿತ್ರೈರಖಿಲೈಕವರ್ಗ್ಯೈಃ | ಲಿಂಗೆಸಮರ್ಪ್ಯಬಹುಶೋಲಭತೆಪ್ರಸಾದಂಯತ್ತತ್ಪ್ರಸಾದಿಗದಿತಂ ಗುರುಭಿಸ್ಸ್ಥಲಂಸ್ಯಾತ್ || ಆಸ್ತಿಕ್ಯಬುದ್ಧಿನಿಯಮವ್ರತಸತ್ಯ ಧರ್ಮಶೌಚಾದಿಲಕ್ಷಣಪರಿಸ್ಫುಟಸಚ್ಚರಿತ್ರಂ | ಲಿಂಗೈಕ್ಯನೈಷ್ಠಿಕತಯಾಸಹವೀರವೃತ್ತಂ ಮಾಹೇಶ್ವರಸ್ಥಲಮಿತಿಪ್ರವದಂತಿಸಂತಃ || ಮಿಥ್ಯೈವಸತ್ಯಮಿವಭಾತಮಿದಂಶರೀರಂ ಪ್ರಾಣಾರ್ಥಜಾತಮಿತಿತತ್ರನಿವೃತ್ತಚಿತ್ತಂ | ಭಕ್ತಿಕ್ರಿಯಾಚರಣಯೈವಸದಾವಿರಕ್ತಂ ಭಕ್ತಸ್ಥಲಂಭವವಿಕಾರವಿದೂರಮಾಹುಃ ||

ಷಟ್ಸ್ಥಲಗಳ ಆಚಾರಲಕ್ಷಣಾದಿಗಳು ಬೇರೆಬೇರೆಯಾಗಿ ಮೇಲೆ ತಿಳಿಸಲ್ಪಟ್ಟವಷ್ಟೆ. ಇವಾರರಲ್ಲಿ ಮೂರು ಜ್ಞಾನಾತ್ಮಕಗಳು ಮೂರು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕ್ರಿಯಾತ್ಮಕಗಳು. ಐಕ್ಯ ಶರಣ ಪ್ರಾಣಲಿಂಗಿ ಇವು ಮೂರೂ ಜ್ಞಾನಾತ್ಮಕಗಳು. ಪ್ರಸಾದಿ, ಮಾಹೇಶ್ವರ, ಭಕ್ತ, ಇವು ಮೂರೂ ಕ್ರಿಯಾತ್ಮಕಗಳು ಆಗಿರುವುವು. ಲಿಂಗಸ್ಥಲಗಳೆಲ್ಲವೂ ಉಪಾಸ್ಯಗಳೆಂತಲೂ, ಅಂಗಸ್ಥಲಗಳೆಲ್ಲವೂ ಉಪಾಸಕಗಳೆಂತಲೂ ಮೇಲೆಯೇ ಹೇಳಿದೆ. ಅದರಂತೆಯೇ ಈ ಲಿಂಗಾಂಗಸ್ಥಲಗಳನ್ನು ಪೂಜ್ಯಪೂಜಕಗಳೆಂತಲೂ, ಸಾಧ್ಯಸಾಧಕಗಳೆಂತಲೂ ಸೇವ್ಯಸೇವಕಗಳೆಂತಲೂ ತಿಳಿಯಬೇಕು. ಉಪಾಸಕಗಳಾದ ಅಂಗಸ್ಥಲಗಳು ತಮ್ಮ ತಮ್ಮ ಉಪಾಸ್ಯಸ್ಥಲಗಳನ್ನು ಕ್ರಮವಾಗಿ ಪ್ರತಿಯೊಂದೂ, ಸದ್ಭಾವ, ಸುಜ್ಞಾನ, ಸುಮನಸ್ಸು, ನಿರಹಂಕಾರ, ಸುಬುದ್ಧಿ ಸುಚಿತ್ತ ಎಂಬ ಹಸ್ತಗಳಿಂದ ಉಪಾಸಿಸುವುವು ಎಂದು ಅರಿಯಬೇಕು. ಮೇಲ್ಕಂಡ ವಿಷಯಗಳನ್ನೆಲ್ಲ ಸಂಗ್ರಹಿಸಿ ಉಪಾಸ್ಯೋಪಾಸಕಲಕ್ಷಣವನ್ನು ಗೊತ್ತುಮಾಡಿದರೆ-ಐಕ್ಯನು ಚಿಚ್ಛಕ್ತಿ ಸಮೇತವಾದ ಮಹಾಲಿಂಗವನ್ನು ಆತ್ಮಾಂಗದಲ್ಲಿ ಸದ್ಭಾವಹಸ್ತದಿಂದ ಸಮರಸಭಕ್ತಿಯೊಡನೆ ಕೂಡಿ ಪೂಜಿಸುವನು.

ಶರಣನು—ಪರಾಶಕ್ತಿ ಸಮೇತವಾದ ಪ್ರಸಾದಲಿಂಗವನ್ನು ಆಕಾಶಾಂಗದಲ್ಲಿ ಸುಜ್ಞಾನಹಸ್ತದಿಂದ ಆನಂದಭಕ್ತಿಯೊಡನೆ ಕೂಡಿ ಪೂಜಿಸುವನು.

ಪ್ರಾಣಲಿಂಗಿಯು—ಆದಿಶಕ್ತಿಯಿಂದ ಕೂಡಿದ ಜಂಗಮ ಲಿಂಗವನ್ನು ವಾಯ್ವಂಗದಲ್ಲಿ ಸುಮನೋಹಸ್ತದಿಂದ ಅನುಭವಭಕ್ತಿಯೊಡನೆ ಕೂಡಿ ಪೂಜಿಸುವನು.

ಪ್ರಸಾದಿಯು—ಇಚ್ಛಾಶಕ್ತಿಯಿಂದ ಕೂಡಿದ ಶಿವಲಿಂಗವನ್ನು ಅಗ್ನ್ಯಂಗದಲ್ಲಿ ನಿರಹಂಕಾರಹಸ್ತದಿಂದ ಅವಧಾನಭಕ್ತಿಯೊಡನೆ ಕೂಡಿ ಪೂಜಿಸುವನು.

ಮಾಹೇಶ್ವರನು—ಜ್ಞಾನಶಕ್ತಿಯಿಂದ ಕೂಡಿದ ಗುರುಲಿಂಗವನ್ನು ಜಲಾಂಗದಲ್ಲಿ ಸುಬುದ್ಧಿಹಸ್ತದಿಂದ ನಿಷ್ಠಾಭಕ್ತಿಯೊಡನೆ ಕೂಡಿ ಪೂಜಿಸುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭಕ್ತನು—ಕ್ರಿಯಾಶಕ್ತಿಯಿಂದ ಕೊಡಿದ ಆಚಾರಲಿಂಗಗಳನ್ನು ಘೂಮ್ಯಂಗದಲ್ಲಿ ಸುಚಿತ್ತಹಸ್ತದಿಂದ ಸದ್ಭಕ್ತಿಯೊಡನೆ ಕೂಡಿ ಪೂಜಿಸುವನು ಎಂದು ವಿದಿತವಾಗುವುದು. ಈ ಮೇಲ್ಕಂಡ ವಿಧದ ಉಪಾಸನೆಯೇ ಲಿಂಗಾಂಗಸಂಯೋಗವೆನಿಸುವುದು. ಅದರ ವಿಧಾನವು ಕ್ರಮವಾಗಿ ಮುಂದೆ ವಿವರಿಸಲ್ಪಡುವುದು.

ಲಿಂಗಾಂಗಸಂಯೋಗ.

ಲಿಂಗವೆಂದರೆ ಬ್ರಹ್ಮ (ಶಿವ) ಅಂಗವೆಂದರೆ ಜೀವ ಈಶಜೀವರುಗಳ ಸಂಮ್ಯಕ್‌ಸಂಬಂಧವೇ (ಎಂದರೆ ನಿತ್ಯಸಂಬಂಧವೇ) ಸಂಯೋಗವೆನಿಸಿಕೊಳ್ಳುವುದು. ಲಿಂಗವು ಶಕ್ತಿಯಿಂದ ನಾನಾಭೇದಗಳಾದಂತೆಯೇ ಅಂಗವು ಭಕ್ತಿಯಿಂದ ಅನೇಕ ಭೇದಗಳುಳ್ಳದ್ದಾಯಿತು. ಶಕ್ತಿಸಮೇತಗಳಾದ ಪ್ರತಿಯೊಂದು ಲಿಂಗಸ್ಥಲವೂ ಸಾಕ್ಷಾಚ್ಛಿವನೇ ಆಗಿರುವಂತೆಯೇ ಭಕ್ತಿಸಮೇತಗಳಾದ ಪ್ರತಿಯೊಂದು ಅಂಗಸ್ಥಲವೂ ಸಾಕ್ಷಾಜ್ಜೀವವೇ ಆಗಿರುವುದು. ಮಹೇಶ್ವರನು ಯಾವ ಯಾವ ರೂಪದಿಂದ ಪೂಜ್ಯತ್ವವನ್ನು ವಹಿಸಿದನೋ ಅದರಂತೆಯೇ ಜೀವರೂ ಆಯಾರೂಪದಿಂದ ಪೂಜಕತ್ವವನ್ನು ವಹಿಸಿ ಅನುಸರಿಸಿರುವರು. ಈ ಪೂಜ್ಯಪೂಜಕಸಂಯೋಗಸದ್ಭಾವವೇ ಸಾಮರಸ್ಯವು. ಆ ಸಾಮರಸ್ಯವೇ ಸಾಯುಜ್ಯರೂಪವಾದ ಮುಕ್ತಿಯೆನಿಸಿಕೊಳ್ಳುವುದು. ಅದುಕಾರಣ ಲಿಂಗಾಂಗಸಾಮರಸ್ಯಕ್ಕಿಂತಲೂ ಪರತರವಾದ ಮುಕ್ತಿಯು ಬೇರೊಂದಿಲ್ಲ. ಆ ಲಿಂಗಾಂಗಸಂಯೋಗವಿಧಿಯು-ಇಲ್ಲಿ ತಿಳಿಸಲ್ಪಡುತಿದೆ.

"ವಿಧಿ" ಯೆಂದರೆ ಕರ್ತವ್ಯರೂಪವಾದ ಉಪದೇಶ. ಅಂತಹ ಉಪದೇಶವನ್ನು ತನಗೆ ಮಾಡುವವನು ಸದ್ಗುರುವು. ಅದುಕಾರಣ ಅವಿದ್ಯಾನಾಶವನ್ನು ಮಾಡಿ, ಶಿವವಿದ್ಯಾದಾನವನ್ನು ಮಾಡುವ ಆ ಪರಮಗುರುವನ್ನು ಮೊದಲು ಮುಮುಕ್ಷುವು ಅನುಸರಿಸುವನು. ಈ ಮುಮುಕ್ಷುವು ತಾನೇ ಸಾಕ್ಷಾಚ್ಛಿವಾಂಶನಾಗಿದ್ದರೂ ವ್ಯವಹಾರದೆಶೆಯಲ್ಲಿ ಸಂಸಾರಿಯೋಪಾದಿಯಲ್ಲಿ ತೋರುತ್ತಿರುವನು. ಇವನ ಅವಿದ್ಯಾಬಂಧದಿಂದ ಸಂಸಾರವೆಲ್ಲವೂ ಇವನಿಗೆ ಸತ್ಯವಾಗಿ ತೋರುತ್ತಿರುವುದು. ಇವನು

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತನ್ನಲ್ಲಿರುವ ಶಿವಾಂಶತ್ತ್ವವನ್ನೂ ಸ್ವಕೀಯಶಕ್ತಿಯನ್ನೂ ಕೂಡ ತಿಳಿಯದೆ ಗುರುವಿನ ಬಳಿಗೆ ಹೋಗಿ ನಾನು ಯಾರೆಂಬುದನ್ನು ಕೇಳಿಕೊಳ್ಳುವನು. ಆ ಗುರುವಾದರೊ "ತತ್ತ್ವಮಸಿ" (ಆ ಬ್ರಹ್ಮನೇ ನೀನು) ಎಂದು ಸತ್ಯಾರ್ಥವನ್ನು ತಿಳಿಸಿಕೊಡುವನು. ಮತ್ತು ಈ ದೇಹಕರಣಾದಿಗಳೆಲ್ಲವೂ ಅವಿದ್ಯೆಯಿಂದ ಕಲ್ಪಿತಗಳಾಗಿರುವುವು. ಅಂತಹ ನಿನ್ನ ಭ್ರಾಂತಿಯು ತೊಲಗಿಹೋಗುವುದಕ್ಕಾಗಿ ನೀನು ಸದಾ ಲಿಂಗಾಂಗಸಂಯೋಗಜ್ಞಾನನಿಷ್ಠತ್ವವನ್ನು ವಹಿಸು ಎಂದು ಹೇಳಿಕೊಡುವನು. ಆ ಉಪದೇಶಕ್ರಮವೆಂತೆಂದರೆ:—ಲಿಂಗಶಬ್ದಕ್ಕೆ ತತ್‌ಪದವಾಚ್ಯವಾದ ಬ್ರಹ್ಮವೆಂದರ್ಥ. ಅಂಗಶಬ್ದಕ್ಕೆ ತ್ವಂಪದವಾಚ್ಯನಾದ ಜೀವನೆಂದರ್ಥ. ಲಿಂಗವೇ ಸನ್ಮಾತ್ರವು ಅಂಗವೇ ಚಿನ್ಮಾತ್ರವು, ಇವೆರಡರ ಸಂಯೋಗವೇ ಆನಂದಮಾತ್ರವು. ಲಿಂಗವೇ ನಾದವು, ಅಂಗವೇ ಬಿಂದುವು. ಇವೆರಡರ ಸಂಯೋಗವೇ ಕಳೆಯು. ಲಿಂಗವೇ ಮಂತ್ರವು, ಅಂಗವೇ ಕ್ರಿಯೆಯು ಇವೆರಡರ ಪ್ರಯೋಗವೇ ಸಂಯೋಗವೆನಿಸಿಕೊಳ್ಳುವುದು. ಲಿಂಗವೇ ಪುರುಷ, ಅಂಗವೇ ಪ್ರಕೃತಿ, ಇವೆರಡರ ಪ್ರೇರಕತ್ತ್ವವೇ ಸಂಯೋಗವು. ಲಿಂಗವೇ ಅಕಾರ, ಅಂಗವೇ ಉಕಾರ, ಮಕಾರವೇ ಸಂಯೋಗವಾಗಿ ಓಂಕಾರಪ್ರಣವವಾಗಿರುವುದು ಎಂಬುದನ್ನು ತನ್ನ ಬೋಧಾಬಲದಿಂದ ವಿಶದಪಡಿಸುವನು. ಮತ್ತು ಆ ಶಿಷ್ಯನಿಗೆ ಗುರುವು ಅವಿದ್ಯಾಪಾಶಭೇದಕವಾದ ಶಿವದೀಕ್ಷೆಯನ್ನು ಮಾಡುವನು. ಈ ದೀಕ್ಷೆಯಿಂದ ಅವನಿಗೆ ಮಲತ್ರಯವಿಮೋಚನವಾಗಿ ಸರ್ವಾಂಗಲಿಂಗಸಿದ್ಧಿಯುಂಟಾಗುವುದು. ಎಳ್ಳಿನಲ್ಲಿರುವ ಎಣ್ಣೆಯೂ, ಕಟ್ಟಿಗೆಯಲ್ಲಿರುವ ಬೆಂಕಿಯೂ, ಹಾಲಿನಲ್ಲಿರುವ ತುಪ್ಪವೂ ತಿಳಿಯಲ್ಪಡುವಂತೆ ತನ್ನಲ್ಲೇ ಇರುವ ಬ್ರಹ್ಮಭಾವವನ್ನು ಗುರುವು ತನಗೆ ತೋರಿಸಿಕೊಟ್ಟ ಬಳಿಕ ಈ ದೇಹಿಯು ಸಕಲ ಕರ್ಮಕ್ಷಯವೂ ಆಗಿ, ವಿದ್ಯಾಬಂಧನಗಳೆಲ್ಲ ಕಿತ್ತುಹೋಗಿ, ನಾನಾಸಂಶಯಗಳೆಲ್ಲ ತೊಲಗಿಹೋಗುವುವು. ನಿಷ್ಕಳವಾದ ಬ್ರಹ್ಮವು ಜ್ಯೋತೀರೂಪವಾಗಿ ತನಗೆ ತಾನೇ ಹೊಳೆದು ಸದಾತೋರುತ್ತಿರುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹಿಂದೆ ಹೇಳಿದಮೇರೆ ಮುಮುಕ್ಷುವಿಗೆ ತನ್ನಲ್ಲಿರುವ ಬ್ರಹ್ಮಭಾವವನ್ನು ಗುರುವು ತೋರ್ಪಡಿಸಿಕೊಡುವಾಗ ಈ ಶಿಷ್ಯನ ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರು ಶರೀರಗಳಲ್ಲೂ ಇರುವ ಆಣವ ಮಾಯಾಕಾರ್ಮಿಕಗಳೆಂಬ ತ್ರಿವಿಧಮಲಗಳನ್ನೂ ವೇಧಾ ಮನು ಕ್ರಿಯೆಯೆಂಬ ತ್ರಿವಿಧ ದೀಕ್ಷಾಬಲದಿಂದ ಈಶ್ವರನು ತ್ರಿಪುರವನ್ನು ಸುಟ್ಟಂತೆ ಸುಟ್ಟು, ಇಷ್ಟ ಪ್ರಾಣಭಾವವೆಂಬ ತ್ರಿವಿಧಲಿಂಗಗಳನ್ನು ಸ್ಥಾಪಿಸುವನು. ಎಂದರೆ—ಬಹಿರಂಗವೆನಿಪ ತ್ಯಾಗಾಂಗಾಪರನಾಮಕವಾದ ಸ್ಥೂಲಶರೀರದಲ್ಲಿ ಕ್ರಿಯಾದೀಕ್ಷಾಬಲದಿಂದ ಇಷ್ಟಲಿಂಗವನ್ನೂ, ಅಂತರಂಗವೆನಿಪ ಭೋಗಾಂಗಾಪರನಾಮಕವಾದ ಸೂಕ್ಷ್ಮಶರೀರದಲ್ಲಿ ಮಂತ್ರದೀಕ್ಷಾಬಲದಿಂದ ಪ್ರಾಣಲಿಂಗವನ್ನೂ, ಅತ್ಮಾಂಗವೆನಿಪ ಯೋಗಾಂಗಾಪರನಾಮಕವಾದ ಕಾರಣಶರೀರದಲ್ಲಿ ವೇಧಾದೀಕ್ಷಾಬಲದಿಂದ ಭಾವಲಿಂಗವನ್ನೂ ಸ್ಥಾಪಿಸಿಕೊಡುವನು. ಹೀಗೆ ತನ್ನ ಶರೀರದಲ್ಲಿ ಸ್ಥಾಪಿಸಲ್ಪಟ್ಟಿರುವ ಲಿಂಗತ್ರಯವನ್ನೂ ಪುರುಷನು ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥಾತ್ರಯಗಳಲ್ಲೂ ವಿಶ್ವತೈಜಸಪ್ರಾಜ್ಞರೂಪನಾಗಿ ಉಪಾಸಿಸುತ್ತಿರುವನು. ಈ ಉಪಾಸನೆಯೇ ಸಂಯೋಗವೆನಿಸಿಕೊಳ್ಳುವುದು. ಸಂಯೋಗವೆಂದರೆ—ದ್ವೈತಭಾವನಾಶ. ಆ ನಾಶವೇ ನಿವೃತ್ತಿ. ನಿವೃತ್ತಿಯೇ ವಿಶ್ರಾಂತಿ. ಆ ವಿಶ್ರಾಂತಿಯೇ ಪರಮಪದ ಅಥವಾ ಮುಕ್ತಿಯೆನಿಸಿಕೊಳ್ಳುವದು. ಸ್ಫಟಿಕಕ್ಕೂ ಅದರ ಸ್ವಚ್ಛತೆಗೂ, ದೀಪಕ್ಕೂ ಅದರ ಕಾಂತಿಗೂ, ಆಲಿಕಲ್ಲಿಗೂ ನೀರಿಗೂ, ಕರ್ಪೂರಕ್ಕೂ ಅದರ ವಾಸನೆಗೂ, ಆಕಾಶಕ್ಕೂ ವಾಯುವಿಗೂ ಇರುವ ಭೇದ ಮತ್ತು ಸಂಬಂಧಗಳಂತೆಯೇ ಲಿಂಗಾಂಗಗಳ ಭೇದ ಮತ್ತು ಸಂಬಂಧಗಳಂತೆಯೇ ಲಿಂಗಾಂಗಗಳ ಭೇದ ಮತ್ತು ಸಂಯೋಗಗಳು ತನ್ನಲ್ಲಿರುವುವು. ಆತ್ಮನೇ ಕ್ಷೇತ್ರವಾಗಿಯೂ ಭಕ್ತಿಯೇ ಬೀಜವಾಗಿಯೂ, ಮಹೇಶ್ವರನೇ ಬೀಜಿ (ವೃಕ್ಷ) ಯಾಗಿಯೂ ಇರುವರು. ಅದು ಕಾರಣ ಬೀಜವೃಕ್ಷ ಕ್ಷೇತ್ರಗಳಿಗೆ ಸದಾ ಸಂಯೋಗವೇ ಹೊರ್ತು ವಿಯೋಗವಿಲ್ಲ. ಈ ವಿಧವಾದ ಲಿಂಗಾಂಗಸಂಯೋಗಭಾವವನ್ನರಿತು ಷಡ್ವಿಧ ಭಕ್ತಿಗಳಿಂದ ಕೂಡಿದ ಲಿಂಗಸ್ಥಲಗಳು ಶಕ್ತಿಗಳಿಂದ ಕೂಡಿದ ಷಡ್ಲಿಂಗ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸ್ಥಲಗಳನ್ನು ಉಪಾಸಿಸುವುದೇ ಷಟ್ಸ್ಥಲಸಾಧನೆಯೆನಿಸಿಕೊಳ್ಳುವುದು. ಸಾಧಕನಾದ ವೀರಶೈವನು ಈ ಷಟ್ಸ್ಥಲಸಾಧನೆಯನ್ನು ಮಾಡುವುದರಿಂದ ಪರಶಿವನು ಸಾಧ್ಯನಾಗುವನು.

ಈತೆರದ ಸಾಧಕನಾದ ವೀರಶೈವನು ಸದಾ ಸರ್ವಾಂಗಲಿಂಗಿಯೆನಿಸಿಕೊಂಡಿರುವನು. ಆ ವಿವರವು ಇನ್ನು ಮುಂದೆ ಹೇಳಲ್ಪಡುವುದು.

ನಿಷ್ಕಳ ಬ್ರಹ್ಮರೂಪವಾದ ಮಹಾಲಿಂಗವೊಂದೇ ಇಷ್ಟಪ್ರಾಣ ಭೇದದಿಂದ ಮೂರು ರೂಪವಾಗಿ ಗುರುವಿನಿಂದ ಶಿಷ್ಯನ ತ್ರಿವಿಧದೇಹಗಳಲ್ಲಿ ಸ್ಥಾಪಿಸಲ್ಪಟ್ಟಂತೆಯೇ ಇವನ ಜ್ಞಾನೇಂದ್ರಿಯಗಳಲ್ಲೂ ಒಂದೊಂದು ಲಿಂಗವು ಪ್ರತಿಷ್ಠಿಸಲ್ಪಟ್ಟಿರುವುದು. ಹೇಗೆಂದರೆ-ಹೃದಯಾಂಗದಲ್ಲಿ ಮಹಾಲಿಂಗ, ಶ್ರೋತ್ರಾಂಗದಲ್ಲಿ ಪ್ರಸಾದಲಿಂಗ, ತ್ವಗಂಗದಲ್ಲಿ ಚರಲಿಂಗ, ನೇತ್ರಾಂಗದಲ್ಲಿ ಶಿವಲಿಂಗ, ಜಿಹ್ವಾಂಗದಲ್ಲಿ ಗುರುಲಿಂಗ, ನಾಸಿಕಾಂಗದಲ್ಲಿ ಆಚಾರಲಿಂಗವು. ಇದರಂತೆಯೇ ಕರ್ಮೇಂದ್ರಿಯಗಳಲ್ಲೂ ಒಂದೊಂದು ಲಿಂಗವು ಪ್ರತಿಷ್ಠಿಸಲ್ಪಟ್ಟಿರುವುದು. ಒಂದು ಜ್ಞಾನೇಂದ್ರಿಯ, ಅದರ ವಿಷಯ; ಒಂದು ಕರ್ಮೇಂದ್ರಿಯ, ಅದರ ವಿಷಯ; ಆ ಇಂದ್ರಿಯಕ್ಕೆ ಸಂಬಂಧಿಸಿದ ಭೂತ, ಹೀಗೆ ಐದೈದಕ್ಕೂ ಈಶಾನಾದಿ ಮೂರ್ತಿಗಳಲ್ಲಿ ಕ್ರಮವಾಗಿ ಒಂದೊಂದು ಅಧಿದೈವತೆಗಳೆನಿಸಿಕೊಂಡಿರುವುವು.

ಹೇಗೆಂದರೆ—

ಜ್ಞಾನೇಂದ್ರಿಯ-	ತದ್ವಿಷಯ.	ಕರ್ಮೇಂದ್ರಿಯ—	ತದ್ವಿಷಯ.	ಭೂತ—	ಅಧಿದೈವ.
ಶ್ರೋತ್ರ	ಶಬ್ದ	ವಾಕ್ಕು	ವಚನ	ಆಕಾಶ	ಈಶಾನ
ತ್ವಕ್ಕು	ಸ್ಪರ್ಶ	ಪಾಣಿ	ಆದಾನ	ವಾಯು	ತತ್ಪುರುಷ
ನೇತ್ರ	ರೂಪ	ಪಾದ	ಗಮನ	ಅಗ್ನಿ	ಅಘೋರ
ಜಿಹ್ವಾ	ರಸ	ಪಾಯು	ಆನಂದ	ಜಲ	ವಾಮದೇವ
ನಾಸಿಕ	ಗಂಧ	ಗುಹ್ಯ	ವಿಸರ್ಜನ	ಪೃಥ್ವಿ	ಸದ್ಯೋಜಾತ

ಈ ಮೇಲ್ಕಂಡ ಜ್ಞಾನಕರ್ಮೇಂದ್ರಿಯಾದಿಗಳೆಲ್ಲಕ್ಕೂ ಹೃದಯವೇ ಆಶ್ರಯವು. ಹೀಗೆ ಎಲ್ಲಕ್ಕೂ ಇದೇ ಆಶ್ರಯವಾಗಿರುವುದರಿಂದಲೂ, ನಿರ್ಮಲವಾಗಿರುವುದರಿಂದಲೂ ಇದು ಕರ್ಮಜ್ಞಾನೋಭಯಾತ್ಮಕವೆನಿಸಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕೊಳ್ಳುವುದು. ಸಕಲೇಂದ್ರಿಯಗಳಿಗೂ ಇದು ಅವಕಾಶವನ್ನು ಕೊಟ್ಟು ಕೊಂಡಿರುವುದರಿಂದ ಇದು ಹೃದಯಾಕಾಶವೆಂದು ಹೇಳಿಸಿಕೊಳ್ಳುವುದು. ಇದು ಮಹಾಲಿಂಗಕ್ಕಾಶ್ರಯವಾದದ್ದು. ಮೇಲ್ಕಂಡ ಇಂದ್ರಿಯಗಳೆಲ್ಲವೂ ಸ್ಥೂಲಾಂಗದಲ್ಲಿ ಸ್ಥೂಲರೂಪವಾಗಿಯೂ, ಸೂಕ್ಷ್ಮಾಂಗದಲ್ಲಿ ಸೂಕ್ಷ್ಮ ರೂಪವಾಗಿಯೂ, ಕಾರಣಾಂಗದಲ್ಲಿ ಕಾರಣರೂಪವಾಗಿಯೂ ಇರುತ್ತಿರುವುವು. ಈ ತ್ರಿವಿಧರೂಪಗಳಾದ ಇಂದ್ರಿಯಗಳಲ್ಲೂ ಸತ್ವಾದಿಲಕ್ಷಣ ಲಕ್ಷಿತವಾದ ಗುರೂಪದೇಶ ಸಂಸಿದ್ಧಲಿಂಗವು ಸರ್ವತೋಮುಖವಾಗಿ ಶೋಭಿಸುತ್ತಿರುವುದು. ಪ್ರತಿಯೊಂದು ಇಂದ್ರಿಯಗಳ ಮುಖವಾಗಿ ಬರುವ ವಿಷಯವನ್ನೂ ಲಿಂಗಮುಖವಾಗಿಯೇ ಪರಿಗ್ರಹಿಸುವುದು ಷಟ್ಸ್ಥಲಜ್ಞಾನಸಂಪನ್ನನಾದ ವೀರಶೈವನ ಧರ್ಮವಾಗಿರುವುದು. ಹೀಗೆ ಲಿಂಗ ಮುಖವನ್ನು ತಿಳಿಯುವುದೇ ಪರಮತರವಾದ ರಹಸ್ಯವಾಗಿರುವುದು. ಈ ರಹಸ್ಯವು ಸೂಕ್ಷ್ಮದರ್ಶಿಗಳಿಗಲ್ಲದೆ ಜಡದೇಹಿಗಳಿಗೆ ಗೊತ್ತಾಗದು. ಅಂತಹ ಸೂಕ್ಷ್ಮದರ್ಶಿಗಳಿಗೆ ಹೃದಯಕ್ಕೆ ಹೃದಯವೂ, ಶ್ರೋತ್ರಕ್ಕೆ ಶ್ರೋತ್ರವೂ, ತ್ವಕ್ಕಿಗೆ ತ್ವಕ್ಕೂ, ನೇತ್ರಕ್ಕೆ ನೇತ್ರವೂ, ಜಿಹ್ವೆಗೆ ಜಿಹ್ವೆಯೂ, ನಾಸಿಕಕ್ಕೆ ನಾಸಿಕವೂ, ವಾಕ್ಕಿಗೆ ವಾಕ್ಕೂ, ಪಾಣಿಗೆ ಪಾಣಿಯೂ, ಪಾದಕ್ಕೆ ಪಾದವೂ, ಪಾಯುವಿಗೆ ಪಾಯುವೂ, ಗುಹ್ಯಕ್ಕೆ ಗುಹ್ಯವೂ ಲಿಂಗಮುಖವಾಗಿ ತೋರುವುವು. ಹೇಗೆಂದರೆ—ಹೃದಯಕ್ಕೆ ಹೃದಯವೇ ಮಹಾಲಿಂಗವು, ಶ್ರೋತ್ರಕ್ಕೆ ಶ್ರೋತ್ರವೇ ಪ್ರಸಾದಲಿಂಗವು, ತ್ವಕ್ಕಿಗೆ ತ್ವಕ್ಕೇ ಜಂಗಮಲಿಂಗವು, ನೇತ್ರಕ್ಕೆ ನೇತ್ರವೇ ಶಿವಲಿಂಗವು, ಜಿಹ್ವೆಗೆ ಜಿಹ್ವೆಯೇ ಗುರುಲಿಂಗವು, ನಾಸಿಕಕ್ಕೆ ನಾಸಿಕವೇ ಆಚಾರಲಿಂಗವು. ಎಂಬದಾಗಿ ಹೇಳಲ್ಪಡುವುದು.

ಮೇಲೆ ಪ್ರತಿಯೊಂದು ಲಿಂಗಮುಖವೂ ತಿಳಿಸಲ್ಪಟ್ಟಿತಷ್ಟೆ. ಈಗ ಆ ಆರುಲಿಂಗಗಳ ಭೇದವು ವರ್ಣಿಸಲ್ಪಡುವುದು.

ಗುರುಲಿಂಗಸ್ಥಲವು—ದೀಕ್ಷಾ, ಶಿಕ್ಷಾ, ಅನುಭಾವವೆಂಬ ತ್ರಿವಿಧಸ್ಥಲಗಳುಳ್ಳದ್ದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆಚಾರಲಿಂಗಸ್ಥಲವು—ಸದಾಚಾರ, ನಿಯತಾಚಾರ, ಗಣಾಚಾರ ವೆಂಬ ತ್ರಿವಿಧಭೇದಗಳುಳ್ಳದ್ದು.

ಪ್ರಸಾದಲಿಂಗಸ್ಥಲವು—ಶುದ್ಧ, ಸಿದ್ಧ, ಪ್ರಸಿದ್ಧವೆಂಬ ಭೇದತ್ರಯವುಳ್ಳದ್ದು.

ಜಂಗಮಲಿಂಗಸ್ಥಲವು—ಸ್ವಯ, ಚರ, ಪರ, ನಾಮಕಭೇದತ್ರಯವುಳ್ಳದ್ದು.

ಶಿವಲಿಂಗಸ್ಥಲವು—ಇಷ್ಟ, ಪ್ರಾಣ, ಭಾವವೆಂಬ ತ್ರಿವಿಧಭೇದವುಳ್ಳದ್ದು.

ಮಹಾಲಿಂಗಸ್ಥಲವು—ಪಿಂಡಜ, ಅಂಡಜ, ಬಿಂದ್ವಾಕಾಶವೆಂಬ ತ್ರಿವಿಧಭೇದಗಳುಳ್ಳದ್ದು.

ಈ ಪ್ರತಿಯೊಂದರ ಲಕ್ಷಣಗಳು ಹೇಗೆಂದರೆ—ಗುರುವು ಕುಂಡ ಮಂಟಪಹೋಮಾದಿಗಳನ್ನು ಮಾಡಿ ಅಧ್ವಶೋಧನಕಲಾನ್ಯಾಸಗಳಿಂದಲೂ ಮಂತ್ರೋಪದೇಶದಿಂದಲೂ ಮಾಡುವ ಕ್ರಿಯೆಯೇ ದೀಕ್ಷಾಸ್ಥಲವೆನ್ನಿಸಿಕೊಳ್ಳುವುದು. ಗುರುಲಿಂಗಚರಗಳೆಂಬ ತ್ರಿವಿಧವಸ್ತುಗಳೂ ಏಕರೂಪವಾದುವುಗಳೆಂಬ ಜ್ಞಾನವನ್ನುಂಟುಮಾಡಿಕೊಡುವುದೇ ಶಿಕ್ಷಾಸ್ಥಲವೆನ್ನಲ್ಪಡುವುದು. ಪೂರ್ವಜನ್ಮಸುಕೃತವಾಸನೆಯಿಂದಲೂ ಸಂಸ್ಕಾರ ವಿಶೇಷದಿಂದಲೂ ಲಭಿಸಿದ ಶಿವಭಕ್ತಿ ಶ್ರದ್ಧೆ ಶಿವಾರ್ಚನೆಗಳಿಂದ ಪಡೆಯುವ ಜ್ಞಾನವಿಶೇಷವೇ ಅನುಭಾವಸ್ಥಲವೆನಿಸಿಕೊಳ್ಳುವುದು.

ಸಜ್ಜನರಾದ ಶಿವಭಕ್ತರು ಯಾವ ನಡೆಯನ್ನು ನೋಡಿ ಸಂತೋಷಪಡುತ್ತಾರೋ ಅಂತಹ ಆಚಾರದಲ್ಲಿ ನಡೆದು ಸಂತುಷ್ಟನಾಗಿರುವುದೇ ಸದಾಚಾರಸ್ಥಲವೆನಿಸಿಕೊಳ್ಳುವುದು. ತಾನು ಕೈಕೊಂಡ ಆಚಾರಕ್ಕೆ ಲೋಪವುಂಟಾದರೆ ಪ್ರಾಣವನ್ನೇ ಬಿಡುವೆನೆಂದು ಸಶಪಥವಾಗಿ ಆಚಾರವನ್ನು ಪರಿಗ್ರಹಿಸಿಕೊಳ್ಳುವುದಕ್ಕೆ ನಿಯತಾಚಾರಸ್ಥಲವೆಂದು ಹೆಸರು. ಗುರುಲಿಂಗಜಂಗಮಾದಿ ವಿಷಯದಲ್ಲಿ ದೂಷಣೆಯನ್ನು ಕೇಳಿದರೆ ಕೂಡಲೇ ಆ ದೂಷಕನನ್ನು ಶಿಕ್ಷಿಸುವೆನು. ಅಥವಾ ಆ ಸ್ಥಲವನ್ನೇ ಬಿಡುವೆನೆಂಬ ಸಂಕಲ್ಪವುಳ್ಳದ್ದೇ ಗಣಾಚಾರಸ್ಥಲವೆನ್ನಿಸಿಕೊಳ್ಳುವುದು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗುರುವಿನಲ್ಲಿ ಸೇವಾವೃತ್ತಿಯಲ್ಲಿದ್ದುಕೊಂಡು ಅವನ ಭುಕ್ತಶೇಷವನ್ನುಪಭೋಗಿಸಿಕೊಂಡಿರುವುದೇ ಶುದ್ಧಪ್ರಸಾದಸ್ಥಲವೆನ್ನಲ್ಪಡುವುದು. ಗುರುಲಿಂಗಜರಗಳಲ್ಲಿ ಐಕ್ಯವನ್ನು ತಿಳಿದು ಲಿಂಗಾರ್ಪಿತವಾದ ಪ್ರಸಾದವಲ್ಲದೆ ಇತರ ವಸ್ತುಗಳನ್ನು ಸ್ವೀಕರಿಸದಿರುವಿಕೆಯೇ ಸಿದ್ಧಪ್ರಸಾದಸ್ಥಲವೆನ್ನಲ್ಪಡುವುದು. ಗುರುಲಿಂಗಜರಗಳಲ್ಲಿ ಅಭೇದಭಕ್ತಿಯಿಂದ ವರ್ತಿಸುತ್ತ ಜಂಗಮಪ್ರಸಾದವನ್ನಲ್ಲದೆ ತದಿತರವಸ್ತುಗಳನ್ನು ಪರಿಗ್ರಹಿಸುವುದಿಲ್ಲವೆಂಬುದೇ ಪ್ರಸಿದ್ಧಪ್ರಸಾದಸ್ಥಲವೆನಿಸಿಕೊಳ್ಳುವುದು.

ಲಿಂಗಲಾಂಛನವನ್ನು ಧರಿಸಿ, ಬಹಿರ್ವ್ಯಾಪಾರದಲ್ಲಿ ವಿಮುಖನಾಗಿ ಕೇವಲಾನಂದಮಯನಾಗಿರುವುದೇ ಸ್ವಯಲಿಂಗಸ್ಥಲವೆನಿಸಿಕೊಳ್ಳುವುದು. ತನಗೆ ಲಿಂಗವು ಅಭಿನ್ನವಾದುದೆಂಬ ಭಾವದಿಂದಿದ್ದುಕೊಂಡು ತನ್ನ ಮನಸ್ಸಿಗೆ ಬಂದಂತೆ ನಡೆಯುತ್ತ ನಿರಾಕುಲನಾಗಿದ್ದುಕೊಂಡಿರುವುದೇ ಜರಲಿಂಗಸ್ಥಲವೆನಿಸಿಕೊಳ್ಳುವುದು. ನಿರ್ದ್ವಂದ್ವವಾಗಿಯೂ ಶಾಶ್ವತವಾಗಿಯೂ ಗಮನಾಗಮನವಿವರ್ಜಿತವಾಗಿಯೂ ಇರುವ ಜ್ಯೋತಿರ್ಲಿಂಗಸ್ವರೂಪವೇ ತಾನೆಂಬ ಸ್ಥಿತಿಯಲ್ಲಿರುವುದು ಪರಲಿಂಗಸ್ಥಲವೆನಿಸಿಕೊಳ್ಳುವುದು.

ಮಂತ್ರೋಪದೇಶಪುರಸ್ಸರವಾಗಿ ಗುರುವಿನಿಂದ ತನ್ನ ಹಸ್ತಕ್ಕೆ ಕೊಡಲ್ಪಟ್ಟುದೇ ಇಷ್ಟಲಿಂಗಸ್ಥಲವೆನಿಸಿಕೊಳ್ಳುವುದು. ದೇಹೇಂದ್ರಿಯಾದಿಗಳ ಗುಣವನ್ನು ದೂರೀಕರಿಸಿ, ಶಿವಾರ್ಪಿತಾಂತರಂಗನಾಗಿ, ಆ ಶಿವನಲ್ಲೇ ಅಳವಟ್ಟ ಮನಸ್ಸಿನಿಂದಿರುವುದೇ ಪ್ರಾಣಲಿಂಗಸ್ಥಲವೆನಿಸಿಕೊಳ್ಳುವುದು. ಜಾಗ್ರದಾದ್ಯವಸ್ಥಾತ್ರಯಗಳಲ್ಲೂ ಲಿಂಗೈಕಾಯತ್ತಮಾನಸನಾಗಿ, ಅಜ್ಞಾನಕ್ಕೆ ದೂರನಾಗಿರುವುದೇ ಭಾವಲಿಂಗಸ್ಥಲವೆನಿಸಿಕೊಳ್ಳುವುದು.

ದೇಹವೇ ದೇವಸ್ಥಾನ, ಜೀವನೇ ಅಲ್ಲಿರುವ ದೇವರು, ಎಂಬುದಾಗಿ ನಿಶ್ಚಯಭಾವದಿಂದಿರುವುದೇ ಪಿಂಡಜಲಿಂಗಸ್ಥಲವೆನಿಸಿಕೊಳ್ಳುವುದು. ಪೀಠವೇ ಪೃಥಿವಿ, ಲಿಂಗವೇ ಆಕಾಶ, ಇದೇ ಮಹಾಸೃಷ್ಟಿಕಾರಣವಾದ ಪರವಸ್ತುವೆಂಬ ಭಾವದಿಂದ ನಿಸ್ಸಂದೇಹಜ್ಞಾನಗೊಂಡಿರುವುದೇ ಅಂಡಜಲಿಂಗಸ್ಥಲವೆನಿಸಿಕೊಳ್ಳುವುದು. ತನ್ನನ್ನು ದಹರಾಕಾಶಮಧ್ಯದಲ್ಲೂ ಆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆಕಾಶವನ್ನು ತನ್ನಲ್ಲೂ ಧ್ಯಾನಿಸಿ, ಅಂತಹ ಆತ್ಮಾಕಾಶಮಯವಾದದ್ದೇ ಲಿಂಗವೆಂಬ ಭಾವ ಆಳವಟ್ಟಿರುವುದೇ ಬಿಂದ್ವಾಕಾಶಲಿಂಗಸ್ಥಲವೆನಿಸಿಕೊಳ್ಳುವುದು.

ಪ್ರ—ದೀಕ್ಷಾಶಿಕ್ಷಾನುಭಾವಶ್ಚ ಗುರುಲಿಂಗಂತ್ರಿಧಾಭವೇತ್ | ಕುಂಡಮಂಟಪಹೋಮಾದ್ಯೈರ್ನ್ಯಾಸೈರಧ್ವಕಲಾದಿಭಿಃ || ಮಂತ್ರೋಪದೇಶಸಹಿತಾ ಕ್ರಿಯಾದೀಕ್ಷೇತಿಗೀಯತೆ | ದೀಯತೆಲಿಂಗಸಂಬಂಧಃ ಕ್ಷೀಯತೆಕರ್ಮಸಂಚಯಃ | ದೀಯತೆಕ್ಷೀಯತೆಯಸ್ಮಾದ್ದೀಕ್ಷೇತಿಪರಿಗೀಯತೆ | ಗುರುಲಿಂಗಚರಾಖ್ಯಾನಾಂ ಲಿಂಗಾನಾಮೇಕರೂಪತಃ || ಯದ್ಜ್ಞಾನಂಬೋಧಿತಂಸದ್ಭಿಸ್ಸಾಶಿಕ್ಷೇತಿನಿಗದ್ಯತೆ | ಸಂಸ್ಕಾರೈಃಪ್ರಾಕ್ತನೈರ್ದೇವಿ ಸ್ವಕೀಯಸುಕೃತಾರ್ಜಿತೈಃ || ಭಕ್ತಿಶ್ರದ್ಧಾರ್ಜನಾದ್ಯೈರ್ಯದನುಭಾವಸ್ಸಉಚ್ಯತೆ | ಸ್ಥಳಮಾಚಾರಲಿಂಗಸ್ಯ ತ್ರಿವಿಧಂಶೃಯತಾಂ ಕ್ರಮಾತ್ || ಸದಾಚಾರಸ್ತುನಿಯತೋ ಗಣಾಚಾರಸ್ತತಃಪರಂ | ಸಜ್ಜನಶ್ಶಿವಭಕ್ತಶ್ಚ ಯೇನಮಾರ್ಗೇಣಸರ್ವದಾ || ತುಷ್ಟಸ್ತೋಷಯತೇದೇವಿ ಸದಾಚಾರಸ್ಸವೈಸ್ಮೃತಃ | ಯಸ್ತುಸ್ವಸ್ವೀಕೃತಾಚಾರ ಲೋಪೇಶಪಥಯತ್ಯಹಂ || ತ್ಯಜಾಮ್ಯಸೂನೀತಿಸವೈನಿಯತಾಚಾರಈರಿತಃ | ಗುರುಲಿಂಗಾದಿವಿಷಯಂ ತಚ್ಛಾಭ್ರವ್ಯಂದೂಷಿತಂಯದಿ || ಶ್ರುತ್ವಾ ಶಿಕ್ಷಯಾಮಿಾತಿ ಗಣಾಚಾರಸ್ಸಹಿಸ್ಮೃತಃ | ಪ್ರಸಾದಲಿಂಗತ್ರೈವಿಧ್ಯ ಮಪಿಶೃಣಿವರಾನನೆ || ಶುದ್ಧಸ್ಸಿದ್ಧಃಪ್ರಸಿದ್ಧಶ್ಚ ಭೇದಾಶ್ಚೈಷಾಮಥೋಚ್ಯತೆ | ಆದೌಗುರುವರಾದ್ಜ್ಞಾತ್ವಾ ತತಸ್ಸ್ವಾದ್ವಾಸಭಾವತಃ || ತದ್ಭುಕ್ತಶೇಷಭೋಗೋಯ ಸ್ಸಶುದ್ಧಃಪರಿಕೀರ್ತಿತಃ | ಜ್ಞಾತ್ವಾಲಿಂಗತ್ರಯಂಸಮ್ಯಕ್ ತಥೈಕ್ಯಂಚವರಾನನೆ | ಲಿಂಗಾರ್ಪಿತಪ್ರಸಾದೋಯಂ ಸಿದ್ಧಇತ್ಯಾಹುರಾಸ್ತಿಕಾಃ || ಗುರುಲಿಂಗಚರಾಣಾಮಪ್ಯಭೇದಾದ್ಭಕ್ತಿಮಾನಪಿ | ಯಃ ಪರಿತ್ಯಕ್ತವಿಷಯಃ ಪ್ರಸಿದ್ಧಸ್ಸಉದಾಹೃತಃ || ಚರಲಿಂಗಸ್ಥಲಸ್ಯಾಸ್ಯ ಸ್ವರೂಪಂಕಥಯಾಮಿತೆ | ಸ್ವಯಂಚರಂಪರಂಚೇತಿ ತ್ರೈವಿಧ್ಯಂಸಮುಪಾಗತಂ || ಲಿಂಗಲಾಂಛನಸಂಯುಕ್ತಂ ಬಹಿಃಕೃತ್ಯವಿವರ್ಜಿತಂ | ಕೇವಲಾನಂದರೂಪಂಯಸ್ಸಸ್ವಯಂಲಿಂಗಮಿಾರಿತಂ || ಸ್ವಚ್ಛಂದಚಾರೀಸ್ವಾಭಿನ್ನ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಲಿಂಗರೂಪೋನಿರಾಕುಲಃ | ಲಿಂಗನ್ಯಸ್ತಕಲಾಷುದ್ಧಿಸ್ಸಚರಂಲಿಂಗಮು ಚ್ಯತೆ || ನಿರ್ದ್ವಂದ್ವೋಹಿಸದಾಸ್ಥಾಣುರ್ಗಮಾಗಮವಿವರ್ಜಿತಃ | ಜ್ಯೋತಿರ್ಲಿಂಗಸ್ವರೂಪೋಯಃ ಪರಲಿಂಗಮುದಾಹೃತಂ || ಶಿವಲಿಂಗಸ್ವರೂಪಂ ತೆ ವಕ್ಷ್ಯಾಮಿಶ್ರುಣುಪಾರ್ವತಿ | ಇಷ್ಟಲಿಂಗಂಪ್ರಾಣಲಿಂಗಂ ಭಾವಲಿಂಗಮಿತಿತ್ರಿಧಾ || ದೀಕ್ಷಾಂವಿಧಾಯಗುರುಣಾ ಯಲ್ಲಿಂಗಂಪ್ರತಿಪಾದಿತಂ | ಮಂತ್ರೋಪದೇಶಸಹಿತಮಿಷ್ಟಲಿಂಗಮುದಾಹೃತಂ || ತ್ಯಕ್ತದೇಹೇಂದ್ರಿಯಗುಣಂ ಶಿವಾರ್ಪಿತನಿಜಾಂತರಂ | ಶಿವಏವಮನೋಲೀನಂ ಪ್ರಾಣಲಿಂಗಂತದುಚ್ಯತೆ || ಜಾಗ್ರದಾದಿಷ್ವವಸ್ಥಾಸು ಜ್ಯೋತಿರ್ಲಿಂಗೈಕಮಾನಸಂ | ಅಜ್ಞಾನವಿನಿವೃತ್ತಂತದ್ಭಾವಲಿಂಗಂತದುಚ್ಯತೆ || ಮಹಾಲಿಂಗಸ್ಥಳಂಚಾಪಿತ್ರಿಧಾಭಿನ್ನಂಶ್ರುಣುಪ್ರಿಯೆ | ಪಿಂಡಜಂಪ್ರಥಮಂಪ್ರೋಕ್ತಮಂಡಜಂಚತತಃಪರಂ || ಬಿಂದ್ವಾಕಾಶಂತತೋಜ್ಞೇಯಮೇಷಾಂಲಕ್ಷಣಮುಚ್ಯತೆ | ದೇಹೋದೇವಾಲಯಃಪ್ರೋಕ್ತೋ ಜೀವೋದೇವಸ್ಸದಾಶಿವಃ || ಇತಿನಿಶ್ಚಿತಸದ್ಭಾವಃಪಿಂಡಜಂಲಿಂಗಮುಚ್ಯತೆ | ಪೀಠಿಕಾಪೃಥಿವೀಲಿಂಗಮಾಕಾಶಂಸೃಷ್ಟಿಕಾರಣಂ | ನಿಸ್ಸಂದೇಹಮಿದಂಜ್ಞಾನಮಂಡಜಂಲಿಂಗಮೀರಿತಂ || ಧ್ಯಾತ್ವಾತ್ಮಾನಮಥಾಕಾಶಂತಥಾತ್ಮನಿ | ಆತ್ಮಾಕಾಶಮಯಂ ಲಿಂಗಂಬಿಂದ್ವಾಕಾಶಮುದಾಹೃತಂ ||

ಮೇಲೆ ಷಡ್ವಿಧಲಿಂಗಗಳ ಭೇದವು ತಿಳಿಸಲ್ಪಟ್ಟಿತು. ಆಚಾರಾದಿ ಮಹಾಲಿಂಗಾಂತಗಳಾದಷಡ್ಲಿಂಗಗಳಿಗೆ ಭಕ್ತಾದಿಐಕ್ಯಾಂತಗಳಾದಷಡಂಗಸ್ಥಲಗಳು ಉಪಾಸಕಗಳೆಂಬುದೂ ಅವುಗಳ ಪೂಜಾರೀತಿಯೂ ಹಸ್ತವಿವರಣವೂ ಕೂಡ ಹಿಂದೆ ವಿಶದೀಕರಿಸಲ್ಪಟ್ಟಿದೆ. ಈಗ ಪ್ರತಿಯೊಂದು ಲಿಂಗಸ್ಥಲವೂ ಅಂಗಸ್ಥಲಗಳ ಯೋಗದಿಂದ ಆರಾರು ಭೇದಿಗಳನ್ನೈದಿ ಒಟ್ಟಿಗೆ ಮೂವತ್ತಾರು ಭೇದಗಳುಳ್ಳದ್ದೆನಿಸಿಕೊಂಡಿರುವ ರಹಸ್ಯವು ವರ್ಣಿಸಲ್ಪಡುವುದು. ಹೇಗೆಂದರೆ:—ದೇಹಾದಿಗಳಲ್ಲಿ ಅಭಿಮಾನವನ್ನು ತೊರೆದಿರುವವನೇ ಭಕ್ತನೆಂತಲೂ, ಅಂತಹಚಿತ್ತವು ಯಾವನಿಗೆ ಅಚಲಿತವಾಗಿರುವುದೋ ಅವನು ಮಾಹೇಶ್ವರನೆಂತಲೂ, ಚಿತ್ತಶುದ್ಧಿಯುಳ್ಳವನು ಪ್ರಸಾದಿಯೆಂತಲೂ, ಜೀವಭ್ರಾಂತಿಯನ್ನಳಿದು ಲಿಂಗಾತ್ಮನಾಗಿರುವವನು ಪ್ರಾಣಲಿಂಗಿಯೆಂತಲೂ,

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತಾನು ಶಿವನೇ ಎಂಬ ಭಾವವು ದೃಢವಾಗಿ ನಿಶ್ಚಿಂತತೆಯಿಂದ ಆನಂದಮಯನಾಗಿರುವವನು ಶರಣನೆಂತಲೂ, ಶಿವಜೀವೋಭಯ ಭ್ರಾಂತಿರಹಿತನಾಗಿ ಏಕತ್ವವನ್ನೊಂದಿರುವವನೇ ಐಕ್ಯನೆಂತಲೂ ಹೇಳಲ್ಪಡುವನು. ಇವರಲ್ಲಿ ಮೊದಲನೇ ಭಕ್ತನೇ ಗುರುಭಕ್ತ, ಲಿಂಗಭಕ್ತ, ಜಂಗಮಭಕ್ತ, ಎಂಬದಾಗಿ ಮೂರು ತೆರನಾಗಿರುವನು. ಮತ್ತು ಈ ಭಕ್ತನೇ ಗುರುಲಿಂಗ ಆಚಾರಲಿಂಗಾದಿಗಳ ಸೇವೆಯಲ್ಲಿ ಆರು ತೆರನಾಗುವನು. ಹೇಗೆಂದರೆ:—ಗುರುಮೋಹಿ, ಗುರುಭಕ್ತ, ಗುರುಪೂಜಕ, ಗುರುವೀರ, ಗುರುಪ್ರಸಾದಿ, ಗುರುಪ್ರಾಣಿ ಎಂಬದಾಗಿಯೂ; ಆಚಾರಮೋಹಿ, ಆಚಾರಭಕ್ತ, ಆಚಾರಪೂಜಕ, ಆಚಾರವೀರ, ಆಚಾರಪ್ರಸಾದಿ, ಆಚಾರಪ್ರಾಣಿ ಎಂಬದಾಗಿಯೂ; ಪ್ರಸಾದಮೋಹಿ, ಪ್ರಸಾದಭಕ್ತ, ಪ್ರಸಾದಪೂಜಕ, ಪ್ರಸಾದವೀರ, ಪ್ರಸಾದಪ್ರಸಾದಿ, ಪ್ರಸಾದಪ್ರಾಣಿ ಎಂಬದಾಗಿಯೂ; ಇದರಂತೆಯೇ ಉಳಿದ ಜಂಗಮಲಿಂಗ ಶಿವಲಿಂಗ ಮಹಾಲಿಂಗಗಳ ವಿಷಯದಲ್ಲಿಯೂ ಆರಾರು ಭೇದಗಳೆಂದರಿಯಬೇಕು. ಇವುಗಳ ಲಕ್ಷಣವು ಹೇಗೆಂದರೆ:—ತಾಯ್ತಂದೆಗಳಲ್ಲಿ ಮೋಹವನ್ನು ತೊರೆದು ಗುರುಲಿಂಗವೊಂದರಲ್ಲೇ ಮೋಹವುಳ್ಳವನು ಗುರುಮೋಹಿಯು. ಲೌಕಿಕರಾದ ಬಂಧುಗಳಲ್ಲಿ ಬಾಂಧವ್ಯವನ್ನು ತಿರಸ್ಕರಿಸಿ, ಗುರುಲಿಂಗದಲ್ಲೇ ಬಾಂಧವ್ಯವನ್ನು ಹೊಂದಿ ಸಂತುಷ್ಟನಾಗಿರುವವನೇ ಗುರುಭಕ್ತನೆನಿಸಿಕೊಳ್ಳುವನು. ಇತರರ ಪೂಜೆಗಳನ್ನೆಲ್ಲ ಕಡೆಗಂಡು ಗುರುಲಿಂಗಪೂಜೆಯೊಂದರಲ್ಲೇ ಆಸಕ್ತನಾಗಿರುವವನು ಗುರುಪೂಜಕನು. ಗುರುವಿನಪ್ಪಣೆಯಂತೆ ನಡೆಯುತ್ತ, ಇತರ ನಿರ್ದಿಷ್ಟಾಚಾರವನ್ನೆಲ್ಲ ತೊಲಗಿರುವವನು ಗುರುವೆನಿಸಿಕೊಳ್ಳುವನು. ಗುರುವಿನ ಆಜ್ಞೆಯನ್ನು ಯಾವಾಗಲೂ ಮೀರದೆ, ಇತರರ ಮಾತನ್ನು ಕೇಳದೆ ನಡೆಯುತಕ್ಕವನು ಗುರುಪ್ರಸಾದಿಯೆನಿಸಿಕೊಳ್ಳುವನು. ಗುರುಸೇವೆಯನ್ನು ಹೊರ್ರು ಇತರರ ಸೇವೆಯೊಂದನ್ನೂ ಮಾಡದೆ ದೃಢವಾಗಿರತಕ್ಕವನೇ ಗುರುಪ್ರಾಣಿಯು. ಇದರಂತೆಯೇ ಆಚಾರಲಿಂಗದಲ್ಲೂ. ಹೇಗೆಂದರೆ—ಹೆಂಡಿತಿ ಮೊದಲಾದವರಲ್ಲಿ ಮೋಹವನ್ನು ಬಿಟ್ಟು ಶಿವಾಚಾರದಲ್ಲಿ ನಿರತನಾಗಿ ವಿರುದ್ಧಾಚಾರಗಳಲ್ಲಿ ಪ್ರವರ್ತಿಸಿದ ಮಕ್ಕಳುಗಳನ್ನು ಕೂಡ ತೊರೆ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದಿರತಕ್ಕವನು ಆಚಾರಮೋಹಿಯು. ಪೂರ್ವಜಾತಿಕುಲಾಚಾರಗಳನ್ನೆಲ್ಲ ಕಡೆಗೊತ್ತಿ, ಶಿವಾಚಾರವನ್ನು ಹಿಡಿದು ವಿರುದ್ಧಾಚಾರಗಳನ್ನು ತೊಲಗಿ ವರ್ತಿಸತಕ್ಕವನ್ನು ಆಚಾರಲಿಂಗಭಕ್ತನು. ಅನ್ಯ ದೇವತಾಪೂಜೆಗಳನ್ನು ಬಿಟ್ಟು ಶಿವಾಚಾರಪರನಾಗಿ ಲಿಂಗಪೂಜೆಯನ್ನು ಮಾಡಿಕೊಂಡಿರುವವನು ಆಚಾರಪೂಜಕನು. ಘಟವಿರುವವರೆಗೂ ನಾನು ಹಿಡಿದ ಶಿವಾಚಾರವನ್ನು ಬಿಡುವುದಿಲ್ಲವೆಂಬದಾಗಿ ಸಶಪಥವಾಗಿ ಆಚರಿಸತಕ್ಕವನು ಆಚಾರವೀರನು. ಇದು ಶುಚಿ, ಇದು ಅಶುಚಿ ಎಂಬ ಸಂದೇಹಗಳನ್ನು ಬಿಟ್ಟು ಗ್ರಾಹ್ಯಾಗ್ರಾಹ್ಯಭೇದಗಳಡಗಿ ವರ್ತಿಸತಕ್ಕವನೇ ಆಚಾರಪ್ರಸಾದಿಯು. ಪರರಿಂದ ಯಾವಾಗಲೂ ಶಿವಾಚಾರನಿಂದನೆಯನ್ನು ಕೇಳುವುದಿಲ್ಲವೆಂಬ ಬುದ್ಧಿಯುಳ್ಳವನಾಗಿ ಆ ಶಿವಾಚಾರವನ್ನೇ ತನ್ನ ಪ್ರಾಣದಂತೆ ತಿಳಿದಿರುವವನು ಆಚಾರಪ್ರಾಣಿಯೆನಿಸಿಕೊಳ್ಳುವನು. ಇದರಂತೆಯೇ ಉಳಿದವುಗಳ ಲಕ್ಷಣವನ್ನೂ ತಿಳಿದುಕೊಳ್ಳಬೇಕು.

ಪ್ರ—ತ್ಯಕ್ತಾಭಿಮಾನೋದೇಹಾದೌ ಭಕ್ತ ಇತ್ಯುಚ್ಯತೆಬುಧೈಃ | ತಚ್ಚಿತ್ತಮಚಲಂಯಸ್ಯಸವೈಮಾಹೇಶ್ವರಸ್ಮೃತಃ || ಚಿತ್ತಶುದ್ಧಿರ್ಭವೇದ್ಯಸ್ಯಸಪ್ರಸಾದೀಭವತ್ಯಸೌ | ತ್ಯಕ್ತಜೀವಭ್ರಮಶ್ಚಾಯಂ ಲಿಂಗಾತ್ಮಾ ಪ್ರಾಣಲಿಂಗಕಃ || ಶಿವಂನಿಶ್ಚಿತ್ಯನಿಶ್ಚಿಂತಸ್ಸಾನಂದಶ್ಶರಣೋಭವೇತ್ | ಶಿವಜೀವೋಭಯಭ್ರಾಂತಿ ರಹಿತಶ್ಚೈಕ್ಯಮುಚ್ಯತೆ || ಗುರುಭಕ್ತೋಲಿಂಗಭಕ್ತಶ್ಚರಭಕ್ತಸ್ತಥೈವಚ | ಏವಂಭೇದಸಮಾಯುಕ್ತಸ್ಸಭಕ್ತಸ್ತ್ರಿವಿಧೋಭವೇತ್ || ಮೋಹಿಭಕ್ತಃಪೂಜಕಶ್ಚವೀರಶ್ಶೈವಃಪ್ರಸಾದವಾನ್ | ಪ್ರಾಣೀಚಗುರುಲಿಂಗಾದಿಷ್ವೇವಂಭಕ್ತೋಪಿಷಡ್ವಿಧಃ || ತ್ಯಕ್ತಪಿತ್ರಾದಿಮೋಹಸ್ಸನ್ ಗುರುಲಿಂಗೈಕಮೋಹವಾನ್ | ಏವಂಯೋವರ್ತತೇದೇವಿಸತನ್ಮೋಹೀತಿಕಥ್ಯತೆ||ಲೌಕಿಕಾನ್ಬಾಂಧವಾಂಸ್ತ್ಯಕ್ತ್ವಾಗುರುಲಿಂಗೈಕಬಾಂಧವಃ| ಹರ್ಷಪೂರ್ಣೋಮಹಾದೇವಿಸತದ್ಭಕ್ತ ಇತಿಸ್ಮೃತಃ || ಪೂಜಾಮನ್ಯಾಂಪರಿತ್ಯಜ್ಯಗುರುಲಿಂಗೈಕಪೂಜಕಃ | ಅತಿನಿಷ್ಠಾಪರೋಯಸ್ತುಸವೈತತ್ಪೂಜಕಸ್ಮೃತಃ || ಗುರೂಪದಿಷ್ಟಮೇವಾಥ ಸಮಾಚರಣಮಾಚರನ್ | ಯಸ್ತುತ್ಯಕ್ತೇತರಾಚಾರೋಗುರುವೀರಸ್ಸಉಚ್ಯತೆ | ಯೋವೈನಲಂಘಯೇ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದ್ಧೇವಿಕದಾಚಿದ್ಗುರುಶಾಸನಂ ॥ ಸರ್ವೈಗುರುಪ್ರಸಾದೀಸ್ಯಾನ್ನಿವೃತ್ತೇತರಶಾಸನಃ । ಸೇವಾಮನ್ಯಾಂಪರಿತ್ಯಜ್ಯಗುರುಲಿಂಗೈಕಸೇವಕಃ ॥ ವರ್ತತೆಯಸ್ಸ್ಥಿರತರೋಗುರುಪ್ರಾಣೀಸಹಿಸ್ಮೃತಃ । ಏವಂಭೇದೈಶ್ಚವಾಂದೇವಿಗುರುಮೂರ್ತಿಧರಂಶಿವಂ ॥ ಭಜೇದನನ್ಯಚಿತ್ತೋಯ ಸ್ಸ ಮುಕ್ತಸ್ಸ್ಯಾನ್ನಸಂಶಯಃ । ಏವಮಾಚಾರಲಿಂಗೇಪಿಷಡ್ಭೇಧಾಸ್ಸಂಭವಂತಿಹಿ ॥ ಮೋಹಂತ್ಯಕ್ತ್ವಾಕಳತ್ರಾದೌಮೋಹಿತಾಚಾರಏವಹಿ । ಶಿವಾಚಾರವಿರುದ್ಧಾಂಶ್ಚತ್ಯಜೇದಪಿಸುತಾದಿಕಾನ್ ॥ ಅಥವಾಚಾರಮೋಹೀಸ್ಯಾದನ್ಯಾಚಾರವಿವರ್ಜಿತಃ । ಪೂರ್ವಾಚಾರಂಪರಿತ್ಯಜ್ಯಶಿವಾಚಾರಂಸಮಾಶ್ರಿತಃ । ಆಚಾರಲಿಂಗ ಭಕ್ತಸ್ಸ್ಯಾದ್ವಿರುದ್ಧಾಚಾರವರ್ಜಿತಃ । ಅನ್ಯಪೂಜಾಂಪರಿತ್ಯಜ್ಯಲಿಂಗಪೂಜೈಕತತ್ಪರಃ ॥ ಶಿವಾಚಾರಪರೋಯಸ್ತುಸಸ್ಸ್ಯಾದಾಚಾರಪೂಜಕಃ । ಶರೀರಪಾತಪರ್ಯಂತಂಸ್ವಾಚಾರಂನಪರಿತ್ಯಜೇತ್ ॥ ಆಚಾರವೀರಸ್ಸಭವೇದಾಚಾರೈಕಪರಾಯಣಃ । ಶುಚಿತ್ವಮಶುಚಿತ್ವಂ ಚೇತ್ಯಾದಿಸಂದೇಹವರ್ಜಿತಃ ॥ ಗ್ರಾಹ್ಯಾಗ್ರಾಹ್ಯಾದಿರಹಿತಸ್ಸ್ಯಾದಾಚಾರಪ್ರಸಾದಕಃ । ಪರೈಃಕೃತಾಂಭಕ್ತನಿಂದಾಂ ಶ್ರುಣುಯಾನ್ನೈವಕುತ್ರಚಿತ್ ॥ ಇತಿಬುದ್ಧ್ಯಾಸದಾಚಾರಲಿಂಗಪ್ರಾಣೀತಿಕಥ್ಯತೆ । ಏವಂಲಿಂಗಸ್ಥಳಂದೇವಿತದಂಗಸ್ಥಲಯೋಗತಃ ॥ ಏಕೈಕಂಷಡ್ವಿಧಂಪ್ರೋಕ್ತಂತೇನಷಟ್ತ್ರಿಂಶದಾತ್ಮಕಂ॥

ಹಿಂದೆ ಐಕ್ಯಾದಿ ಭಕ್ತಾಂತಸ್ಥಲಗಳ ವಿವರಣವು ಪ್ರವೃತ್ತಿ ಮಾರ್ಗಾನುಸಾರವಾಗಿ ಹೇಳಲ್ಪಟ್ಟಿತು. ಈಗ ಭಕ್ತಾದಿ ಐಕ್ಯಾಂತನಾದ ಅದೇ ಸ್ಥಲಗಳ ನಿವೃತ್ತಿ ಮಾರ್ಗಾನುಸಾರವಾದ ವಿವರಣವು ಹೇಳಲ್ಪಡುವುದು. ಹೇಗೆಂದರೆ—ದೇಹದ ಗುದಸ್ಥಾನ, ಗುಹ್ಯಸ್ಥಾನ, ಹೊಕ್ಕಳು, ಹೃದಯ, ಕಂಠ, ಹುಬ್ಬಿನ ಮಧ್ಯ, ಇವಾರು ಸ್ಥಳಗಳೂ ಕ್ರಮವಾಗಿ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ, ಆಜ್ಞಾ, ಎಂಬ ಆರುಚಕ್ರಗಳ ಸ್ಥಾನವಾಗಿರುವುವು. ಮೊದಲನೆ ಆಧಾರಚಕ್ರಕಮಲವು ೪ ದಳಗಳುಳ್ಳದ್ದು, ಸ್ವಾಧಿಷ್ಠಾನವು ೬ ದಳಗಳುಳ್ಳದ್ದು. ಮಣಿಪೂರಕವು ೧೦ ದಳಗಳುಳ್ಳದ್ದು. ಅನಾಹತವು ೧೨ ದಳಗಳುಳ್ಳದ್ದು, ವಿಶುದ್ಧವು ೧೬ ದಳಗಳುಳ್ಳದ್ದು. ಆಜ್ಞಾಚಕ್ರವು ೨ ದಳ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗಳುಳ್ಳದ್ದು. ಮೇಲ್ಕಂಡ ಷಟ್ಚಕ್ರದ ಪ್ರತಿಯೊಂದು ದಳಗಳಲ್ಲೂ ಒಂದೊಂದು ಪ್ರಣವವು ನೆಲೆಸಿರುವುದು. ಹೇಗೆಂದರೆ—

ಆಧಾರಚಕ್ರದ ನಾಲ್ಕು ದಳಗಳಲ್ಲೂ ವ ಶ ಷ ಸ ಎಂಬಿವುಗಳೂ, ಸ್ವಾಧಿಷ್ಠಾನಚಕ್ರದ ಆರುದಳಗಳಲ್ಲೂ ಬ ಭ ಮ ಯ ರ ಲ ಎಂಬ ಪ್ರಣವಗಳೂ, ಮಣಿಪೂರಕಚಕ್ರದ ಹತ್ತುದಳಗಳಲ್ಲೂ ಡ ಢ ಣ ತ ಥ ದ ಧ ನ ಪ ಫ ಎಂಬ ಪ್ರಣವಗಳೂ, ಅನಾಹತಚಕ್ರದ ಹನ್ನೆರಡು ದಳಗಳಲ್ಲಿ ಕ ಖ ಗ ಘ ಙ ಚ ಛ ಜ ಝ ಞ ಟ ಠ ಎಂಬ ಪ್ರಣವಗಳೂ, ವಿಶುದ್ಧಿಚಕ್ರದ ಹದಿನಾರು ದಳಗಳಲ್ಲಿ ಅ ಆ ಇ ಈ ಉ ಊ ಋ ೠ ಎ ಏ ಐ ಒ ಓ ಔ ಅಂ ಅಃ ಎಂಬ ಪ್ರಣವಗಳೂ, ಅಜ್ಞಾಚಕ್ರದ ಎರಡು ದಳಗಳಲ್ಲಿ ಹಂ ಕ್ಷಂ ಎಂಬ ಪ್ರಣವಗಳೂ ನೆಲಸಿರುವುವು.

ಈ ಆಧಾರಾದಿಷಟ್ಚಕ್ರಗಳ ಮಧ್ಯದಲ್ಲೂ ಕ್ರಮವಾಗಿ ಯ ವಾ ಶಿ ಮ ನ ಓಂ ಎಂಬ ಪ್ರಣವಗಳು ಒಂದೊಂದಾಗಿ ಇರುತ್ತಿರುವುವು. ಮೇಲ್ಕಂಡ ನಕಾರಪ್ರಣವವೇ ಆಚಾರಲಿಂಗವಾಚಕವಾಗಿ ಆಧಾರಚಕ್ರದಲ್ಲಿಯೂ, ಮಕಾರಪ್ರಣವವೇ ಗುರುಲಿಂಗವಾಚಕವಾಗಿ ಸ್ವಾಧಿಷ್ಠಾನಚಕ್ರದಲ್ಲಿಯೂ, ಶಿಕಾರಪ್ರಣವವೇ ಶಿವಲಿಂಗವಾಚಕವಾಗಿ ಮಣಿಪೂರಕಚಕ್ರದಲ್ಲಿಯೂ, ವಾಕಾರಪ್ರಣವವೇ ಜಂಗಮಲಿಂಗವಾಚಕವಾಗಿ ಅನಾಹತಚಕ್ರದಲ್ಲಿಯೂ, ಯಕಾರಪ್ರಣವವೇ ಪ್ರಸಾದಲಿಂಗವಾಚಕವಾಗಿ ವಿಶುದ್ಧಿಚಕ್ರದಲ್ಲಿಯೂ, ಓಂಕಾರವೇ ಮಹಾಲಿಂಗವಾಚಕವಾಗಿ ಆಜ್ಞಾಚಕ್ರದಲ್ಲಿಯೂ, ಹೀಗೆ ಷಟ್ಪ್ರಣವಗಳೇ ಷಡ್ಲಿಂಗಗಳಾಗಿ ಷಟ್ಚಕ್ರಗಳಲ್ಲಿ ನೆಲಸಿರುವುವು. ಮತ್ತು ಈ ಷಟ್ಪ್ರಣವಗಳೂ ಕ್ರಮವಾಗಿ ಎಂದರೆ ಓಂಕಾರವೇ ತ್ವಕ್ಕಿನಲ್ಲಿಯೂ, ನಕಾರವೇ ರಕ್ತದಲ್ಲೂ, ಮಕಾರವೇ ಮಾಂಸದಲ್ಲಿಯೂ, ಶಕಾರವೇ ಮೇದಸ್ಸಿನಲ್ಲಿಯೂ, ವಾಕಾರವೇ ಅಸ್ಥಿಯಲ್ಲಿಯೂ ಯಕಾರವೇ ಮಜ್ಜೆಯಲ್ಲಿಯೂ ವ್ಯಾಪಿಸಿಕೊಂಡಿರುವುವು. ಅದು ಕಾರಣ ಇವುಗಳೆಲ್ಲದರ ಸಾರವಾಗಿರುವ ಶುಕ್ಲವು ಷಡಕ್ಷರಮಯವಾಗಿರುವುದಂದಿರಿಯಬೇಕು ಈ ಪ್ರಕಾರದಿಂದ ಸಂಸ್ಕೃತನಾದ ವೀರಶೈವನ ದೇಹವೆಲ್ಲವೂ ಪ್ರಣವಮಯವಾಗಿರುವುದು. ಇದೇ ಸರ್ವಾಂಗಲಿಂಗಸಾ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಹಿತ್ಯವೆನಿಸಿಕೊಳ್ಳುವುದು. ಹೀಗೆ ತನ್ನ ದೇಹವು ಷಡಕ್ಷರಮಯವಾದು ದೆಂಬ ಈ ಭಾವವು ಯಾವನಿಗೆ ದೃಢತರವಾಗಿರುವುದೋ ಅವನೇ ಸಾಕ್ಷಾಚ್ಛಿವಸ್ವರೂಪನು. ಇಂತಹ ಷಟ್ಸ್ಥಲವಿದ್ಯಾಸಾಧಕನೇ ನಿಜವಾದ ವೀರಶೈವನು. ಅವನೇ ಏಕಜನ್ಮದಲ್ಲಿ ಮುಕ್ತಿಯನ್ನು ಪಡೆಯುವನು.

ಪ್ರ—ಮೂಲಾಧಾರೇನಕಾರಾಖ್ಯಾಸಂಸ್ಥಿತಾಪರಮೇಶ್ವರಿ । ಸ್ವಾಧಿಷ್ಠಾನೇಮಕಾರಾಖ್ಯಾಮಣಿಪೂರೆಶಿಕಾರಿಕಾ ॥ ಅನಾಹತೇವಕಾರಾಖ್ಯಾ ಸದಾಶೈವೀವ್ಯವಸ್ಥಿತಾ । ವಿಶುದ್ಧೌತುಯಕಾರಾಖ್ಯಾಸಾಕ್ಷಾದ್ವಿಶ್ವೇಶ್ವರೀಸ್ಥಿತಾ ॥ ಆಜ್ಞಾಚಕ್ರೇ ಮಹಾದೇವಿ ತಾರಾಖ್ಯಾಸಮುಪಸ್ಥಿತಾ । ಆಚಾರಾಖ್ಯಂನಕಾರಸ್ಸ್ಯಾನ್ಮಕಾರೋಗುರುಲಿಂಗಕಂ ॥ ಶಿಕಾರಶ್ಶಿವಲಿಂಗಂಸ್ಯಾದ್ವಾಕಾರಶ್ಚರಲಿಂಗಕಂ । ಯಕಾರಸ್ಯಾತ್ಪ್ರಸಾದಾಖ್ಯವೋಂಕಾರೋಮಹದುಚ್ಯತೆ ॥ ಷಷ್ಠಂಬ್ರಹ್ಮಭವೇತ್ತಾರಂ ಯಕಾರಂ ಪಂಚಮಂ ಭವೇತ್ । ಚತುರ್ಥಂತುವಕಾರಸ್ಸ್ಯಾಚ್ಛಿಕಾರಸ್ತುತೃತೀಯಕಂ ॥ ದ್ವಿತೀಯಂತುಮಕಾರಸ್ಸ್ಯಾನ್ನಕಾರಃಪ್ರಥಮಂಭವೇತ್ । ಏವಂಷಡಕ್ಷರಾಣ್ಯೇವಬ್ರಹ್ಮಣಿಕ್ರಮಶೋವಿದುಃ ॥ ಓಂಕಾರಃಪರಿಪೂರ್ಣತ್ವಾತ್ತ್ವಚಿಸರ್ವತ್ರತಿಷ್ಠತಿ । ನಕಾರೋರುಧಿರಸ್ಥಾತಿಮಕಾರೋಮಾಂಸಸಂಚಯೆ ॥ ಶಿಕಾರೋಮೇದಸಿಸ್ಥಾತಿವಾಕಾರೋಸ್ಥಿಷುತಿಷ್ಠತಿ । ವಾಕಾರಸ್ಥಾತಿಮಜ್ಜಾಯಾಂ ಶುಕ್ಲೇಸ್ಥಾತಿಷಡಾತ್ಮಕಂ । ಏವಂಷಡಕ್ಷರಮಯಂಶಿವವನ್ಮೂರ್ತಸಂಸ್ಥಿತಂ । ದೇಹಂಮಮೇತಿಯೋಧ್ಯಾಯೇತ್ಸೋಹಮೇವನಸಂಶಯಃ ॥ ಸರ್ವಾಂಗಲಿಂಗ ಸಾಹಿತ್ಯಮೇವಮೇವ ಮಯೋದಿತಂ । ಶಿವಪ್ರಣೀತವಾಕ್ಯಾರ್ಥಂಸಮ್ಯಗ್ವೀಕ್ಷ್ಯಸಮಾಸತಃ ॥ ಏತದ್ಯೋವೇದಸೋವಿದ್ಯಾಗ್ರಂಥಿಂವಿಕಿರತಿಪ್ರಭಃ । ಶಿವಸಿದ್ಧಾಂತಕಂತಂತ್ರಂಶಿವಾದ್ವೈತಂಶಿವಂಪದಂ॥

ಹಿಂದೆ ವೀರಶೈವನ ಸರ್ವಾಂಗಲಿಂಗಸಾಹಿತ್ಯಲಕ್ಷಣವು ಹೇಳಲ್ಪಟ್ಟಿತು. ಮುಂದೆ ಅರ್ಪಣಸದ್ಭಾವವನ್ನೂ ಕ್ರಿಯಾವಿಶ್ರಾಂತಿಲಕ್ಷಣವನ್ನೂ ವಿವರಿಸಿದರೆ ಈ ವಿಷಯವು ಸಾಂಗವಾಗುವುದು. ರಹಸ್ಯವಾದ ಈ ವಿಷಯಗಳು ಗುರುಮುಖದಿಂದ ಅಧಿಕಾರಿಯಾದ ಮನುಷ್ಯನಿಗೆ ಅನುಗ್ರಹಿಸಲ್ಪಡತಕ್ಕವುಗಳು. ಅದುಕಾರಣ ಅವುಗಳ ಸೂಕ್ಷ್ಮವಾದ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅಂತರ್ವಿಷಯಗಳನ್ನು ಬಿಟ್ಟು ಸ್ಥೂಲವಾಗಿಯೂ ಭಕ್ತಾದಿಷಟ್ಸ್ಥಲದ ಅರ್ಪಣಸದ್ಭಾವಕ್ರಮವನ್ನಿಲ್ಲಿ ಉದಹರಿಸುವೆವು.

ವೀರಶೈವರಲ್ಲಿ ಲಿಂಗಾರ್ಪಣವಿಧಾನವು ಕ್ರಿಯಾರ್ಪಣವೆಂದು ಜ್ಞಾನಾರ್ಪಣವೆಂದು ಎರಡುತೆರನಾಗಿಹುದು. ಕ್ರಿಯಾರ್ಪಣವೆಂದರೆ— ತನ್ನ ಉಪಭೋಗಕ್ಕಾಗಿ ಆದಾಗಿ ಬಂದ ದ್ರವ್ಯವನ್ನು ತ್ರಿವಿಧಲಿಂಗಗಳಿಗೆ ಸಮರ್ಪಿಸಿ ತತ್ಪ್ರಸಾದವನ್ನನುಭವಿಸುವುದು. ಜ್ಞಾನಾರ್ಪಣವೆಂದರೆ— ಸಕಲ ಇಂದ್ರಿಯಗಳ ಮುಖದಿಂದಲೂ ಉಪಭೋಗ್ಯವಾದ ದ್ರವ್ಯಗಳನ್ನು ಷಡ್ವಿಧದ ಅಂಗರೂಪಿನಿಂದ ಷಡ್ವಿಧಲಿಂಗಗಳಿಗೆ ಅನಿಚ್ಛಾಪೂರ್ವಕವಾಗಿ ಸಮರ್ಪಿಸಿ, ತತ್ಪ್ರಸಾದವನ್ನು ಪರಿಗ್ರಹಿಸುವುದು. ಅವುಗಳಲ್ಲಿ ಮೊದಲನೇ ಕ್ರಿಯಾರ್ಪಣವು ಸ್ಥೂಲದ್ರವ್ಯಾರ್ಪಣ, ಸೂಕ್ಷ್ಮದ್ರವ್ಯಾರ್ಪಣ, ಆನಂದದ್ರವ್ಯಾರ್ಪಣವೆಂದು ಮೂರು ವಿಧವಾಗಿರುವುದು. ಸ್ಥೂಲದ್ರವ್ಯವಾದ ರೂಪನ್ನು ಇಷ್ಟಲಿಂಗಾರ್ಪಣವನ್ನು ಮಾಡುವವನೇ ವಿಶ್ವನು. ಸೂಕ್ಷ್ಮದ್ರವ್ಯವಾದ ರುಚಿಯನ್ನು ಪ್ರಾಣಲಿಂಗಕ್ಕೆ ಅರ್ಪಿಸುವವನೇ ತೈಜಸನು. ಆನಂದದ್ರವ್ಯವಾದ ತೃಪ್ತಿಯನ್ನು ಭಾವಲಿಂಗಕ್ಕೆ ಸಮರ್ಪಿಸುವವನೇ ಪ್ರಾಜ್ಞನೆನಿಸಿಕೊಳ್ಳುವನು. ಇಂತಹ ಅರ್ಪಣಕರಣದಲ್ಲಿ ಇಷ್ಟಲಿಂಗಾರ್ಪಿತವಾದುದೇ ಶುದ್ಧಪ್ರಸಾದವೆಂತಲೂ ಪ್ರಾಣಲಿಂಗಾರ್ಪಿತವಾದುದೇ ಸಿದ್ಧಪ್ರಸಾದವೆಂತಲೂ, ಭಾವಲಿಂಗಾರ್ಪಿತವಾದುದೇ ಪ್ರಸಿದ್ಧಪ್ರಸಾದವೆಂತಲೂ ಹೇಳಲ್ಪಡುವುದು. ಈ ತ್ರಿವಿಧಪ್ರಸಾದವಂ ಸೇವಿಸುವವರೇ ಕ್ರಮವಾಗಿ ವಿಶ್ವತೈಜಸಪ್ರಾಜ್ಞರೆನಿಸಿಕೊಳ್ಳುವರು. ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥಾತ್ರಯಗಳಲ್ಲಿ ಮೇಲ್ಕಂಡ ತ್ರಿವಿಧಲಿಂಗಾರ್ಪಿತವಾದ ತ್ರಿವಿಧಪ್ರಸಾದವನ್ನು ತಾನು ಮೇಲ್ಕಂಡ ವಿಶ್ವಾದಿತ್ರಿವಿಧರೂಪನಾಗಿ ಉಪಭೋಗಿಸಿ, ಪರಮಸುಖದಿಂದ ನಿರ್ಲೇಪನಾಗಿರುವುದೇ ಕ್ರಿಯಾರ್ಪಣವೆನಿಸಿಕೊಳ್ಳುವುದು.

ಪ್ರ—ದ್ವೇಧಾಲಿಂಗಾರ್ಪಣವಿಧಿಃ ಪ್ರೋಚ್ಯತೇದೇಶಿಕೋತ್ತಮೈಃ । ಕ್ರಿಯಾಮತಾರ್ಪಣಂಕಿಂಚಿತ್ಕಿಂಚಿದ್ಜ್ಞಾನಮತಾರ್ಪಣಂ ॥ ಯಥಾಕಾಲೋಚಿತೈರ್ದ್ರವ್ಯೈರ್ಯದೃಚ್ಛಾಸಂಭವೈಸ್ಸ್ವಯಂ । ಸ್ವೋಪಭೋ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಗಾಯಯತ್ಕಾರ್ಯಂ ತ್ರಿಷುಲಿಂಗೇಷುಸಾದರಂ || ತತ್ಕ್ರಿಯಾರ್ಪಣಮಿತ್ಯಾಹುರರ್ಪಣೈಕವಿಶಾರದಾಃ | ಷಟ್ಸುಲಿಂಗೇಷುಸರ್ವತ್ರ ಸಾರ್ವಕಾಲಿಕರೂಪತಃ || ಸ್ವಯಮಾಗತವಸ್ತೂನಿಜ್ಞಾತ್ವಾತತ್ತನ್ಮುಖೇಷುಜ | ಅನಿಚ್ಛಾವಿಧಿನಾಕಾರ್ಯ ಮೇತದ್ಜ್ಞಾನಾರ್ಪಣಂವಿದುಃ |......ಆತ್ಮೋಪಭೋಗಜಾತಾನಿ ದ್ರವ್ಯಾಣಿತ್ರಿವಿಧಾನಿಹಿ || ಸ್ಥೂಲಾಖ್ಯಂಪ್ರವಿವಿಕ್ತಾಖ್ಯಮಾನಂದಾಖ್ಯಮಿತಿತ್ರಿಧಾ | ಸ್ಥೂಲದ್ರವ್ಯಂಭವೇದ್ರೂಪಂ ಪ್ರವಿವಿಕ್ತಂರುಚಿರ್ಭವೇತ್ || ಆನಂದಸ್ತುಭವೇತ್ತೃಪ್ತಿ ರೇವಮೇವಪೃಥಕ್ಕ್ರಮಾತ್ | ಬಹಿರಂಗಾರ್ಪಣೈರೂಪಮಂತರಂಗಾರ್ಪಣೈರುಚಿಃ || ಆತ್ಮಸಂಗಮಯಂಸಾಕ್ಷಾ ದಾನಂದಾರ್ಪಣಮುಚ್ಯತೆ | ಆತ್ಮಾಂಗಾರ್ಪಣಮೇವಾತ್ರತೃಪ್ತಿರಿತ್ಯಭಿಧೀಯತೆ || ರೂಪದ್ರವ್ಯಾರ್ಪಕೋವಿಶ್ವ ಇಷ್ಟಲಿಂಗೇಸ್ವಭಾವತಃ | ರುಚಿದ್ರವ್ಯಾರ್ಪಕಸ್ಸಾಕ್ಷಾ ತ್ಪ್ರಾಣಲಿಂಗೇತುತೈಜಸಃ || ಭಾವಲಿಂಗೆಸದಾಪ್ರಾಜ್ಞ ಆನಂದಾರ್ಪಕಉಚ್ಯತೆ |...ಇಷ್ಟಲಿಂಗಾರ್ಪಿತಂಶುದ್ಧಂ ಪ್ರಾಣಲಿಂಗಮುಖಾರ್ಪಿತಂ || ಸಿದ್ಧಂತತಃಪ್ರಸಿದ್ಧಂಹಿಭಾವಲಿಂಗಾರ್ಪಿತಂವಿದುಃ | ತತ್ತದರ್ಪಣತೋಲಬ್ಧಂಪ್ರಸಾದಂತತ್ತದಾದರಾತ್ | ಭುಂಗ್ತೆಯತ್ನಾತ್ಸ್ವಯಂವಿಶ್ವ ತೈಜಸಪ್ರಾಜ್ಞರೂಪತಃ || ಜಾಗ್ರತ್ಸ್ವಪ್ನಸುಷುಪ್ತ್ಯಾದಿ ಸರ್ವಾವಸ್ಥಾಸುಸರ್ವದಾ | ಲಿಂಗಾರ್ಪಿತೋಪಭೋಗೇನ ನಿರ್ಲೆಪೋಯಂನಸಂಶಯಃ ||

ಹಿಂದೆ ಕ್ರಿಯಾರ್ಪಣವು ತಿಳಿಸಲ್ಪಟ್ಟಿತಷ್ಟೆ ಜ್ಞಾನಾರ್ಪಣವೆಂದರೆ—ಸಕಲ ಇಂದ್ರಿಯಗಳ ಮುಖದಿಂದಲೂ ಉಪಭೋಗ್ಯಗಳಾದ ದ್ರವ್ಯಗಳನ್ನು ಷಡ್ವಿಧದ ಅಂಗರೂಪಿನಿಂದ ಷಡ್ವಿಧಲಿಂಗಗಳಿಗೆ ಅನಿಚ್ಛಾಪೂರ್ವಕವಾಗಿ ಸಮರ್ಪಿಸಿ ತತ್ಪ್ರಸಾದವನ್ನು ಪರಿಗ್ರಹಿಸುವುದು ಎಂದು ಮೇಲೆಯೇ ತಿಳಿಸಿದೆ. ಗಂಧ, ರಸ, ರೂಪ, ಸ್ಪರ್ಶ, ಶಬ್ದ, ಪರಿಣಾಮವೆಂಬ ಷಡ್ವಿಷಯಗಳೇ ಷಟ್ಪದಾರ್ಥಗಳು. ಈ ಒಂದೊಂದು ಪದಾರ್ಥಗಳೇ ನಾನಾಭೇದಗಳಾಗಿ ವ್ಯವಹಾರಗೊಂಡಿವೆ. ಪೃಥಿವ್ಯಾದಿಗಳಲ್ಲಿರತಕ್ಕ ಗಂಧಾದಿಮಾತ್ರಗಳು ಏಕೈಕವಸ್ತುನಿಷ್ಠಗಳಾಗಿ ಎಲ್ಲವೂ ಏಕರೂಪವನ್ನೇ ಹೊಂದಿರುವುವು. ಹೇಗೆಂದರೆ—ಗಂಧವು ಚಂದನಾದಿಪದಾ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ರ್ಥಮಯುವಾಗಿರುವುದು. ರಸವು ಮಧುರಾದಿಪದಾರ್ಥಮಯುವಾಗಿರುವುದು. ರೂಪವು ನಾನಾವರ್ಣಪದಾರ್ಥಮಯುವಾಗಿರುವುದು. ಸ್ಪರ್ಶವು ಮೃದುಕಠೋರಾದಿಪದಾರ್ಥಮಯುವಾಗಿರುವುದು. ಶಬ್ದವು ನಾದಾದಿಮಯುವಾಗಿರುವುದು. ಪರಿಣಾಮವು ಸುಖಪದಾರ್ಥಮಯುವಾಗಿರುವುದು. ಈಪ್ರಕಾರವಾದ ಸಕಲ ಪದಾರ್ಥಗಳಲ್ಲೂ ಆತ್ಮನು ಲಿಂಗಾರ್ಪಣದಿಂದ ಪ್ರಸಾದಸುಖವನ್ನು ಅನುಭವಿಸುತ್ತಿರುವನು. ಷಡ್ವಿಧಾಂಗದಿಂದ ಆತ್ಮನೊಬ್ಬನೇ ಷಡ್ವಿಧಗಳಾದ ಆಯಾಯ ಪದಾರ್ಥಗಳನ್ನು ವಿಭಾಗಿಸಿ, ಷಡ್ವಿಧಲಿಂಗಗಳಿಗೆ ಸಮರ್ಪಿಸಿ, ತತ್ಪ್ರಸಾದವನ್ನು ಉಪಭೋಗಿಸುವನು. ಆ ಕ್ರಮವೆಂತೆಂದರೆ—

ಸದ್ಭಕ್ತಿಯಿಂದ ಕೂಡಿದ ಭಕ್ತನು—ತನ್ನ ಭೂಮ್ಯಂಗದಿಂದ ಕ್ರಿಯಾಶಕ್ತಿಸಮೇತವಾದ ಆಚಾರಲಿಂಗಕ್ಕೆ ಚಿತ್ತಹಸ್ತದಿಂದ ನಾಸಿಕಮುಖೇನ ಚಂದನಾದಿ ನಾನಾಪರಿಮಳಪದಾರ್ಥಗಳನ್ನು ಸಮರ್ಪಿಸಿ ತದ್ಗಂಧಪ್ರಸಾದವನ್ನು ಸದಾ ಅನುಭವಿಸುವನು.

ನಿಷ್ಠಾಭಕ್ತಿಯುಕ್ತನಾದ ಮಹೇಶ್ವರನು—ತನ್ನ ಜಲಾಂಗದಿಂದ ಜ್ಞಾನಶಕ್ತಿಸಮೇತವಾದ ಗುರುಲಿಂಗಕ್ಕೆ ಸುಬುದ್ಧಿಹಸ್ತದಿಂದ ಜಿಹ್ವಾಮುಖೇನ ಮಧುರಾದಿಷಡ್ರಸಪದಾರ್ಥಗಳನ್ನು ಸಮರ್ಪಿಸಿ, ತದ್ರಸಪ್ರಸಾದವನ್ನು ಸದಾ ಉಪಭೋಗಿಸುವನು.

ಅವಧಾನಭಕ್ತಿಯುಕ್ತನಾದ ಪ್ರಸಾದಿಯು—ತನ್ನ ಅಗ್ನ್ಯಂಗದಿಂದ ಇಚ್ಛಾಶಕ್ತಿಸಮೇತವಾದ ಶಿವಲಿಂಗಕ್ಕೆ ನಿರಹಂಕಾರಹಸ್ತದಿಂದ ನೇತ್ರಮುಖೇನ ಶ್ವೇತಾದಿವರ್ಣಪದಾರ್ಥಗಳನ್ನು ಸಮರ್ಪಿಸಿ ತದ್ರೂಪಪ್ರಸಾದವನ್ನು ಸದಾ ಸೇವಿಸುವನು.

ಅನುಭವಭಕ್ತಿ ಯುಕ್ತನಾದ ಪ್ರಾಣಲಿಂಗಿಯು—ತನ್ನ ವಾಯ್ವಂಗದಿಂದ ಆದಿಶಕ್ತಿಸಮೇತವಾದ ಜಂಗಮಲಿಂಗಕ್ಕೆ ಸುಮನೋಹಸ್ತದಿಂದ ತ್ವಙ್ಮುಖೇನ ಮೃದುಕಠೋರಾದಿಪದಾರ್ಥಗಳನ್ನು ಸಮರ್ಪಿಸಿ, ತತ್ಸ್ಪರ್ಶಪ್ರಸಾದವನ್ನು ಭೋಗಿಸುವನು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಆನಂದಭಕ್ತಿಯುಕ್ತನಾದ ಶರಣನು—ತನ್ನ ಆಕಾಶಾಂಗದಿಂದ ಪರಾಶಕ್ತಿಸಮೇತವಾದ ಪ್ರಸಾದಲಿಂಗಕ್ಕೆ ಸುಜ್ಞಾನಹಸ್ತದಿಂದ ಶ್ರೋತ್ರಮುಖೇನ ಶಬ್ದದ್ರವ್ಯವನ್ನು ಸಮರ್ಪಿಸಿ, ತನ್ನಾದಪ್ರಸಾದವನ್ನು ಸ್ವೀಕರಿಸುವನು.

ಸಮರಸಭಕ್ತಿಯುಕ್ತನಾದ ಐಕ್ಯನು—ತನ್ನ ಆತ್ಮಾಂಗದಿಂದ ಚಿಚ್ಛಕ್ತಿಸಮೇತವಾದ ಮಹಾಲಿಂಗಕ್ಕೆ ಸದ್ಭಾವಹಸ್ತದಿಂದ ಹೃದಯಮುಖೇನ ಪರಿಣಾಮಪದಾರ್ಥವನ್ನು ಸಮರ್ಪಿಸಿ, ತತ್ತೃಪ್ತಿಪ್ರಸಾದವನ್ನು ಸವಿಯುವನು.

ಹೀಗೆ ಅಂಗ, ಲಿಂಗ, ಭಕ್ತಿ, ಶಕ್ತಿ, ಮುಖ, ಹಸ್ತ, ಅರ್ಪಿತಪದಾರ್ಥ, ಪ್ರಸಾದ ಎಂಬ ಅಷ್ಟವಿಧಸ್ಥಲಗಳು ಭಕ್ತಾದಿಪ್ರತಿಯೊಂದು ಸ್ಥಲಗಳಲ್ಲೂ ಇರುತ್ತಿರುವುವು.

ಪ್ರ–ಜ್ಞಾನಾರ್ಪಣಮತೋವಕ್ಷ್ಯೇಸ್ವಾನುಭೂತ್ಯೈಕಗೋಚರಂ| ಸರ್ವೇಂದ್ರಿಯಮುಖಾಗಾಮಿದ್ರವ್ಯದೋಷನಿವೃತ್ತಯೆ| ಸೋಯಂಷಟ್ಸ್ಥಲರೂಪೇಣತತ್ತಲ್ಲಿಂಗಮುಖಾರ್ಪಿತಂ|ಪ್ರಸಾದಮಾದರೇಣೈವಸ್ವತಸ್ಸಿದ್ಧಂ ಸಮಶ್ನುತೆ | ಅಥಗಂಧೋರಸೋರೂಪಂ ಸ್ಪರ್ಶಶ್ಶಬ್ದಸ್ತತಃಪರಂ | ಪರಿಣಾಮಃಪದಾರ್ಥಾಃಷಡ್ವೈತೆಸಾರ್ವಕಾಲಿಕಾಃ | ಏಕೈಕಸ್ಯಪದಾರ್ಥಸ್ಯ ನಾನಾಭೇದಾಃಪೃಥಕ್ಪೃಥಕ್ | ಗಂಧಾದಯಇಮೆಮಾತ್ರಾಃಪೃಥ್ವ್ಯಾದೀನಾಮನುಕ್ರಮಾತ್ | ಏಕಸ್ಮಿನ್ವಸ್ತುನಿರತಾಸ್ತೇಸರ್ವೆಹ್ಯೇಕರೂಪತಃ| ಚಂದನಾದಿಮಯೋಗಂಧೋಮಧುರಾದಿಮಯೋರಸಃ | ವೈದ್ಯುತಾದಿಮಯಂರೂಪಂ ಸ್ಪರ್ಶೋಮೃದ್ವಾದಿತನ್ಮಯಃ | ಸ್ಯಾನ್ನಾದಾದಿಮಯಶ್ಶಬ್ದಃಪರಿಣಾಮಸ್ತತಃಪರಂ | ಸುಖಾದಿಮಯಇತ್ಯೇವಂನಾನಾಭೇದಾಃ ಪ್ರಕೀರ್ತಿತಾಃ | ಏವಂಭೂತೇಷುಸರ್ವೇಷುಪದಾರ್ಥೇಷುನಿರಂತರಂ |ಲಿಂಗಾರ್ಪಣಧಿಯಾಹ್ಯಾತ್ಮಾಪ್ರಸಾದಸುಖಮಶ್ನುತೆ | ದ್ರವ್ಯಾಣ್ಯೇತಾನಿಸರ್ವಾಣಿವಿಭಜ್ಯಸ್ವಸ್ವರೂಪತಃ | ಲಿಂಗಾರ್ಪಣಧಿಯಾಭುಂಗ್ತೆತಾನಿವಸ್ತೂನಿಸರ್ವದಾ|.....ಆಚಾರಾಯಾರ್ಪಿತಾಪೃಥ್ವೀಗುರೋರಾಪಸ್ಸಮರ್ಪಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ತ್ಮಾಃ । ಶಿವಾಯಚಾರ್ಪಿತಂತೇಜಶ್ಚರಾಯವರುದರ್ಪಿತಃ । ಪ್ರಸಾದಾಯಾರ್ಪಿತಂವ್ಯೋಮಜೀವಾತ್ಮಾ ಮಹತೇರ್ಪಿತಃ ॥

ಆಚಾರೆ ದಿವ್ಯಲಿಂಗೇ ನಿರುಪಮನಿಜಭಕ್ತಸ್ಥಲಾಂಗೈಕ್ಯಭಾಜಿ ಘ್ರಾಣಾಸ್ಯೆಚಿತ್ತಹಸ್ತೇನಜ ಘನಸುಖಹೇತೌಕ್ರಿಯಾಶಕ್ತಿಯುಕ್ತೆ । ಘ್ರಾತವ್ಯಂ ದ್ರವ್ಯಮಪ್ಯರ್ಪಣ ವಿಷಯವಿಧಾನೋಪದಿಷ್ಟಂಸಮರ್ಪ್ಯ ಪ್ರಾಯಸ್ಸದ್ಭಕ್ತಿಪೂರ್ಣಸ್ಸ್ವಯಮಯಮಿಹಗಂಧಪ್ರಸಾದಂಭಜೇತ ॥

ಸ್ವಾಂಗೇಮಾಹೇಶ್ವರಾತ್ಮನ್ಯನುಪಮ ಸಹಜಜ್ಞಾನಶಕ್ತಿಪ್ರಯುಕ್ತೆ ಜಿಹ್ವಾಖ್ಯೆಸುಪ್ರಸಿದ್ಧೆ ಪರತರಗುರುಲಿಂಗಾಭಿಧೆಸಂಸ್ಥಿತೇಸ್ಮಿನ್ । ನಿಷ್ಠಾಭಕ್ತಿಪ್ರಭಾವಾಗ್ರನಿಹಿತ ಸುಮಹಾಬುದ್ಧಿಹಸ್ತೇನ ವಿದ್ವಾನ್ ರಸ್ಯಂ ದ್ರವ್ಯಂ ಸಮರ್ಪ್ಯಸ್ವಯ ಮಮಲರಸಾಖ್ಯಂಪ್ರಸಾದಿಂಭಜೇತ ॥

ಯೋಸೌನಿತ್ಯಂಪ್ರಸಾದಿಸ್ಥಲ ಪರಮಪದಪ್ರಾಪ್ತದಿವ್ಯಾಂಗಭಾಜಿ ಸ್ವೇಚ್ಛಾಶಕ್ತಿಪ್ರಯುಕ್ತೆ ದೃಶಿಜಗತಿಮುಖೆ ಪಾಣಿನಾದಂ ಕೃತೇನ । ಸಾಕ್ಷಾಲ್ಲಿಂಗೆಶಿವಾಖ್ಯೆ ಸವಿನಯಮವಧಾನಾತ್ಮತಾಭಕ್ತಿ ಯುಕ್ತೋದ್ರಷ್ಟವ್ಯಾಂಶಂ ಸಮರ್ಪ್ಯಾರ್ಪಣ ವಿನಿಹಿತರೂಪ ಪ್ರಸಾದಂ ಭಜೇತ ॥

ಸಂಸಕ್ತಪ್ರಾಣಲಿಂಗಿಸ್ಥಲನಿಹಿತ ನಿಜಾಂಗೇ ಮನಃಪಾಣಿನಾಸೌ ಲಿಂಗೆಸಾಕ್ಷಾಚ್ಚರಾಖ್ಯೆತ್ವಚಿ ಜಗತಿಮುಖೆಹ್ಯಾದಿಶಕ್ತಿಪ್ರಯುಕ್ತೆ । ಸ್ಪೃಷ್ಟವ್ಯಂಚಾರ್ಪಯಿತ್ವಾಸ್ವಯ ಮನುಭವಭಕ್ತಿಪ್ರಭಾವೋಪಪನ್ನೋ ನಿತ್ಯಂಸ್ಪರ್ಶಪ್ರಸಾದಂ ನಿರತಿಶಯಸುಖಂ ತತ್ವವೇತ್ತಾಭಜೇತ ॥

ಲಿಂಗೆಸಾಕ್ಷಾತ್ಪ್ರಸಾದೆ ವಿಮಲಶರಣಸಂಜ್ಞಾಂಗಸಂಸ್ಥಾಪಿತೇಸ್ಮಿನ್ ಶ್ರೋತವ್ಯಂಶ್ರೋತ್ರವಕ್ತ್ರೆ ನಿಖಿಲಮಿಹಪರಾಶಕ್ತಿಯುಕ್ತೆಸಮರ್ಪ್ಯ । ಆನಂದಾಕಾರಭಕ್ತಿಸ್ಫುಟತರಪರಮಜ್ಞಾನಹಸ್ತೇನ ಸೋಯಂಶಬ್ದಾಖ್ಯಂತತ್ಪ್ರಸಾದಂ ಸ್ವಯಮವಿರತಮತ್ಯಾಶ್ರಮಸ್ಥೋಭಜೇತ ॥

ಐಕ್ಯಾಂಗಂಭಾಜಿಲಿಂಗೆ ಮಹತಿಹೃದಿಮುಖೆ ಚಿನ್ಮಹಾಶಕ್ತಿಯುಕ್ತೆ ನಿತ್ಯಂಭಾವೇನಹಸ್ತೇನಜ ಸಮರಸಭಕ್ತಿಪ್ರಸಕ್ತಸ್ಸ್ವಯಂಸನ್ । ಸ್ಮರ್ತವ್ಯಂಚಾರ್ಪಯಿತ್ವಾ ವಿಶದಮತಿರವಶ್ಯಂ ಸದೈವಾರ್ಪಣೀಯಂತಸ್ಮಾಲ್ಲಬ್ಧಂ ವಿಶುದ್ಧಂ ಘನತರಪರಿಣಾಮಪ್ರಸಾದಂಭಜೇತ ॥ ಅಂಗಂಚಲಿಂಗಂಚ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಮುಖಂಚ ಹಸ್ತೋಭಕ್ತಿಶ್ಚ ಶಕ್ತಿಶ್ಚ ತಥಾರ್ಪಣಂಚ | ಪ್ರಸಾದಇತ್ಯಷ್ಟ ವಿಧಸ್ಥಲಾನಿಪ್ರತಿಸ್ಥಲಂಷಟ್ಸ್ಥಲಸಂಜ್ಞಿತಾನಿ ||

ಹಿಂದೆ ಹೇಳಲ್ಪಟ್ಟ ವಿಷಯಗಳನ್ನೆಲ್ಲ ಪರಿಶೀಲಿಸಲಾಗಿ ಒಂದು ಸತ್ತೇ ಆದಿಯಲ್ಲಿ ಅಂಗಲಿಂಗವೆಂಬೆರಡು ಭೇದಗಳನ್ನೈದಿ, ಚಿತ್ತೇ ಭಕ್ತಿ ಶಕ್ತಿಯೆಂಬೆರಡು ಭೇದವನ್ನು ಹೊಂದಿ, ಆನಂದವೇ ಅರ್ಪಣಪ್ರಸಾದವೆಂಬೆರಡು ತೆರನಾಗಿ, ಈ ಸಚ್ಚಿದಾನಂದಲಕ್ಷಣಪರತತ್ವವೇ ಷಟ್ಸ್ಥಲವೆಂಬ ಹೆಸರನ್ನು ಪಡೆದು ಉಪಾಸ್ಯೋಪಾಸಕಭೇದದಿಂದ ಲಿಂಗಾಂಗಸ್ಥಲಗಳೆಂಬದಾಗಿ ವಿಭಜನೆಗೊಂಡಿತೆಂದು ವ್ಯಕ್ತವಾಯಿತು. ಪರಶಿವನೇ ಷಡ್ವಿಧಲಿಂಗರೂಪಿನಿಂದ ಸರ್ವೇಂದ್ರಿಯಮುಖಾಗತವಾದ ಪದಾರ್ಥವನ್ನು ಸಮರ್ಪಿಸಿ ಪ್ರಸಾದವನ್ನು ಪರಮಾನಂದದಿಂದನುಭೋಗಿಸಿ ಸುಖಿಸುತ್ತಿರುವನು. ಹೀಗೆ ಸಕಲೇಂದ್ರಿಯಮುಖದಿಂದಲೂ ಆಯಾಯ ವಸ್ತುಜಾತವನ್ನು ಲಿಂಗಾರ್ಪಿತವನ್ನು ಮಾಡುವ ಸರ್ವಾಂಗಲಿಂಗಿಯಾದ ವೀರಶೈವನಿಗೆ ಶುಭಾಶುಭಕರ್ಮಫಲವು ಲೇಶಮಾತ್ರವೂ ಲೇಪಗೊಳ್ಳದು. ಷಟ್ಸ್ಥಲಜ್ಞಾನ ಪರಿಪೂರ್ಣನಾದ ಈ ಶಿವಜ್ಞಾನಿಯು ಶರೀರಾದಿಸಕಲಪದಾರ್ಥಗಳನ್ನೂ ಶಿವನಿಗೆ ಸಮರ್ಪಿಸಿ, ಆ ದಾನವನ್ನೂ ಅರ್ಪಣವನ್ನೂ ಶಿವನಿಗೇ ನಿವೇದಿಸಿ ತಾನು ದಾಸೋಹಂಭಾವದಲ್ಲಿರುವುದರಿಂದ ಕೈಗೆ ಹತ್ತುವ ಜಿಡ್ಡು ನಾಲಗೆಗೆ ಹತ್ತದಂತೆಯೂ, ಮುಟ್ಟಿದರೆ ತಗಲಿಕೊಳ್ಳುವ ಕಪ್ಪು ಕಣ್ಣಿನ ಒಳಗುಡ್ಡೆಗೆ ಅಂಟಿಕೊಳ್ಳದಂತೆಯೂ ಈತನಿಗೆ ಶುಭಾಶುಭಕರ್ಮಫಲವು ಅಂಟಲಾರದು. ಈ ಶಿವಜ್ಞಾನಿಯೂ ಮಾಡುವ ಕ್ರಿಯೆಗಳೆಲ್ಲವೂ ಲಿಂಗಾರ್ಪಿತವಾಗಿಯೇ ಇರುವುದರಿಂದ ಇವನ ಕ್ರಿಯೆಗಳಿಗೆ ಶುಭಾಶುಭಫಲವೊಂದೂ ಇಲ್ಲದೆ ಅವನಲ್ಲೇ ಅವು ವಿಶ್ರಾಂತಿಗೊಳ್ಳುವುವು. ಇದಕ್ಕೆ "ಕ್ರಿಯಾವಿಶ್ರಾಂತಿ" ಯೆಂದು ಹೆಸರು. ಈ ಕ್ರಿಯಾವಿಶ್ರಾಂತಿಯೇ ಸಮ್ಯಜ್ಞಾನವೆಂದು ಹೇಳಲ್ಪಡುವುದು. ಸಮ್ಯಜ್ಞಾನವೆಂದರೆ ತಾನೇ ಶಿವನೆಂದು ತಿಳಿಯುವಿಕೆ. ಅಂತಹ ತಿಳುವಿಕೆಯಿಂದ ತಾನು ಸುಖಿಯಾಗುವನು. ಆ ನಿತ್ಯಸುಖಿಗೆ ಲೌಕಿಕಗಳಾದ ಬಾಹ್ಯಪ್ರವೃತ್ತಿಗಳೆಲ್ಲವೂ ನಾಶಗೊಂಡಿರುವುವು. ಬಾಹ್ಯಪ್ರವೃತ್ತಿಯೆಲ್ಲವೂ ನಷ್ಟವಾಗಿರುವಾಗ ಅವ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ನಲ್ಲುಂಟಾದ ವ್ಯಾಪಾರವೆಲ್ಲವೂ ಲೀಲಾಮಾತ್ರದವಾಗಿ ಅವೆಲ್ಲವೂ ಶಿವಾರ್ಚನಾರೂಪಗಳಾಗಿಯೇ ಇರುವುವು. ಅವನು ಭೋಗಿಸಿದುದೆಲ್ಲವೂ ಶಿವಾರ್ಪಿತವೇ ಆಗಿರುವುದು. ಅವನಕಣ್ಣಿಗೆ ಶಿವರೂಪವಾಗಿಯೇ ತೋರುತ್ತಿರುವುದು. ಏಕೆಂದರೆ—ತಾನೇ ಸಚ್ಚಿದಾನಂದಪರವಸ್ತುವಾಗಿರುವಾಗ ತನಗೆ ಭಿನ್ನವಾದ ವಸ್ತುವೊಂದೂ ಅವನಿಗೆ ಗೋಚರಿಸುವ ಹಾಗಿಲ್ಲ. ಅವನಿಗೆ ಬಂಧವಿಮೋಚನೆಗಳೊಂದೂ ಇಲ್ಲ. ಏಕೆಂದರೆ—ಇವನು ಯಾವುದನ್ನು ಕಳೆದುಕೊಳ್ಳಬೇಕಾದದ್ದೂ ಇಲ್ಲ; ಹೊಸದಾಗಿ ಸಂಪಾದಿಸಬೇಕಾದದ್ದೂ ಇಲ್ಲ. ಬಂಧವಿದ್ದರೆ ಮುಕ್ತಿಯೂ, ಮುಕ್ತಿಯಿದ್ದರೆ ಬಂಧವೂ ಇರುವುದಿಲ್ಲ. ಒಂದಿಲ್ಲದಿದ್ದರೆ ಮತ್ತೊಂದು ಸಿದ್ಧವಾಗಿಯೇ ಇರುವುದು. ಈ ಶಿವಜ್ಞಾನಿಗಾದರೊ ಬಂಧವೂ ಇಲ್ಲ; ಮೋಚನವೂ ಇಲ್ಲ. ಇವನಲ್ಲಿ ಭಕ್ತಿಯೊಂದೇ ನಿರಂಕುಶವಾಗಿ ತೋರುತ್ತಿರುವುದು. ಸಿದ್ಧರಸವು ತಾಮ್ರ, ಬೆಳ್ಳಿ, ಕಬ್ಬುನಗಳನ್ನೆಲ್ಲ ಸೋಕಿ ತನ್ನ ಶಕ್ತಿಯಿಂದ ಭಂಗಾರವನ್ನಾಗಿ ಮಾಡುವಂತೆ ಈ ಶುದ್ಧವಾದ ಶಿವಭಕ್ತಿಯು ಸತ್ತ್ವರಜಸ್ತಮೋಗುಣತ್ರಯವನ್ನೂ ತಾನು ಶುದ್ಧಿಗೊಳಿಸಿ, ಎಲ್ಲವನ್ನೂ ಏಕಾಕಾರವನ್ನಾಗಿ ಮಾಡುವುದು. ಅದುಕಾರಣ ಶಿವಜ್ಞಾನಿಯಲ್ಲಿ ತೋರಿದ ಯಾವ ಕ್ರಿಯೆಗೂ ಗುಣಮೂಲಕವಾದ ಫಲಪ್ರಾಪ್ತಿಯಿರುವುದಿಲ್ಲ.

ನಾನು ಮಾಡುವ ಧರ್ಮಾಧರ್ಮಗಳ ಫಲವನ್ನೆಲ್ಲ ಅನುಭವಿಸುವುದಕ್ಕೆ ನಾನೇ ಕರ್ತನೆಂಬ ಭಾವದಿಂದ ಪರಿಪೂರ್ಣವಾದದ್ದು ಕರ್ಮಕಾಂಡವೆನಿಸಿಕೊಳ್ಳುವದು. ಈ ಧರ್ಮಾಧರ್ಮ ಕರ್ಮಗಳಿಗೆಲ್ಲ ನಾನು ಕರ್ತನಲ್ಲ; ಇದಕ್ಕೆಲ್ಲ ನಾನು ಸಾಕ್ಷಿಯಾಗಿರುವೆನು ಎಂಬ ಅಭಿಮಾನದಿಂದ ಕೂಡಿಕೊಂಡಿರುವುದು ಜ್ಞಾನಕಾಂಡವೆನಿಸಿಕೊಳ್ಳುವುದು. ನಾನು ಧರ್ಮಕರ್ಮಗಳಿಗೆ ಕರ್ತನೂ ಅಲ್ಲ; ಸಾಕ್ಷಿಯೂ ಅಲ್ಲ; ಎಂಬುದಾಗಿ ಆ ಅಭಿಮಾನದ್ವಯವನ್ನೂ ಬಿಟ್ಟಿರುವುದೇ ಭಕ್ತಿಕಾಂಡವೆನಿಸಿಕೊಳ್ಳುವುದು. ಇವುಗಳಲ್ಲಿ ಕರ್ಮವೆಂಬುದು ಮುತ್ತಿನಚಿಪ್ಪಿನಂತೆಯೂ ಜ್ಞಾನವೆಂಬುದು ತಾವರೆಯೆಲೆಯಂತೆಯೂ ಭಕ್ತಿಯೆಂಬುದು ಕಾದಕಬ್ಬುನದುಂಡೆಯಂತೆಯೂ ಇರುವುವು. ಇವುಗಳಲ್ಲಿ ಸಂಸಾರವೆಂಬ ನೀರಿನ ಹನಿಯು ಬಿದ್ದರೆ ಅದರಲ್ಲಿ ಅದರ ಪರಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಣಾಮವು ಹೇಗಾಗುವುದೋ ಅದರಂತೆಯೇ ಕರ್ಮಕಾಂಡ ಜ್ಞಾನಕಾಂಡ ಭಕ್ತಿಕಾಂಡಗಳಲ್ಲಿ ಸಂಸಾರಬಂಧದ ಸಾಫಲ್ಯವೈಫಲ್ಯನಾಶಗಳುಂಟಾಗುವುವೆಂದು ಅರಿಯಬೇಕು.

ಪಾಪಕರ್ಮಾಚರಣದಿಂದ ನರಕವೂ ಪುಣ್ಯಾಚರಣದಿಂದ ಸ್ವರ್ಗವೂ ಲಭಿಸುವುವು. ಇವೆರಡು ಕರ್ಮಗಳ ಸಂಬಂಧವೂ ತೊಲಗಿ ಜ್ಞಾನಸಂಪನ್ನನಾದರೇನೆಯೇ ಮೋಕ್ಷಸಿದ್ಧಿಯಾಗುವುದು. ಈ ಪಾಪಪುಣ್ಯ ಜ್ಞಾನಗಳು ಮೂರನ್ನೂ ಬಿಟ್ಟು ಶಿವಪ್ರಸಾದವನ್ನು ಸಂಪಾದಿಸಿದರೆ ಶಿವಭಕ್ತಿಯು ಲಭಿಸುವುದು. ಶಿವಪ್ರಸಾದದಿಂದ ಭಕ್ತಿಯೂ, ಆ ಭಕ್ತಿಯಿಂದ ಶಿವಪ್ರಸಾದವೂ ಲಭಿಸುವ ಕಾರಣ ಇವೆರಡಕ್ಕೂ ಬೀಜಾಂಕುರಗಳಂತೆ ಪರಸ್ಪರ ಮೂಲತ್ವವಿರುವುದು. ಭಕ್ತಿಯು ಶಿವಜ್ಞಾನವನ್ನು ಹುಟ್ಟಿಸುವುದು, ಜೀವರುಗಳ ಪೃಥಕ್ತ್ವವನ್ನು ತೋರ್ಪಡಿಸುವುದು. ಅದುಕಾರಣ ಜ್ಞಾನಕ್ಕಿಂತಲೂ ಭಕ್ತಿಯೇ ಪರವಾದದ್ದು. ಈ ಭಕ್ತಿಯು ಸದಾ ತಾನು ಉಪಾಸಕನೆಂತಲೂ, ಶಿವನು ಉಪಾಸ್ಯನೆಂತಲೂ, ತನ್ನಲ್ಲಿ ಭಾವವನ್ನುಂಟುಮಾಡಿ, ಹಾಲಿಗೂ ತುಪ್ಪಕ್ಕೂ, ಕಟ್ಟಿಗೆಗೂ ಬೆಂಕಿಗೂ, ಪ್ರವಾಹಕ್ಕೂ ನೀರಿಗೂ, ಭೇದವಿರುವಂತೆ ಶಿವನಿಗೂ ತನಗೂ ಭೇದವನ್ನು ಕಲ್ಪಿಸಿ, ಕೊನೆಗೆ ಐಕ್ಯಸುಖವನ್ನುಂಟುಮಾಡುವುದು.

ಈ ಮೇಲ್ಕಂಡ ವಿಷಯದಲ್ಲಿ ಪ್ರಮಾಣ.

ಇಂದ್ರಿಯಾದಾಗತಂಕಿಂಚಿದ್ಯತ್ಸುಖಂತಚ್ಛಿವಾರ್ಪಿತಂ | ತತ್ಪ್ರಸಾದಂತುಭೋಕ್ತವ್ಯಂತದಿಂದ್ರಿಯಮುಖೇನಚ || ಯೇನಗಂಧರಸೌರೂಪಸ್ಪರ್ಶಶಬ್ದರತಿಕ್ರಿಯಾಃ | ಏತೇನೈವವಿಜಾನಾತಿಕಿಮತ್ರಪರಿಶಿಷ್ಯತೆ | ಏವಂಲಿಂಗಾರ್ಪಿತಂಸರ್ವಮಿತಿಯೋವೇತ್ತಿತತ್ವತಃ | ಸೋಶ್ನುತೆಸಕಲಾರ್ನ್ಭೋಗಾರ್ನ್ವಿಪಶ್ಚಿದ್ಬ್ರಹ್ಮಣಾಸಹ | ...ಅಸ್ಯಾತ್ಮನಃಕ್ರಿಯಾಸ್ಸರ್ವಾಲಿಂಗಾರ್ಪಿತತಯಾಸ್ಥಿತಾಃ | ಸ್ವಸ್ಮಿನ್ನೇವಸ್ವಯಂಯಾಂತಿವಿಶ್ರಾಂತಿಂಸುಖಲಕ್ಷಣಾಂ | ಪ್ರೋಚ್ಯತೆಪರಮಾರ್ಥಜ್ಞೈಃಕ್ರಿಯಾವಿಶ್ರಾಂತಿರಿತ್ಯತಃ | ಕ್ರಿಯಾವಿಶ್ರಾಂತಿರೇವಾತ್ರಸಮ್ಯಜ್ಞಾನಂನಸಂಶಯಃ | ಸಮ್ಯಜ್ಞಾನಮಹಂಸಾಕ್ಷಾಚ್ಛಿವಏವೇತಿವೇದನಂ | ವೇದನೇನ್ನೈವತೇನಾಯಮಾಪ್ತ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕಾಮಸ್ಸುಖೀಭವೇತ್ । ಆಪ್ತಕಾಮಸ್ಯಸುಖಿನಃಕಾಮಾಚಾರಾಬಹಿರ್ಮು
ಖಾಃ । ಪ್ರವೃತ್ತಾಲೌಕಿಕಾಸ್ಸರ್ವೇ ಪ್ರಯಯುರ್ನಾಶಮಾತ್ಮನಿ । ಪ್ರಣ
ಷ್ಟೇಷ್ವೇಷುಸರ್ವೇಷುಸ್ವೇಚ್ಛಾಚಾರೇಣಯತ್ಕೃತಂ । ತಚ್ಛಿವಾರ್ಚನಮೇ
ವಸ್ಯಾದ್ಯದ್ಭುಕ್ತಂತಚ್ಛಿವಾರ್ಪಿತಂ। ಶಿವರೂಪತಯಾಸರ್ವಂಯಸ್ಯಭಾತಿಸ್ವ
ರೂಪತಃ । ಸ್ವೇಚ್ಛಾಚಾರಸಮಾಚಾರಸ್ತಸ್ಯಚಾರ್ಚಾಹಿಶೂಲಿನಃ । ಏವ
ಮರ್ಚನಮಾಶಸ್ಯಸ್ವೇಚ್ಛಾಚಾರನಿಬಂಧನಾ । ಭವತ್ಯೇವನಸಂದೇಹಶ್ಶಿ
ವೋಹಮಿತಿವೇದನಾತ್ ॥ ಅಹಮಿತಿಶಿವಏವಸತ್ಯಚಿದ್ಘನಸ್ಸ್ಫುರತಿತದಾ
ಪೃಥಗಸ್ತಿನೈವವಸ್ತು । ಇದಮಿತಿವಪುಷಾನತೇನಬಂಧನಂನಹಿಶರಣಸ್ಯವಿ
ಮೋಚನಂಚಕಿಂಚಿತ್ । ಬಂಧಮುಕ್ತ್ಯೋರಭಾವೇಹಿಭಕ್ತಿರುಕ್ತಾನಿರರ್ಗ
ಳಾ । ನಬಂಧಮೋಚನೇಚಾಪಿನತಯೋಶ್ಚಸಮುಚ್ಚಯೆ । ಬಂಧೆಸತಿವಿ
ಮುಕ್ತಿಸ್ಸ್ಯಾತ್ಸತ್ಯಾಂಮುಕ್ತೌಚಬಂಧನಂ । ಅನ್ಯಸ್ಯಾಪಗಮಾದನ್ಯಆಗ
ಮಿಷ್ಯತಿಕೇನಚಿತ್ । ಪರಸ್ಪರಾನುಬಂಧೇನವರ್ತೆತೆಬಂಧಮೋಚನೆ । ತಸ್ಮಾ
ತ್ತಯೋರಭಾವೇತುಭಕ್ತಿರುಕ್ತಾನಿರಂಕುಶಾ ॥ ....ರೌಪ್ಯಂತಾ
ಮ್ರಮಯೋಘನಂತ್ರಿತಯಮೇತತ್ಸಾತ್ವಿಕಂ ರಾಜಸಂಪ್ರೋಕ್ತಂತಾಮಸ
ಮೇಷುಚತ್ರಿಷುವಿಲೇಪಂ ಸಂಶ್ರಿತೋಪಿಸ್ವಯಂ । ಕುರ್ಯಾತ್ಸಿದ್ಧರಸಸ್ಸ್ವ
ನಿರ್ಮಲತಯಾಲೋಹತ್ರಯಂತದ್ಯಥಾಸ್ವರ್ಣಂ ಷೋಡಶವರ್ಣಪೂರ್ಣಮಕರೋ
ಧ್ಭುಕ್ತಿಸ್ತಥಾ ತ್ರೀನ್ ಗುಣಾನ್ । ಅಹಂಕರ್ತಾಸಮಸ್ತಸ್ಯಧರ್ಮಾಧರ್ಮ
ಸ್ಯಕರ್ಮಣಃ । ಇತ್ಯನೇನಾಭಿಮಾನೇನಕರ್ಮಕಾಂಡೋಯಮುಚ್ಯತೆ । ನಾ
ಹಂಕರ್ತಾಸ್ಯಕರ್ತೃತ್ವಂನೈವಸಾಕ್ಷೀಸ್ವಭಾವತಃ । ಇತ್ಯನೇನಾಭಿಮಾನೇ
ನಜ್ಞಾನಕಾಂಡೋಯಮುಚ್ಯತೆ । ನಕರ್ತಾಹಂನಸಾಕ್ಷೀಚಶಿವಏವೇತಿಕ
ರ್ಮಣೋಃ । ದ್ವಯಾಭಿಮಾನರಾಹಿತ್ಯಂಭಕ್ತಿಕಾಂಡೋಯಮುಚ್ಯತೆ ॥
ಶುಕ್ತಿಃಕರ್ಮಪದಂಸರೋರುಹದಳಂಜ್ಞಾನಂಪದಂಭಾಕ್ತಿಕಂ ತಪ್ತಾಯೋ
ಘನಮೇಷುಸಂಸ್ಮೃತಿಪಯೋಬಿಂದುಸ್ಥಿತಸ್ತತ್ಕ್ರಮಾತ್ । ಸಾಫಲ್ಯಂವಿಫ
ಲತ್ವಮಾಕೃತಿತಯಾಪ್ರಾಯೇಣನಾಶಂಗತೋ ನಾಮ್ನಾಪ್ಯೇವಶಿವಾತ್ಮಿ
ಕಾಂಪರತರಾಂಭಕ್ತಿಂಕಿಮಾಚಕ್ಷ್ಮಹೆ ।........ ಪಾಪಾನ್ನರಕಃಪು
ಣ್ಯಾತ್ಸ್ವರ್ಗಸ್ತಾಭ್ಯಾಂವಿನೈವಕರ್ಮಭ್ಯಾಂ । ಜ್ಞಾನಾನ್ಮೋಕ್ಷಸ್ತೈಸ್ತ್ರಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭಿರೇವವಿನಾಸ್ಯಾತ್ಪ್ರಸಾದತೋಭಕ್ತಿಃ | ಪ್ರಸಾದಾದೇವಸಾಭಕ್ತಿಃಪ್ರಸಾ
ದೋಭಕ್ತಿಸಂಭವಃ | ಯಥೈವಾಂಕುರತೋಬೀಜಂಬೀಜತೋವಾಯ
ಥಾಂಕುರಃ | ಜ್ಞಾನಂಬ್ರೂತೇಭಕ್ತಿಃಕುರುತೇಶಿವಜೀವಯೋಃಪೃಥಗ್ಭಾ
ವಂ | ತೇನಜ್ಞಾನಂಪೂರ್ವಂಭಕ್ತಿಸ್ತೂತ್ತರತಯಾವಿಭಾತಿತತಃ |......
ಆತ್ಮೋಪಾಸಕಈಶ್ವರಸ್ಸ್ವಯಮುಪಾಸ್ಯ ಸ್ಸರ್ವದೈವೇತ್ಯಸೌಭಕ್ತಿರ್ಭೋ
ಗಕರೀಕರೋತಿಶಿವಮಾತ್ಮಾನಂಚಕೃತ್ವಾಪೃಥಕ್ | ಯತ್ರತ್ರಿಕ್ಕ್ಯೇರಘ್ರ
ತಾರಣೀಹುತವಹಸ್ರೋತೋಂಬುವತ್ಸಂಯುತಂ ಜೀವೇಶೈಕ್ಯಪದಂವಿಭ
ಜ್ಯಪರತೋಪ್ಯಸ್ಯಾಮೃತತ್ವಾಯಹಿ ||

ಏವಮದ್ವೈತಭಕ್ತ್ಯೈವಪ್ರಸಾದಸ್ಸರ್ವತೋಮುಖಃ | ಪ್ರಸಿದ್ಧ್ಯ
ತಿತತಸ್ಸರ್ವಮಾತ್ಮರೂಪೇಣದೃಶ್ಯತೇ || ಕರ್ತಾಕಾರಯಿತಾಕರ್ಮಕರಣಂಕಾ
ರ್ಯಮೇನಚ | ಸರ್ವಮಾತ್ಮತಯಾಭಾತಿಪ್ರಸಾದಾತ್ಪರಮೇಶ್ವರಾತ್ |
ಭೋಕ್ತಾಭೋಜಯಿತಾಭೋಗೋಭೋಗೋಪಕರಣಾನಿಚ | ಸರ್ವಮಾ
ತ್ಮತಯಾಭಾತಿ ಪ್ರಸಾದಾತ್ಪರಮೇಶ್ವರಾತ್ |......ಜೀವಾತ್ಮಾಪರ
ಮಾತ್ಮಾಚ ತಯೋರ್ಭೇದಶ್ಚಭೇದಕಃ | ಸರ್ವಮಾತ್ಮತಯಾಭಾತಿಪ್ರಸಾ
ದಾತ್ಪರಮೇಶ್ವರಾತ್ | ಶರೀರಮಿಂದ್ರಿಯಂಪ್ರಾಣಾಮನೊಬುದ್ಧಿರಹಂ
ಕೃತಿಃ | ಸರ್ವಮಾತ್ಮತಯಾಭಾತಿಪ್ರಸಾದಾತ್ಪರಮೇಶ್ವರಾತ್ |......
ತಸ್ಮಾದದ್ವೈತಗಾಂಭಕ್ತಿ ಮಾಶ್ರಯೇತ್ಸರ್ವಸಿದ್ಧಿದಾಂ | ನಚದ್ವೈತಾ
ತ್ಮಿಕಾಂಭಕ್ತಿಂ ಕ್ಲೇಶಹೇತುಪ್ರದಾಯಿನೀಂ | ಅನ್ಯೋನ್ಯಪ್ರಾರ್ಥಕಂ
ದ್ವೈತಂ ಸಮಸಂಯೋಗಯೋಸ್ತಯೋಃ | ಕಃಕಂಭಜತಿಭಕ್ತ್ಯಾಸಾ
ಭಕ್ತಿರದ್ವೈತಗಾನಹಿ | ಅದ್ವೈತಪದರೂಢಾಯಾಭಕ್ತಿರದ್ವೈತಲಕ್ಷ
ಣಾ | ಸೈವಾದ್ವೈತಾಭಿಧಾಭಕ್ತಿರನ್ಯಾಕೇವಲಕಲ್ಪಿತಾ | ದ್ವೈತಭಕ್ತ್ಯಾ
ಹಿಸಂಸಾರವರ್ಧನಂಭಿನ್ನರೂಪತಃ | ಅಭಿನ್ನರೂಪತೋದ್ವೈತಭಕ್ತ್ಯಾಸಂ
ಸಾರನಾಶನಂ | ದ್ವೈತಭಕ್ತಿಃಪ್ರಪಂಚಾಖ್ಯಾ ಕೇನಚಿತ್ಕಲ್ಪಿತಾಮೃಷಾ |
ಅದ್ವೈತಭಕ್ತಿರಚಲಾನಿರ್ವಿಕಲ್ಪಾನಿರಂಜನಾ | ದ್ವೈತಭಕ್ತಿನಿವೃತ್ತೌಹಿಸಾ
ಕ್ಷಾದದ್ವೈತಲಕ್ಷಣಾ | ಭಕ್ತಿರ್ಗರೀಯಸೀಭಾತಿನಿಜನಿರ್ವಾಣರೂಪಿಣೀ |
ಅದ್ವೈತಭಕ್ತಿಯುಕ್ತಸ್ಯಯೋಗಿನಸ್ಸಕಲಕ್ರಿಯಾ | ಅಸ್ತೆದಗ್ಧಪಟನ್ಯಾ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಯಾತ್ಕ್ರಿಯಾಮಾತ್ರಾಹಿನಕ್ರಿಯಾ | ಕ್ರಿಯಾಮಾತ್ರಾಕ್ರಿಯಾನ್ನೈವ ಪ್ರತಿಬಂಧಾಯದೇಹಿನಾಂ | ಕೇವಲಾನಿರ್ಮಲಾಶುದ್ಧಾಫಲಕಾಮವಿವರ್ಜಿತಾ | ಫಲಕಾಮಪ್ರಯುಕ್ತಾಹಿಕ್ರಿಯಾನಪ್ರತಿಬಧ್ಯತೆ | ಕ್ರಿಯಾಮಾತ್ರಾನಬಂಧಾಯೇತ್ಯತ್ರಾಶ್ಚರ್ಯಂ ಕಿಮುಚ್ಯತಾಂ | ಫಲಕಾಮತಯಾಕರ್ಮಕರಣಂಪ್ರತಿಬಧ್ಯತೆ | ನಕರ್ಮಮಾತ್ರಕರಣಂತಸ್ಮಾತ್ಕರ್ಮಫಲಂತ್ಯಜೇತ್ | ತ್ಯಕ್ತೇಕರ್ಮಫಲೇಷ್ವಸ್ಯ ವಿಲಾಸೋನ್ನೈವಬಾಧತೆ || ಯಥಾಚಿತ್ರಪಟಸ್ತ್ರೀಣಾಂ ವಿಲಾಸೋನ್ನೈವಬಾಧತೆ | ನಪ್ರರೋಹಂತಿಬೀಜಾನಿ ಯಥಾಭ್ರಷ್ಟಾನಿಭೂತಲೆ | ಅದ್ವೈತಭಕ್ತಿಯುಕ್ತಾನಿ ಕರ್ಮಾಣಿ ಚತಥೈವಹಿ || ಯಥಾವಂಧ್ಯಾಸ್ತ್ರಿಯೋಲೋಕೆ ಫಲಾಯನಕದಾಚನ | ತಥಾದ್ವೈತಕ್ರಿಯಾಲೋಕೆ ಫಲಾಯನಕದಾನಚ | ......ನನ್ವೈಷ್ಫಲ್ಯಂನಸಾಫಲ್ಯಂ ಕ್ರಿಯಾಣಾಮಸ್ತಿವಸ್ತುತಃ | ಸಮೌನಿಮ್ನೊನ್ನತೌನಾಭಿಕುಚೌಚಿತ್ರಪಟೇಸ್ತ್ರಿಯಾಃ || ಕ್ರಿಯಾನ್ನೈಷ್ಫಲ್ಯಸಾಫಲ್ಯೆ ಸತ್ಯದ್ವೈತೆ ತಥಾಸಮೆ | ಯಥಾನಾನಾವಿಧಾನದ್ಯೋ ನಾನಾವಿಧಜಲಾಅಪಿ | ಸ್ಯಂದಮಾನಾಇಮಾಸ್ಸರ್ವಾ ಅಕೂಪಾರಂಸಮಾಶ್ರಿತಾಃ | ತದ್ರೂಪೆಣೈವದೃಶ್ಯಂತೆ ನಾಮರೂಪೆವಿಹಾಯಚ | ತಥಾದ್ವೈತಂಸಮಾಶ್ರಿತ್ಯ ಕ್ರಿಯಾನಾನಾವಿಧಾಅಪಿ | ಅದ್ವೈತಭಕ್ತಿರೂಪೇಣ ದೃಶ್ಯಂತೆಭಕ್ತಿಯೋಗತಃ | ಕ್ರಿಯಾಕಾರಸ್ವರೂಪೇಣ ಪ್ರತೀತಾಪ್ಯೈವಸರ್ವದಾ | ನಕೇವಲಕ್ರಿಯಾಹ್ಯಸ್ಯ ಲೀಲಾಮಾತ್ರಾಸ್ವಭಾವತಃ | ಅರ್ಚನಾರ್ಪಣರೂಪೇಣ ತತ್ಸರ್ವಂತುಪ್ರತೀಯತೆ | ಲೀಲಯಾಸಕಲಾಕಾರಾ ಸ್ವಯಂಸಾಭಕ್ತಿದೇವತಾ | ಕ್ರೀಡಂತೀಸ್ವಾತ್ಮನಾತ್ಮಾನಂ ಭುಂಗ್ತೆಚೈತಚ್ಛಿವಾರ್ಪಿತಂ ||

ಪೂರ್ವೋಕ್ತವಾದ ಅದ್ವೈತಭಕ್ತಿಯಿಂದಲೇ ಸರ್ವತೋಮುಖವಾದ ಶಿವಪ್ರಸಾದವು ಸಿದ್ಧಿಸುವುದು. ಅದರಿಂದ ದೃಶ್ಯಪ್ರಪಂಚವೆಲ್ಲವೂ ತಾನಾಗಿಯೇ ತೋರುತ್ತಿರುವುದು; ಶಿವಪ್ರಸಾದದಿಂದ ಆವುದಾನೊಂದು ಕಾರ್ಯವೂ, ಆ ಕಾರ್ಯದ ಕರ್ತೃವೂ, ಕಾರ್ಯವನ್ನು ಮಾಡಿಸತಕ್ಕವನೂ, ಮಾಡುವಿಕೆಯೂ ಸಹ ತನ್ನ ರೂಪವಾಗಿಯೇ ತೋರುತ್ತಿರುವುವು. ಅದರಂತೆಯೇ ಆವುದಾನೊಂದು ಪದಾರ್ಥವನ್ನು ಭುಂಜಿಸುವವನೂ ಭುಂಜಿ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಸುವಂತೆ ಮಾಡುವವನೂ, ಭುಂಜಿಸುವಿಕೆಯೂ ಆ ಪದಾರ್ಥವು ಸಹ ತಾನಾಗಿ ತೋರುತ್ತಿರುವುದು. ಜೀವಾತ್ಮಪರಮಾತ್ಮರುಗಳೂ ಅವರ ಭೇದವೂ, ಭೇದವನ್ನು ಮಾಡತಕ್ಕವನು ಸಹ ತಾನೇ ಎಂದು ತೋರುತ್ತಿರುವುವು. ದೇಹೇಂದ್ರಿಯಗಳೂ ಪ್ರಾಣಮನೋಬುದ್ಧ್ಯಹಂಕಾರಗಳೂ ಸಹ ತಾನೇ ಆಗಿರುವುವು. ವಿಧಿನಿಷೇಧಗಳೂ ನಿಷಿದ್ಧವಸ್ತುಗಳು ಸಹ ತಾನೇ ಆಗಿರುವುವು. ಕಾಮಕ್ರೋಧಾದಿಗಳೂ ಶಮದಮಾದಿಗಳೂ ಸಹ ತಾನೇ ಆಗಿರುವುವು. ಅದುಕಾರಣ ಅಂತಹ ಅದ್ವೈತಭಕ್ತಿಯನ್ನಾಶ್ರಯಿಸಬೇಕೇ ಹೊರತು ಕ್ಲೇಶಕರವಾದ ದ್ವೈತಭಕ್ತಿಯನ್ನವಲಂಬಿಸಬಾರದು. ದ್ವೈತಭಕ್ತಿಯಲ್ಲಿ ಕೊನೆಯವರೆಗೂ ಭೇದವು ಇದ್ದೇಇರುವುದು. ಪೂಜ್ಯಪೂಜಕರುಗಳಿಗೆ ಐಕ್ಯವೇ ಇಲ್ಲ. ಕಡೆಯವರೆಗೂ ಒಂದನ್ನು ಮತ್ತೊಂದು ಪ್ರಾರ್ಥಿಸಿಕೊಂಡೇ ಇರುವುದು. ಈ ದ್ವೈತಭಕ್ತಿಯಲ್ಲಿ ಸಾಮರಸ್ಯವಿಲ್ಲದಿರುವುದರಿಂದ ಇದು ಸಂಸಾರಬಂಧವಿಮೋಚಕವಲ್ಲ. ಆ ಸಂಸಾರವನ್ನೇ ಮತ್ತಷ್ಟು ಬಲಪಡಿಸತಕ್ಕದ್ದು. ಸಾಮರಸ್ಯದಾಯಕವಾದ ಅದ್ವೈತಭಕ್ತಿಯಾದರೊ ಸಂಸಾರನಾಶವನ್ನುಂಟುಮಾಡಿ ಬಂಧವಿಮೋಚನಗೊಳಿಸುವುದು. ಅಂತಹ ನಿರ್ವಿಕಲ್ಪವಾದ ಅದ್ವೈತಭಕ್ತಿಯು ದ್ವೈತಭಕ್ತಿಗಿಂತಲೂ ಪರವಾದದ್ದು. ಇಂತಹ ಅದ್ವೈತಭಕ್ತಿಸಂಪನ್ನನಾದ ಶಿವಯೋಗಿಗೆ ಸಕಲ ಕ್ರಿಯೆಗಳೂ ಸುಟ್ಟಬಟ್ಟೆಯ ಕ್ರಿಯೆಗೆ ಸಮನಾಗಿರುವುವು. ಎಂದರೆ—ಸುಟ್ಟ ಬಟ್ಟೆಯು ಕಣ್ಣಿಗೆ ನಿಜವಾದ ಬಟ್ಟೆಯಂತೆ ಮೇಲೆತೋರುತ್ತ ನಿಂತಿದ್ದರೂ ಯಥಾರ್ಥವಾದ ಬಟ್ಟೆಯಿಂದ ಬೇಕಾದುದನ್ನು ಕಟ್ಟುವುದು ಮುಚ್ಚುವುದು ಮೊದಲಾದ ಕೆಲಸಗಳನ್ನು ಮಾಡುವಂತೆ ಈ ಸುಟ್ಟಬಟ್ಟೆಯಿಂದ ಹೇಗೆ ಮಾಡಲಾಗುವುದಿಲ್ಲವೋ ಅದರಂತೆಯೇ ಅದ್ವೈತಭಕ್ತಿಸಂಪನ್ನನಾದ ಯೋಗಿಗೆ ಯಾವ ಕ್ರಿಯೆಗಳೂ ಫಲಜನಕಗಳಾಗಿರುವುದಿಲ್ಲ. ಫಲೇಚ್ಛೆಯಿಂದ ಮಾಡುವ ಕರ್ಮವು ಪ್ರತಿಬಂಧಕವಾಗುವುದೆಂಬ ಸಂಗತಿಯನ್ನು ಹಿಂದೆಯೇ ತಿಳಿಸಿದೆ. ಅದುಕಾರಣ ಫಲೇಚ್ಛಾಸಹಿತವಾದ ಕ್ರಿಯೆಯನ್ನಾಚರಿಸಬಾರದು. ಫಲೇಚ್ಛೆಯಿಲ್ಲದ ಕೇವಲ ಕ್ರಿಯೆಯನ್ನಾಚರಿಸುವುದರಿಂದ ಬಾಧಕವಿಲ್ಲ. ಏಕೆಂ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ದರೆ—ಚಿತ್ರಪಟವು ಸ್ತ್ರೀವಿಲಾಸದರ್ಶಕವಾದರೂ ಅದರಿಂದ ಫಲವಿಲ್ಲ. ಜಳ್ಳುಬೀಜವನ್ನು ಬಿತ್ತಿದರೂ ಅದು ಫಲಿಸುವುದಿಲ್ಲ. ಇದರಂತೆಯೇ ಅದ್ವೈತಭಕ್ತಿಯುಕ್ತನಾದ ಶಿವಯೋಗಿಯ ಕ್ರಿಯೆಗಳು ಫಲಾಭಿಸಂಧಿರಹಿತಗಳಾಗಿರುವುದರಿಂದ ಅವಕ್ಕೆ ಪ್ರತಿಬಂಧಕತ್ವವಿಲ್ಲ. ಬಂಜೆಹೆಂಗುಸು ಮಕ್ಕಳನ್ನು ಎಂದಿಗೂ ಹೆರದಿರುವಂತೆ ಅದ್ವೈತಕ್ರಿಯೆಗೆ ಎಂದಿಗೂ ಫಲವಿಲ್ಲ. ಆದರೆ ಕ್ರಿಯಾಸಾಮಾನ್ಯಕ್ಕೂ ಕೇವಲ ನಿಷ್ಫಲತ್ವವೇ ಆಗಲಿ ಕೇವಲ ಸಫಲತ್ವವೇ ಆಗಲಿ ಉಂಟೆಂದು ಭಾವವಲ್ಲ. ಅದ್ವೈತವನ್ನೊಳಗೊಳ್ಳದ ಕ್ರಿಯೆಗೆ ತಕ್ಕ ಫಲಾಫಲಗಳು ಸಿದ್ಧಿಸುವುದು ಸಹಜವೇ ಆಗಿದೆ. ಬೇರೆಬೇರೆ ನದಿಗಳಲ್ಲೂ ಕೊಳಗಳಲ್ಲೂ ಕೆರೆಗಳಲ್ಲೂ ತುಂಬಿರುವ ನೀರಿಗೆ ಆಯಾಯ ಭೂಗುಣಕ್ಕೆ ಅನುಸಾರವಾದ ರುಚಿಯು ಸಿದ್ಧವಾಗಿರುವಂತೆ ದ್ವೈತಕ್ರಿಯೆಗೆ ನಾನಾವಿಧದ ಫಲಗಳು ಸಿದ್ಧವಾಗಿಯೇ ಇರುವುವು. ಅಂತಪ್ಪ ಹೊಳೆ ಕೆರೆ ಕೊಳಗಳ ನೀರೆಲ್ಲ ಸಮುದ್ರಕ್ಕೆ ಸೇರಿದಬಳಿಕ ಅಲ್ಲಿನ ನೀರಿನಲ್ಲಿ ಇದು ಸೀನೀರು ಇದು ಉಪ್ಪುನೀರು, ಇದು ಬಗ್ಗಡ, ಇದು ನಿರ್ಮಲವೆಂಬುದೇ ಮೊದಲಾದ ಪ್ರತೀತಿಯು ಹೇಗೆ ಹುಟ್ಟದೋ ಅದರಂತೆಯೇ ಚಿತ್ರಪಟದ ಮೇಲೆ ಸ್ತ್ರೀವ್ಯಕ್ತಿಯನ್ನು ಬರೆದಿರುವಾಗ ಒಂದುಕಡೆ ಉಬ್ಬಾಗಿಯೂ ಒಂದು ಕಡೆ ಹಳ್ಳವಾಗಿಯೂ ತೋರುತ್ತಿದ್ದರೂ ಕೈಯಿಟ್ಟು ಸವರಿದಾಗ ನಿಜಸ್ಥಿತಿಯಲ್ಲಿ ಎಲ್ಲವೂ ಹೇಗೆ ಒಂದೇ ಸಮನಾಗಿರುವುದೋ ಅದರಂತೆಯೇ ಲೀಲಾಮಾತ್ರದ ಅದ್ವೈತಕ್ರಿಯೆಗೆ ಫಲಸಾಧಕತೆ ಯಿರುವುದಿಲ್ಲ. ಆದುಕಾರಣ ಶಿವಯೋಗಿಗೆ ಫಲೇಚ್ಛೆಯಿಲ್ಲದಿರುವುದರಿಂದ ಅವನು ಶಿವಲಿಂಗಾರಾಧನೆಯನ್ನು ಮಾಡುತ್ತಿದ್ದರೂ ಅದು ಫಲಸಾಧಕವಲ್ಲ. ಅದು ಲೀಲಾಮಾತ್ರವಾದದ್ದು. ಭಕ್ತಿರೂಪವಾದದ್ದು ಎಂದು ಅರಿಯಬೇಕು.

ಪೂರ್ವೋಕ್ತವಾದ ಶಿವಾದ್ವೈತಭಕ್ತಿಸಂಪನ್ನನಾದ ವೀರಶೈವನಿಗೆ ಪಾಪಪುಣ್ಯಕರ್ಮಲೇಪಾದಿಗಳೊಂದೂ ಇರುವುದಿಲ್ಲ. ಆಕಾಶದಲ್ಲಿ ಕತ್ತಲೆ ಬೆಳಕುಗಳು ತೋರುತ್ತಿದ್ದರೂ ಆ ಆಕಾಶಕ್ಕೆ ಕತ್ತಲೆ ಬೆಳಕುಗಳ ಲೇಪವಿಲ್ಲದೆ ಅದುಹೇಗೆ ಶುದ್ಧವಾಗಿರುವುದೋ ಅದರಂತೆಯೇ ಶಿವಾದ್ವೈತ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಭಕ್ತನು ನಿರ್ಲೇಪಕನಾಗಿರುವನು. ಕತ್ತಲೆ ಬೆಳ್ದಿಂಗಳುಗಳ ಪ್ರಸಕ್ತಿಯು ರಾತ್ರಿಯ ಕಾಲದಲ್ಲೇ ಹೊರ್ತು ಹಗಲಹೊತ್ತು ಹೇಗಿಲ್ಲವೋ ಅದರಂತೆಯೇ ಪಾಪಪುಣ್ಯಸಂಬಂಧವು ಕರ್ಮಮತದಲ್ಲೇ ಹೊರ್ತು ಶಿವಾದ್ವೈತ ಭಕ್ತಿಮತದಲ್ಲಿಲ್ಲ. ಕತ್ತಲೆ ಬೆಳ್ದಿಂಗಳುಗಳಗೆ ಹೊರತಾದ ಬಿಸಿಲುಮಾತ್ರ ಹಗಲಿನಲ್ಲಿರುವಂತೆ ಅದ್ವೈತಭಕ್ತಿಯೋಗದಲ್ಲಿ ಪಾಪಪುಣ್ಯಗಳಿಗೆ ವಿಲಕ್ಷಣವಾದ ಶೈವಪ್ರಭಾವವು ಪ್ರಕಾಶಿಸುತ್ತಿರುವುದು. ಹಗಲಿನಲ್ಲಿ ಸೂರ್ಯನು ಹೊಳೆಯುತ್ತಿರುವಂತೆ ಶಿವಭಕ್ತಿಯಲ್ಲಿ ಈಶ್ವರನು ಪ್ರಕಾಶಿಸುತ್ತಾನೆ. ಬಿಸಿಲು ಉಷ್ಣಲಕ್ಷಣವುಳ್ಳದ್ದು. ಶೈವವು ಜ್ಞಾನೈಕಲಕ್ಷಣವುಳ್ಳದ್ದಾಗಿರುವುದು. ರಾತ್ರಿಯಲ್ಲಿ ಕತ್ತಲೆ ಬೆಳ್ದಿಂಗಳುಗಳೆರಡೂ ಇರಬಹುದಾದುದರಿಂದ ಕತ್ತಲೆ ಬೆಳ್ದಿಂಗಳುಗಳಿಗೆರಡಕ್ಕೂ ಮೈತ್ರಿಯನ್ನೇ ಹೇಳಬೇಕು. ಅದರಂತೆಯೇ ಅಜ್ಞಾನಲಕ್ಷಣವಿಶಿಷ್ಟವಾದ ಕರ್ಮದಲ್ಲಿ ಪಾಪಪುಣ್ಯಗಳ ಸಂಬಂಧವಿರುವುದರಿಂದ ಇವೆರಡಕ್ಕೂ ಮೈತ್ರಿಯನ್ನು ಹೇಳಬೇಕಾಗುವುದು. ಏತೇನ ಅದ್ವೈತಭಕ್ತಿಪದದಲ್ಲಿ ಪಾಪಪುಣ್ಯಲೇಶಸಂಬಂಧವಿಲ್ಲವೆಂಬುದು ಸಿದ್ಧಾಂತವು.

ಶಿವಜ್ಞಾನದಿಂದ ಮೋಕ್ಷಸಿದ್ಧಿಯೆಂಬ ಸಂಗತಿಯು ಮೇಲೆಯೇ ಹೇಳಲ್ಪಟ್ಟಿದೆಯಷ್ಟೆ. ಅಂತಹ ಮೋಕ್ಷಕ್ಕಿಂತಲೂ ಪರವಾದದ್ದು ಶಾಂಭವಭಕ್ತಿಯೆಂಬುದು ವೀರಶೈವೀಯಮತವು. ಅದುಕಾರಣವೇ ವೀರಶೈವರಲ್ಲಿ—

"ಧರ್ಮಾದಿಪುರುಷಾರ್ಥಾನಾಂ ಚತುರ್ಣಾಂಪರತಃಪರಾ |
ಪಂಚಮಃಪುರುಷಾರ್ಥೋಽಹಿಭಕ್ತಿಶ್ಶೈವೀಸನಾತನೀ ||"

ಎಂಬ ಅಭಿಯುಕ್ತವಚನವುಂಟಾಗಿರುವುದು. ಈ ಭಕ್ತಿಯು ಸ್ವತಂತ್ರವಾದದ್ದು, ನಿರುತ್ತರವಾದದ್ದು. ಇಹಪರಲೋಕ ಸುಖಗಳ ಮತ್ತು ಗಮನಾಗಮನಗಳ ಭೇದಗಳಿಲ್ಲದೆ ಸದಾ ಸಂಪೂರ್ಣವೈಭವದಿಂದಿರುತ್ತಿರುವುದು ಭಕ್ತಿಯು. ಇಂತಹ ಭಕ್ತಿಮಂಡಿತರಾದ ಶಿವಶರಣರಲ್ಲಿ ಕೆಲವರು ತಮ್ಮ ಸೂಕ್ಷ್ಮಶರೀರ ರೂಪಿನಿಂದ ಶಿವಸ್ಥಾನವನ್ನು ಹೊಂದಿರುವರು. ಕೆಲವರು ಈ ಸ್ಥೂಲಶರೀರದಿಂದಲೇ ಶಿವಪದವನ್ನಡರಿರುವರು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಕೆಲವರು ತಮ್ಮ ಹೆಂಡಿರು ಮಕ್ಕಳು ನೆಂಟರು ಮನೆವೇತಗಳನ್ನೆಲ್ಲ ಕಟ್ಟಿಕೊಂಡು ಶಿವಲೋಕಕ್ಕೆ ತೆರಳಿರುವರು. ಕೆಲವರು ತಮ್ಮೊಡನೆ ತಮ್ಮ ಗ್ರಾಮದೇಶಕೋಶಪರಿಜನಗಳನ್ನೆಲ್ಲ ಕೂಡಿಕೊಂಡು ಕೈಲಾಸಕ್ಕೆ ಹೋಗಿರುವರು. ಕೆಲವರು ಎಲ್ಲವನ್ನೂ ಬಿಟ್ಟು ತಾವೇ ಹೋಗಿರುವರು. ಪ್ರಾಣಾದಿವಸ್ತು ವಿಷಯಗಳಲ್ಲಿ ಅನುರಾಗವುಳ್ಳ ಕೆಲವು ಭಕ್ತರು ಅವುಗಳನ್ನೆಲ್ಲ ಕಟ್ಟಿಕೊಂಡೇ ಶಿವೈಕ್ಯರಾಗಿರುತ್ತಾರೆ. ಅವುಗಳ ಮೇಲಣ ಅನುರಾಗವನ್ನೆಲ್ಲ ಬಿಟ್ಟಿರುವವರು ತಾವು ಮಾತ್ರವೇ ಶಿವೈಕ್ಯರಾಗಿರುತ್ತಾರೆ. ಅದುಕಾರಣ ತನ್ನ ಸ್ವಾತಂತ್ರ್ಯದಿಂದ ಪರಮಸುಖವನ್ನು ಸ್ವೇಚ್ಛೆಯಾಗಿ ಅನುಭವಿಸಲು ಎಡೆಗುಡದ ಈ ಪರಮಗುರುವಾದ ಶಿವಾದ್ವೈತಭಕ್ತಿಯೇ ಪಂಚಮಪುರುಷಾರ್ಥವೆಂದು ಭಾವಿಸಲ್ಪಡುವುದು.

"ಭಕ್ತಿರೇವಪರಮಾರ್ಥದಾಯಿನೀ ಭಕ್ತಿರೇವಪರತತ್ತ್ವವೇದಿನೀ| ಭಕ್ತಿರೇವಭವದೋಷಹಾರಿಣೀಭಕ್ತಿ ರೇವಶಿವಭಾವಕಾರಿಣೀ" ಅನುರಾಗಪರಾಭಕ್ತಿ ರ್ವಿಷಯೇಷುವಿಶುದ್ಧಧೀರ್ವಿರಾಗಪರಾ | ಅನುರಾಗೇನವಿರಾಗೇನ ಸಂತತಂಭಕ್ತಿರೇವನಿರ್ಲೇಪಾ || ಅಂತರ್ಲೇಪಬಹಿರ್ಲೇಪ ತ್ಯಾಗಗ್ರಹಣಯೋಸ್ಸಮಾ | ವಿಷಯಾಣಾಂವಿಷಯಿಣಾಮನುರಾಗವಿರಾಗಿಣಾಂ || ತಸ್ಮಾದ್ಭಕ್ತಿರ್ನಗೃಹ್ಣಾತಿ ನಜಹಾತಿಕಿಮಪ್ಯಸೌ | ಅನುರಾಗೇಣಯದ್ವಸ್ತು ವಿರಾಗೇಣಾಪಿಶಾಂಭವೀ || ಯಥಾತಮಃಪ್ರಕಾಶಾಭ್ಯಾಂ ಯುಕ್ತೆಸ್ಯಾಕಾಶವಿತಯೋಃ | ನಿರ್ಲೇಪತಸ್ಸಶುದ್ಧಾತ್ಮಾ ತಥಾತಾಭ್ಯಾಂತಯೋಶ್ಚಸಾ || ತಮೋಜ್ಯೋತ್ಸ್ನಾಪ್ರವೃತ್ತಿರ್ಹಿರಾತ್ರಾವೇವನಚಾಹನಿ | ಪುಣ್ಯಪಾಪೋಭಯಂಕರ್ಮಮತೇಭಕ್ತಿಮತೇಕುತಃ || ಅಹನ್ಯಾತಪಏವಾಸ್ತೆ ತಮೋಜ್ಯೋತ್ಸ್ನಾವಿಲಕ್ಷಣೆ || ತಥಾಭಕ್ತಿಪದೆಶೈವಂ ಪುಣ್ಯಪಾಪವಿಲಕ್ಷಣೆ | ಅಹನ್ಯಹಸ್ಕರೋಭಾತಿಭರ್ಗೋಭಕ್ತಿಪದೇತಯೋಃ ಪ್ರಭಾವೋಹ್ಯಾತಪಶ್ಚೈವ ಮಿತ್ಯೇತದುಭಯಂಮತಂ || ಜ್ಞಾನೈಕಲಕ್ಷಣಂಶೈವ ಮಿತ್ಯೇತದುಭಯಂಮತಂ | ಜ್ಞಾನೈಕಲಕ್ಷಣಂಶೈವ ಮುಕ್ತಲಕ್ಷಣಲತಪಃ || ತಮಶ್ಚಂದ್ರಿಕಯೋಸ್ಸಖ್ಯ ಮುಭಯೋಶ್ಚೈಕ್ಯಲಕ್ಷಣಾತ್ | ರಾತ್ರಾವ್ಯವಸ್ಥಿತಶ್ಚಾಪ್ಯತ್ರ ತದ್ವದಜ್ಞಾನಲಕ್ಷಣಾತ್ |ಕರ್ಮ

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ನ್ಯೇವಸ್ಥಿತತ್ವಾಚ್ಚ ಸಖ್ಯಂಸ್ಯಾಪಾಪಪುಣ್ಯಯೋಃ । ತಸ್ಮಾದ್ಭಕ್ತಿಪದೇ ಪಾಪಪುಣ್ಯಯೋರ್ನೈವವರ್ತತೇ । ಅತಏವಪರಾಯಾಂತು ಭಕ್ತೌನಚಶುಭಾಶುಭೇ । ಜ್ಞಾನಂಪ್ರಸಾದಾದೇವಸ್ಯಾದಿತ್ಯೇಷಾಶಾಂಭವೀಸ್ಥಿತಿಃ । ಜ್ಞಾನಾದೇವಹಿಮೋಕ್ಷಸ್ಸ್ಯಾನ್ಮೋಕ್ಷಾದುಪರಿಶಾಂಭವೀ । ಭಕ್ತಿರ್ಗುರುತರಾಭಾತಿ ಸ್ವತಂತ್ರಾನಿಜಲೀಲಯಾ । ಧರ್ಮಾದಿಪುರುಷಾರ್ಥಾಣಾಂ ಚತುರ್ಣ್ಣಾಂಪರತಃಪರಾ । ಪಂಚಮಃಪುರುಷಾರ್ಥೋಹಿ ಭಕ್ತಿಶ್ಶೈವೀಸನಾತನೀ । ಲೋಕಯೋರುಭಯೋರೈಹಿಕಾಮುಷ್ಮಿಕಪದಾರ್ಥಯೋಃ । ಗಮಾಗಮಾವಿನ್ನೈವಾಸ್ತೆ ಭಕ್ತಿಸ್ಸಂಪೂರ್ಣನೈಭವಾ । ಭಾವಾನುರೂಪಫಲದಾ ಸ್ವಾಶ್ರಿತಾಂಫಲೈಷಿಣಾಂ । ಉತ್ತರೋತ್ತರರೂಪೇಣ ಭಕ್ತಿಃಪೂರ್ಣ್ಣಾನಿರುತ್ತರಾ ॥ ಕೇಚಿತ್ಪ್ರಾಣೈಸ್ಸಹಶಿವಪದಂಕೇಚಿದಾತ್ಮೀಯಕಾಯೈಃ ಕೇಚಿದ್ದಾರೈರ್ನಿಜತನುಭವೈರ್ಮಂದಿರೈರ್ಬಂಧುವರ್ಗೈಃ । ಗ್ರಾಮೈರ್ದೇಶೈಸ್ಸಹಪರಿಜನೈಃ ಕೇಚಿದನ್ಯಕ್ರಮೇಣ ತ್ಯಕ್ತ್ವಾಚೈತತ್ಸಕಲಮಪಿಯಾಂತಿ ಸ್ವಯಂಚೈವಭಕ್ತಾಃ ॥ ಪ್ರಾಣಾದಿವಸ್ತುವಿಷಯೇಷ್ವನುರಾಗಯುಕ್ತಾಭಕ್ತಾಃ ಪ್ರಯಾಂತಿಕತಿಭಿಸ್ಸಹತೈಶ್ಶಿವೈಕ್ಯಂ । ಕೇಚಿದ್ವಿರಾಗನಿರತಾವಿಷಯೇಷು ತೇಷುತ್ಯಕ್ತ್ವಾಚತಾನ್ ಶಿವಪದಂಸ್ವಯಮೇವ ಯಾಂತಿ ॥

ಈ ಮೇಲೆ ಹೇಳಲ್ಪಟ್ಟ ಪ್ರಮಾಣಾನುಸಾರವಾಗಿ ಅದ್ವೈತಭಕ್ತಿ ತತ್ಪರನಾದ ವೀರಶೈವನಿಗೆ ಪಾಪಪುಣ್ಯೋಭಯಕರ್ಮಲೇಪವು ಲೇಶಮಾತ್ರವೂ ಇರುವುದಿಲ್ಲ. ಜ್ಞಾನೈಕಲಕ್ಷಣವಾದ ವೀರಶೈವ ಮತದಲ್ಲಿ ವಿಹರಿಸುವವನು ಮೇಲೆ ಹೇಳಲ್ಪಟ್ಟ ರೀತಿಯಿಂದ ಷಟ್ಸ್ಥಲಮಾರ್ಗಕ್ರಮಣಧುರೀಣನಾಗಿ ಇರಬೇಕು. ಈ ಷಟ್ಸ್ಥಲ ತತ್ವವನ್ನು ತಿಳಿಯದವನು ವಿಭೂತಿ ರುದ್ರಾಕ್ಷ ಶಿವಲಿಂಗಾದಿಧಾರಣದಿಂದ ಸಂಪನ್ನನಾಗಿದ್ದರೂ ನಾಮಮಾತ್ರಕ್ಕೆ ವೀರಶೈವನೇಹೊರ್ತು ಯಥಾರ್ಥ ವೀರಶೈವನಲ್ಲ. ಯಾವನು ಪೂರ್ವೋಕ್ತ ಷಟ್ಸ್ಥಲಕ್ರಿಯಾಸಂಪನ್ನನೋ ಅವನೇ “ ಏಕೇನಜನ್ಮನಾಮುಕ್ತಿರ್ವೀರಾಣಾಂತು ಮಹೇಶ್ವರಿ ” ಎಂಬ ಶಿವಾಗಮವಚನದಂತೆ ಒಂದೇ ಜನ್ಮದಲ್ಲಿ ಮುಕ್ತನಾಗುವ ವೀರಶೈವನೆಂದರಿಯಬೇಕು.

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

ಅದುಕಾರಣವೇ ಪರಶಿವನು ಪಾರ್ವತಿಗೆ ಷಟ್ಸ್ಥಲತತ್ತ್ವವನ್ನೆಲ್ಲ ಉಪದೇಶಿಸಿ, ಕಡೆಗೆ "ವೀರಶೈವಪರೋಭೂತ್ವಾ ಯಜೇನ್ಮಾಂ ಲಿಂಗರೂಪಿಣಂ| ಸಏವಸರ್ವತತ್ವಜ್ಞೋಜ್ಞೇಯಸ್ಸರ್ವೋತ್ತಮೋತ್ತಮಃ" ಯಾವನು ವೀರಶೈವ ಧರ್ಮತತ್ಪರನಾಗಿ ನನ್ನನ್ನು ಲಿಂಗರೂಪವನ್ನಾಗಿ ತಿಳಿದು ಆರಾಧಿಸುವನೋ ಅವನೇ ಸರ್ವತತ್ತ್ವಜ್ಞ ಸರ್ವೋತ್ತಮನೆಂದು ತಿಳಿಯಲ್ಪಡತಕ್ಕವನೆಂದು ಹೇಳಿರುವುದಲ್ಲದೆ, ಸ್ಕಾಂದದಲ್ಲಿ "ಕ್ರಿಮಿಕೀಟಪತಂಗೇಭ್ಯಃ ಪಶವಃಪ್ರಜ್ಞಯಾಧಿಕಾಃ | ಪಶುಭ್ಯೋಽಪಿ ನರಾಶ್ಶ್ರೇಷ್ಠಾಃ" ಎಂದಾರಂಭಿಸಿ, "ಲಿಂಗಾಂಗಸಂಗಿಷ್ವಧಿಕ ಷ್ಷಟ್ಸ್ಥಲಜ್ಞಾನವಾನ್ಪುಮಾನ್ | ತಸ್ಮಾದಪ್ಯಧಿಕೋನಾಸ್ತಿತ್ರಿಷುಲೋಕೇಷುಸರ್ವದಾ| ಸವಂದ್ಯಸ್ಸರ್ವದಾಪೂಜ್ಯಸ್ಸಂಸಾರವಿಜಿಗೀಷುಭಿಃ| ಬಹುನೋಕ್ತೇನಕಿಂವತ್ಸಸಏವಾಹಂನಸಂಶಯಃ" ಎಂಬದಾಗಿ ಪರಶಿವನು ಷಣ್ಮುಖನನ್ನು ಕುರಿತು:— ಕ್ರಿಮಿಕೀಟ ಪಶುಗಳೆಲ್ಲಕ್ಕಿಂತಲೂ ಮನುಷನು, ಅವರಲ್ಲೆಲ್ಲ ಲಿಂಗಧಾರಿಗಳು, ಅವರಲ್ಲೂ ಷಟ್ಸ್ಥಲಜ್ಞಾನಿಯು ಸರ್ವೋತ್ತಮನೆಂತಲೂ, ಅಂತಹ ಷಟ್ಸ್ಥಲಜ್ಞಾನಿಯಾದ ಮನುಷ್ಯನೇ ನಾನೆಂತಲೂ, ಅವನಿಗೂ ನನಗೂ ಭೇಧವಿಲ್ಲವೆಂತಲೂ ಅಪ್ಪಣೆ ಕೊಡಿಸಿದನು. ಆದುಕಾರಣ, ಇಂತಹ ಷಟ್ಸ್ಥಲಜ್ಞಾನ ಸಂಪಾದನೆಗೆ ತಕ್ಕಧಿಕಾರವನ್ನು ಗುರುವಿನಿಂದ ಶಿವದೀಕ್ಷಾಸಂಸ್ಕಾರದಮೂಲಕ ಪಡೆದಿರುವ ಪ್ರತಿಯೊಬ್ಬ ವೀರಶೈವನೂ ಅಧಿಕೃತವಾದ ತನ್ನ ಈ ಜನ್ಮದಲ್ಲಿ ಅಂತಹ ದಿವ್ಯಜ್ಞಾನಸಂಪಾದನೆಯನ್ನು ಮಾಡಿ, ಜನ್ಮಸಾರ್ಥಕ್ಯವನ್ನುಂಟುಮಾಡಿಕೊಳ್ಳಬೇಕೆಂಬುದೇ ಈ ಷಟ್ಸ್ಥಲಸಿದ್ಧಾಂತರಹಸ್ಯದ ಸಂಕ್ಷಿಪ್ತವಾದ ಉಪನ್ಯಾಸದ ಉದ್ದೇಶವು.

SADGURU VISHWARADHYA SIMHASAN JNANAMANDIR LIBRARY Jangamwadi Math, Varanasi

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. 3929
1126

CC-0. Public Domain. Jangamwadi Math Collection, Varanasi

Digitized by eGangotri and Sarayu Trust. Funding by of-IKS

CC-0. Public Domain. Jangamwadi Math Collection, Varanasi

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	(ವಿ.ಪಿ. ಇಂದ)
ವೀರಶೈವ ಶಿವಪೂಜಾವಿಧಿಃ	೨-೧೨-೦	೧- ೨-೦
ಸಟೀಕ ವೀರಶೈವ ವಿವಾಹವಿಧಿಃ	೦- ೮-೦	೨-೧೪-೦
ಚಾರುಶೀಲೆ ಚರಿತ್ರೆ	೦- ೫-೦	೦-೧೦-೦
ಹರಿದಾಸಿ	೦- ೪-೦	೦- ೯-೦
ವ್ರತಪಂಜಕ	೦- ೪-೦	೦- ೯-೦
ಷಟ್ಸ್ಥಲವಿದ್ಯಾ	೦- ೪-೦	೦- ೯-೦
ಗುರುಶಂಕರೇಶ್ವರಶತಕ	೦- ೧-೦	೦- ೩-೦